Editor: **S.Y.GURUSHANTH** Publisher: **G.N.NAGARAJ**

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-36 | ಸೆಪ್ಟೆಂಬರ್ 01-07, 2025 | ಪುಟ 16 | ರೂ.10
Volume-19 | Issue-36 | September 01-07, 2025 | Pages 16 | Price 10/-

ಘನತೆಯ ಬದುಕು ನಮ್ಮ ಹಕ್ಕು

AIDWA

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

12 ನೇ ರಾಜ್ಯ ಸಮ್ಮೇಳನ

ಆಗಸ್ಟ್ 30,31-ಸೆಪ್ಟೆಂಬರ್ 1, 2025
ಸಿಂಧನೂರು, ರಾಯಚೂರು



ಮಹಿಳೆ : ಜೀವ ಕೊಡುವ ಜೀವವಿದು ಕಡಿಮೆ ಯಾರಿಗೆ?

ಮಲೆಗಾಂವ್ ಬಾಂಬ್ ಸ್ಫೋಟ ಇವರು ಅಮಾಯಕರೆ?





ಸಲ್ವಾ ಜುಡುಂ ಪ್ರಕರಣ: ಉಪರಾಷ್ಟ್ರಪತಿ ಚುನಾವಣೆಯಲ್ಲಿ ಗೃಹಮಂತ್ರಿಗಳ ದ್ವೇಷ ಪ್ರಚಾರ

ಟ್ರಂಪ್ ರನ್ನು ತಡೆಯಲಾಗದ್ದಕ್ಕೆ ಭಾರತದ ಹತ್ತಿ ರೈತರಿಗೆ ಶಿಕ್ಷೆ



ಜೆ.ಎನ್. ಕಾಲಂ

ಭಾಗ 36

ಮತದಾನದ ಹಕ್ಕಿಗಾಗಿ ಮಹಾ ಮುಷ್ಕರ:

10 ಗಂಟೆ ಕೆಲಸದ ಅವಧಿಯ ಸಾಧನೆ

ವಿಜಯೀಭವ ವಿಜಯೀಭವ
ಮತಾಧಿಕಾರ ಹಕ್ಕಿನ ಘೋಷಣೆಗೆ ವಿಜಯೀಭವ
ಜಯಮಕ್ಕೆ ಜಯಮಕ್ಕೆ ಚಾರ್ಟರ್‌ಗೆ ಜಯಮಕ್ಕೆ
ದಬ್ಬಾಳಿಕೆಗಾರ ರಾಜನಿಗೆ ಬರಲಿ ಬೇಗ ಸಾವು
ಮತಾಧಿಕಾರ ಹಕ್ಕಿಗಾಗಿ
ಕೈಗಳ ಜೊತೆ ಕೈಯನ್ನು ಜೋಡಿಸುವೆವು
ಜಯ ಜಯವಾಗಲೆಂದು ಹಾಡುವೆವು

ಹಾರಲಿ ಹಾರಲಿ ಚಾರ್ಟಿಸ್ಟ್ ಧ್ವಜವು ಹಾರಲಿ
ಬ್ರಿಟನ್ನಿನ ಎತ್ತರದ ಬೆಟ್ಟದ ಮೇಲೆ ಹಾರಾಡಲಿ
ಮತಾಧಿಕಾರದ ಘರ್ಜನೆ ಪ್ರತಿಧ್ವನಿಗೊಳ್ಳಲಿ
ದಬ್ಬಾಳಿಕೆಗಾರರ ಕಿವಿಯೊಡೆಯಲಿ
ಹೋರಾಟಗಾರರ ಒಗ್ಗಟ್ಟನ್ನು ಒಡೆಯುವವರ
ಎದೆಯೊಡೆಯಲಿ
ಏಳಿ ಎದ್ದೇಳಿ ಸ್ವಾತಂತ್ರ್ಯ, ಸಮಾನತೆಯ ಉನ್ನತ ಗುರಿ
ಇಂಗ್ಲೆಂಡಿನಲ್ಲಿ ಸಾಧಿಸುವವರೆಗೂ ನಿಲ್ಲದಿರಿ



PROCESSION ATTENDING THE GREAT NATIONAL PETITION OF 3,317,702, TO THE HOUSE OF COMMONS, 1842.

ಚಾರ್ಟಿಸ್ಟ್ ಹಾಡುಗಳಿವು. ಸಾವಿರಾರು ಚಾರ್ಟಿಸ್ಟ್ ಹಾಡುಗಳು ಇಂಗ್ಲೆಂಡ್‌ನ ನಗರ ಪಟ್ಟಣಗಳಲ್ಲಿ, ಕೈಗಾರಿಕಾ ಸ್ಲಂಗಳಲ್ಲಿ ಈ ಹಾಡುಗಳು ಮೊಳಗಿದವು. ಹತ್ತು ಹಲವು ನಾಯಕರು ತಮ್ಮ ಬೆಂಕಿಯುಗುಳುವ ನುಡಿಗಳಿಂದ ಎಚ್ಚರ ಮೂಡಿಸಿದರು. ಕಾರ್ಮಿಕರಲ್ಲಿ ಮೂಡಿದ ಎಚ್ಚರ, ಲಕ್ಷಗಟ್ಟಲೆ, ದಶಗಟ್ಟಲೆ ಕಾರ್ಮಿಕರು ನೆರೆದ ಪರಿ ನೋಡಿ ಬಂಡವಾಳಗಾರರ ಎದೆಯಲ್ಲಿ ನಡುಕ ಮೂಡಿತು.

ಬಂಡವಾಳಗಾರರ ಕುತಂತ್ರಗಳು

ಸಂಸತ್ತಿನಲ್ಲಿನ ಎರಡೂ ಪ್ರಧಾನ ಪಕ್ಷಗಳೂ ಮತದಾನ ಸುಧಾರಣೆಗಾಗಿ ಮೂರು ದಶಕಗಳ ಕಾಲ ನಾಯಿ, ಬೆಕ್ಕುಗಳಂತೆ ಕಚ್ಚಾಡಿದರು. ವಿಗ್‌ಗಳು ಕಾರ್ಮಿಕರ, ದುಡಿಯುವ ಜನರನ್ನೂ ಈ ಹೋರಾಟಕ್ಕೆ ಸೆಳೆದರು. ಆದರೆ ಕಾರ್ಮಿಕರು ಸಾರ್ವತ್ರಿಕ ಮತದಾನದ ಆರು ಒತ್ತಾಯಗಳ ಹಲವು ಹತ್ತು ಲಕ್ಷ ಜನರ ಸಹಿಯುಳ್ಳ ಚಾರ್ಟರ್ ವಿಷಯದಲ್ಲಿ ಎರಡೂ ಪಕ್ಷಗಳೂ ಪರಸ್ಪರ ಹೆಗಲ ಮೇಲೆ ಹಾಕಿ ಮೈತ್ರಿಯನ್ನು ಮೆರೆದರು. ಕ್ಷಣ ಮಾತ್ರದಲ್ಲಿ ತಿರಸ್ಕರಿಸಿಯೇ ಬಿಟ್ಟರು.

ವರ್ಷಗಟ್ಟಲೆಯ ಶ್ರಮ, ಮನದಾಳದ ಬಯಕೆ ವಿಫಲವಾದುದರಿಂದ ದಶಲಕ್ಷಾಂತರ ಕಾರ್ಮಿಕರಿಗೆ ಬಹಳ ಬೇಸರವಾಯಿತು. ಸಿಟ್ಟೂ ಬಂತು. ಉತ್ತರ ಬ್ರಿಟನ್‌ನ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರ ಮಾಡಲು, ದಂಗೆ ಏಳಲು ಗುಟ್ಟಾಗಿ ತೀರ್ಮಾನಿಸಿದರು. ಆದರೆ ಸರ್ಕಾರದ ಗುಪ್ತಚಾರರು ಕಾರ್ಮಿಕ ಸಂಘಗಳ ಒಳಹೊಕ್ಕು ತಿಳಿದುಕೊಂಡರು. ಹಲವು ಕೇಂದ್ರಗಳಲ್ಲಿ ಒಟ್ಟಾಗಿ ಸ್ಫೋಟಗೊಳ್ಳಬೇಕಾದ ಯೋಜನೆಯನ್ನು ವಿಫಲಗೊಳಿಸಲು ಒಂದು ಪ್ರದೇಶದಲ್ಲಿ ಮೊದಲೇ ಕಾರ್ಮಿಕರನ್ನು ಮುಷ್ಕರ ಹೂಡುವಂತೆ ಕುತಂತ್ರ ಮಾಡಿದರು. ಅಲ್ಲಿ ಕಾರ್ಮಿಕರ ಮೇಲೆ ದೌರ್ಜನ್ಯ ಎಸಗಿದರು. ಇದರಿಂದ ಹಲವು ಪ್ರದೇಶಗಳು ಹಿಂದೆಗೆಯುವ ಅನಿವಾರ್ಯತೆ ಉಂಟಾಯಿತು.

ಅದೇ ಸಮಯದಲ್ಲಿ ಕಾರ್ಮಿಕರ ಸಂಘರ್ಷಾತ್ಮಕ ಹೋರಾಟಕ್ಕೆ ಹೆದರಿ, ತಾವೂ ಮತಾಧಿಕಾರ ವಂಚಿತರಾಗಿ ಚಾರ್ಟಿಸ್ಟ್ ಹೋರಾಟದ ಭಾಗವಾಗಿದ್ದ ಕೆಳ ಮಧ್ಯಮ ವರ್ಗದವರು, ಪುಟ್ಟ ಬಂಡವಾಳಶಾಹಿ ವರ್ಗ ಈ ಹೋರಾಟದಿಂದ ಹೊರ ನಡೆದು, ತಮ್ಮದೇ "ಸಾರ್ವತ್ರಿಕ ಮತಾಧಿಕಾರ" ಎಂಬ ಸಂಘಟನೆ ರೂಪಿಸಿಕೊಂಡು ಚಾರ್ಟಿಸ್ಟ್ ಹೋರಾಟವನ್ನು ವಿಭಜಿಸಲು ಪ್ರಯತ್ನಿಸಿದರು.

ಈ ಹಿನ್ನಡೆಗಳಿಂದ ಕಾರ್ಮಿಕರು ಧೃತಿಗೆಡಲಿಲ್ಲ. 1840ರಲ್ಲಿ ರಾಷ್ಟ್ರೀಯ ಚಾರ್ಟರ್ ಸಂಘವನ್ನು ಸ್ಥಾಪಿಸುವ ಮೂಲಕ ಸಂಘಟನಾ ಸ್ವರೂಪ ನೀಡಲು ಪ್ರಯತ್ನಿಸಿದರು. ಎರಡೇ ವರ್ಷಗಳಲ್ಲಿ ಈ ಸಂಘ ದೇಶಾದ್ಯಂತ ಹಲವು ಕಾರ್ಮಿಕ ಸಂಘಗಳ ಸದಸ್ಯತ್ವ ಮತ್ತು ಬೆಂಬಲವನ್ನು ಪಡೆಯಿತು.

ಮೊದಲ ಚಾರ್ಟರ್‌ಗೆ ಸಂಗ್ರಹಿಸಿದ ಸಹಿಗಳಿಗಿಂತ ಹಲವು ಪಟ್ಟು ಹೆಚ್ಚು ಸಹಿಗಳನ್ನು ಸಂಗ್ರಹಿಸಲು ಮತ್ತಷ್ಟು ವ್ಯಾಪಕ ಮತ್ತು ತೀವ್ರವಾದ ಪ್ರಚಾರಾಂದೋಲನ ಆರಂಭಿಸಿದರು. ಹಲವು ನಗರ, ಪಟ್ಟಣ, ಕೈಗಾರಿಕಾ ಪ್ರದೇಶಗಳಲ್ಲಿ ಚಾರ್ಟಿಸ್ಟ್ ಸಂಘಗಳು ಹುಟ್ಟಿದವು. ಕ್ರಿಯಾಶೀಲವಾದವು. ತಮ್ಮದೇ ಸ್ಥಳೀಯ ಪತ್ರಿಕೆಗಳು, ನ್ಯೂಸ್‌ಲೆಟರ್, ಸರ್ಕುಲರ್ ಎಂಬ ಕಿರುಪತ್ರಿಕೆಗಳನ್ನು ಆರಂಭಿಸಿದರು. ನಾರ್ದರ್ನ್ ಸ್ಟಾರ್ ಮೊದಲಾದ ಕೆಲ ರಾಷ್ಟ್ರವ್ಯಾಪಿ ಪತ್ರಿಕೆಗಳಂತೂ ಇಡೀ ಇಂಗ್ಲೆಂಡ್‌ನ ಚಾರ್ಟಿಸ್ಟ್ ಸಭೆಗಳು, ಚಟುವಟಿಕೆಗಳ ವರದಿಗಳ ಮೂಲಕ ಕಾರ್ಮಿಕರಲ್ಲಿ ಉತ್ಸಾಹ ಮೂಡಿಸಿದ್ದು ಮಾತ್ರವಲ್ಲದೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರಗಳು, ಆರ್ಥಿಕ, ರಾಜಕೀಯ ವಿಶ್ಲೇಷಣೆಗಳು, ಅಧ್ಯಯನ ಪೂರ್ಣ ಲೇಖನಗಳ ಮೂಲಕ ಕಾರ್ಮಿಕರಲ್ಲಿ ಅರಿವನ್ನೂ ಮೂಡಿಸಿದವು. ಯುರೋಪಿನ ಇತರ ದೇಶಗಳ ಹೋರಾಟಗಳಿಗೆ ಸೌಹಾರ್ದ ಬೆಂಬಲವನ್ನೂ ವ್ಯಕ್ತಪಡಿಸುವ ಮಟ್ಟಿಗೆ ಅವರ ವೈಚಾರಿಕತೆ ಕಮ್ಯೂನಿಸ್ಟ್ ಪೂರ್ವ ಸಮಯದಲ್ಲೇ ಬೆಳೆದಿತ್ತು ಎಂಬುದು ವಿಶೇಷ.

ಚಾರ್ಟಿಸ್ಟ್ ಆಂದೋಲನ ಮತ್ತು ಸಂಘಟನೆಯ ಬೆಳವಣಿಗೆಯ ಈ ವಿಸ್ತಾರ ಮತ್ತು ಪ್ರಜ್ಞಾವಂತಿಕೆ ಬಂಡವಾಳಶಾಹಿಗಳಲ್ಲಿ ಭಯವನ್ನು ಉಂಟುಮಾಡಿತು. ಅವರು ಈ ಹೋರಾಟದ ದಿಕ್ಕು ತಪ್ಪಿಸಲು ಆಹಾರ ವಸ್ತುಗಳ ಹೆಚ್ಚಿದ ಬೆಲೆ, ಅದರಿಂದ ಇಂಗ್ಲೆಂಡಿನ ಭೂಮಾಲಕರು ಪಡೆಯುತ್ತಿರುವ ಹೆಚ್ಚಿನ ಲಾಭ, ವಿದೇಶಗಳಿಂದ ಆಹಾರಧಾನ್ಯಗಳನ್ನು ಆಮದು ನಿಷೇಧ ಮಾಡುವ ಕಾರ್ನ್ ಲಾ ವನ್ನು ತಿದ್ದುಪಡಿ ಮಾಡಬೇಕೆಂಬ ಒತ್ತಾಯವನ್ನು ಮಂಡಿಸಿದರು. ಇದಕ್ಕಾಗಿ ಫ್ರೀ ಟ್ರೇಡ್ ಅಸೋಸಿಯೇಷನ್‌ಗಳನ್ನು ವಿವಿಧ ನಗರಗಳಲ್ಲಿ ರೂಪಿಸಿಕೊಂಡರು. ಸರ್ಕಾರದ ವಿರುದ್ಧ ಚಾರ್ಟಿಸ್ಟ್ ಗಳಿಗಿಂತ ಬೆಂಕಿಯುಗುಳುವ ಭಾಷೆಯನ್ನು ಪುಂಖಾನುಪುಂಖವಾಗಿ ಉದುರಿಸತೊಡಗಿದರು. ಇದು ಆಳುವ ವರ್ಗದ ಭಾಗವಾದ ಬಂಡವಾಳಶಾಹಿಗಳು, ಅದೇ ಆಳುವ ವರ್ಗದ ಭಾಗವಾಗಿದ್ದ ಟೋರಿ ಪಕ್ಷದ ಪಾಳೆಯಗಾರಿ ಭೂಮಾಲಿಕರ ವಿರುದ್ಧದ ತಮ್ಮ ಸಂಘರ್ಷದಲ್ಲಿ ಕಾರ್ಮಿಕರ ಸಾಮರ್ಥ್ಯದ ನೆರವು ಪಡೆಯುವ ತಂತ್ರವಾಗಿತ್ತು.

ಅಲ್ಲಿಯವರೆಗೂ ಚಾರ್ಟರ್ ಅನ್ನು ವಿರೋಧಿಸುತ್ತಿದ್ದ ಬಂಡವಾಳಶಾಹಿಗಳು ಇದ್ದಕ್ಕಿದ್ದಂತೆ ಚಾರ್ಟರ್‌ನಲ್ಲಿರುವ ಮತಾಧಿಕಾರದ ಒತ್ತಾಯಗಳಿಗೆ ಬೆಂಬಲವನ್ನೂ ವ್ಯಕ್ತಪಡಿಸಿದರು. ಆ ಮೂಲಕ ಆಹಾರ ಧಾನ್ಯಗಳ ಆಮದುಗಳ ಮೂಲಕ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಕಾರ್ನ್ ಲಾ ತಿದ್ದುಪಡಿಯ ಸ್ವಾರ್ಥಕ್ಕೆ ಕಾರ್ಮಿಕರ ಸಿಟ್ಟನ್ನು ದುರ್ಬಳಕೆ ಮಾಡಿಕೊಳ್ಳುವ ತಂತ್ರ ಅದಾಗಿತ್ತು. ಅದೇ ಸಮಯದಲ್ಲಿ ಕಾರ್ಮಿಕರ ಮತಾಧಿಕಾರದ ಹಂಬಲವನ್ನು ಕುಗ್ಗಿಸಿ ಅವರ ದಿಕ್ಕುತಪ್ಪಿಸುವ ದುರ್ಯೋಚನೆ ಅದರಲ್ಲಿ ಅಡಗಿತ್ತು.

ಆದರೆ ಬಂಡವಾಳಶಾಹಿಗಳ ನೇತೃತ್ವದ ಹೋರಾಟಗಳಲ್ಲಿ, ಅವರ ಹಿಂಬಾಲಕರಾಗಿ ಭಾಗವಹಿಸಿ ವಂಚಿತರಾಗಿದ್ದ ತಮ್ಮ ಹಿಂದಿನ ಕಹಿ ಅನುಭವಗಳಿಂದ ಪಾಠ ಕಲಿತಿದ್ದ ಕಾರ್ಮಿಕರು ಈ ತಂತ್ರಕ್ಕೆ ಬಲಿ ಬೀಳಲಿಲ್ಲ. ಚಾರ್ಟಿಸ್ಟ್ ವಾರ್ಷಿಕ ಸಮಾವೇಶದಲ್ಲಿ ಫ್ರೀ ಟ್ರೇಡ್ ಅಸೋಸಿಯೇಷನ್‌ನ ಈ ಸಂಚನ್ನು ತಿರಸ್ಕರಿಸಿದರು. ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ತಮ್ಮದೇ ನೇತೃತ್ವದ ಸಂಘಟನೆಯನ್ನು ಸ್ಥಾಪಿಸಿ ಅದನ್ನು ವ್ಯಾಪಕವಾಗಿ ಬೆಳೆಸಿದರು ಎಂಬುದು ಬಹಳ ವಿಶೇಷ. ಅಂದು ಚಾರ್ಟಿಸ್ಟ್ ಪತ್ರಿಕೆಗಳು ಮತ್ತು ಇತರ ಪತ್ರಿಕೆಗಳಲ್ಲಿ ಬರುತ್ತಿದ್ದ ವರದಿಗಳನ್ನು ಗಮನಿಸಿ ಲೆಕ್ಕಿಸಿದಂತೆ ಒಂದೇ ವಾರದಲ್ಲಿ 600 ಸಭೆಗಳು ನಡೆದಿದ್ದವು.

ಪುಟ 15 ನೋಡಿ

ಹತ್ತು ಗಂಟೆ ಕೆಲಸದ ಅವಧಿ ಎಂಬ ಮಹತ್ಸಾಧನೆ

ತಕ್ಷಣಕ್ಕೆ ಕಾರ್ಮಿಕರ ಒತ್ತಾಯಗಳಿಗೆ ಮಣಿಯದೆ ಅದನ್ನು ಹತ್ತಿಕ್ಕಿದರು. ಆದರೆ ಕಾರ್ಮಿಕರ ಒಂದು ಮುಖ್ಯ ಬೇಡಿಕೆಯಾದ ಕೆಲಸದ ಅವಧಿಯನ್ನು ಕಡಿಮೆಗೊಳಿಸುವ, ನಿಯಂತ್ರಣಮಾಡುವ ಫ್ಯಾಕ್ಟರಿ ಕಾಯಿದೆ ತಿದ್ದುಪಡಿಗಳನ್ನು 1844ರಲ್ಲಿ ತರಬೇಕಾಯಿತು. 15 ಗಂಟೆಗಳಿಂದ 12 ಗಂಟೆಗೆ ಇಳಿಸಲಾಯಿತು. ಮತ್ತೆ 1847, 48ರ ತಿದ್ದುಪಡಿಗಳ ಮೂಲಕ 10 ಗಂಟೆಗಳ ಅವಧಿಗೆ ಇಳಿಸಿದರು. ಇದು ಕಾರ್ಮಿಕರ ಬದುಕಿನಲ್ಲಿ ಬಹು ಮುಖ್ಯ ಬದಲಾವಣೆ ಹಾಗೂ ಕಾರ್ಮಿಕ ಇತಿಹಾಸಕ್ಕೆ ಒಂದು ಕೊಡುಗೆ.

ಚಾರ್ಟಿಸ್ಟ್ ಚಳವಳಿಯ ಪ್ರಭಾವ ಚಾರ್ಟಿಸ್ಟರನ್ನು ಅಟ್ಟಿದ್ದ ಆಸ್ಟ್ರೇಲಿಯಾ, ಟಸ್ಮಾನಿಯಾ, ಕೆನಡಾಗಳಂತಹ ಬ್ರಿಟಿಷ್ ವಸತಿ ವಸಾಹತುಗಳಲ್ಲಿ ಕಾರ್ಮಿಕರ ಚಳುವಳಿಯ ಬೆಳವಣಿಗೆಗೆ ಸಹಾಯವಾಯಿತು. ಅಷ್ಟೇ ಅಲ್ಲ, ಮಹಿಳಾ ಮತದಾನದ ಹಕ್ಕಿನ ಆಂದೋಲನಕ್ಕೆ ಸ್ಫೂರ್ತಿಯಾಯಿತು. ಚಾರ್ಟಿಸ್ಟ್ ಚಳುವಳಿ ಎತ್ತಿದ್ದ ಮತಾಧಿಕಾರದ ಆರು ಒತ್ತಾಯಗಳಲ್ಲಿ ಒಂದೊಂದಾಗಿ ಬ್ರಿಟನ್‌ನಲ್ಲಿ ಕಾರ್ಯಗತವಾಗಲೇ ಬೇಕಾಯಿತು. ಅಂತಹ ಪ್ರತಿ ಸಂದರ್ಭದಲ್ಲೂ, ಕಾರ್ಮಿಕ ಸಂಘರ್ಷದ ಪ್ರತಿ ಹೆಜ್ಜೆಯಲ್ಲೂ ಚಾರ್ಟಿಸ್ಟ್ ಚಳುವಳಿ ತನ್ನ ಅಚ್ಚೊತ್ತಿತು. ಈ ಚಳುವಳಿಯ ಸಂದರ್ಭದಲ್ಲಿಯೇ ಇಂಗ್ಲೆಂಡ್‌ಗೆ ಬಂದ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಚಾರ್ಟಿಸ್ಟ್ ನಾಯಕರ ಸಂಪರ್ಕ ಪಡೆದರು. ಅದರ ಬಗ್ಗೆ ಮುಂದಿನ ಸಂಚಿಕೆಯಲ್ಲಿ.

ಒಟ್ಟಿನಲ್ಲಿ ಮೊತ್ತ ಮೊದಲಿಗೆ ಕಾರ್ಮಿಕ ವರ್ಗ ಬಂಡವಾಳಶಾಹಿ ಮತ್ತು ಇತರ ಆಳುವ ವರ್ಗಗಳ ನೆರಳಿನಿಂದ ಹೊರಬಂದು ಒಂದು ಸ್ವತಂತ್ರ ವರ್ಗವಾಗಿ ತನ್ನನ್ನು ತಾನು ಗುರುತಿಸಿಕೊಂಡಿತು. ಕಾರ್ಮಿಕ ವರ್ಗದ ಸಿದ್ಧಾಂತವನ್ನು ಕಂಡರಿಸುವ ಮೊದಲು, ವರ್ಗ ಸಂಘರ್ಷ, ಕಾರ್ಮಿಕ ಅಧಿನಾಯಕತ್ವದ ಕ್ರಾಂತಿಯ ಸಿದ್ಧಾಂತದ ನೆರವಿಲ್ಲದೆ ಎಷ್ಟೆಲ್ಲ ಸಾಧಿಸಬಹುದಾಗಿತ್ತೋ ಅದನ್ನು ಸಾಧಿಸಲು ಯಶಸ್ವಿಯಾಯಿತು.

ಸಂಪಾದಕೀಯ

ಮಹಿಳಾ ನ್ಯಾಯದ ಪ್ರಶ್ನೆಯು ಮಹಿಳೆಯರದ್ದು ಮಾತ್ರವಲ್ಲ ಸಮಸ್ತ ಅಭಿವೃದ್ಧಿಯ ಪ್ರಶ್ನೆ

ರಾಜ್ಯದಲ್ಲಿ ತೀವ್ರ ಆತಂಕಕಾರಿ ಬೆಳವಣಿಗೆಗಳು ನಡೆದಿವೆ. ಎರಡು ಬಲಪಂಥೀಯ ಗುಂಪುಗಳ ಘರ್ಷಣೆಯ ಭಾಗವಾಗಿ ಧರ್ಮಸ್ಥಳದ ವ್ಯಾಪ್ತಿಯಲ್ಲಿ ಘಟಿಸಿದ ಅಸಹಜ ಸಾವುಗಳ ಕುರಿತು ಅನಾಮಿಕ ವ್ಯಕ್ತಿಯು ತಾನೇ ಅನೇಕ ಹೆಣಗಳನ್ನು ಹೂತಿದ್ದ ಕುರಿತು ಕೊಟ್ಟ ದೂರಿನ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಎಸ್ಐಟಿ ರಚನೆ ಮಾಡಿ ತನಿಖೆ ಆರಂಭಿಸಿದೆ. ಎಸ್ಐಟಿ ಯಾವುದೇ ವರದಿಕೊಡುವ ಮುನ್ನ ಊಹಾಪೋಹದ ಸುದ್ದಿಗಳನ್ನು ಮಡಿಲ ಮಾಧ್ಯಮಗಳು ಬಿತ್ತರಗೊಳಿಸುತ್ತಿವೆ. ಸರಕಾರದಲ್ಲಿಯೇ ಉಪಮುಖ್ಯಮಂತ್ರಿ ವ್ಯತಿರಿಕ್ತವಾದ ಹೇಳಿಕೆಗಳನ್ನು ಕೊಟ್ಟು ಕ್ಷಮೆ ಕೇಳಿದ್ದೂ ಆಯ್ತು. ಇದೊಂದು ರೀತಿಯಲ್ಲಿ ಸರರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದಂತೆ. ಧರ್ಮಸ್ಥಳದ ವ್ಯಾಪ್ತಿಯಲ್ಲಿನ ಅಸಹಜ ಸಾವುಗಳಲ್ಲಿ ತೀವ್ರ ಆತಂಕ ಹುಟ್ಟಿಸಿದ್ದು ಅನೇಕ ಯುವತಿಯರ, ಬಾಲೆಯರ ಮತ್ತು ಮಹಿಳೆಯರ ಸಾವು, ಕೊಲೆ, ಅತ್ಯಾಚಾರಗಳು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಇನ್ನಷ್ಟು ಕಳವಳಕಾರಿ ಬೆಳವಣಿಗೆಗಳು ಘಟಿಸುತ್ತಿವೆ. ಅವೆಲ್ಲವೂ ಮಹಿಳೆಯರನ್ನು ಹೈರಾಣುಗೊಳಿಸುವಂತಹವುಗಳೇ ಆಗಿವೆ. ಎರಡು ವರ್ಷ ಏಳು ತಿಂಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ 45,053 ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ. ಲೈಂಗಿಕ ಕಿರುಕುಳ, ಅತ್ಯಾಚಾರ, ಗಂಡನಿಂದ ಕಿರುಕುಳ ಹಾಗೂ ಸಾವು, ಫೋಕ್ಸೊ, ಬಾಲ್ಯ ವಿವಾಹ, ಬಾಲಕಾರ್ಮಿಕ ಕಾಯ್ದೆಯ ಅಡಿಯಲ್ಲಿ ದಾಖಲಾದ ಅಂಕಿಸಂಖ್ಯೆಗಳಿವು. ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ 16,276 ಪ್ರಕರಣಗಳು, ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ 5,456 ಪ್ರಕರಣಗಳು, ವರದಕ್ಷಿಣೆ ಕಿರುಕುಳಕದಿಂದಲೇ 340 ಮಹಿಳೆಯರ ಸಾವುಗಳು, ಗಂಡನ ಕಿರುಕುಳಕ್ಕೆ 7,546 ಪ್ರಕರಣಗಳು ದಾಖಲಾಗಿವೆ. ಅತ್ಯಾಚಾರಕ್ಕೆ ಸಂಬಂಧಿಸಿದಂತೆ 2023ರಲ್ಲಿ 600 ಇದ್ದರೆ 2024ರಲ್ಲಿ 739 ಹಾಗೂ 2025ರ ಜುಲೈವರೆಗೆ 549 ಪ್ರಕರಣಗಳು ದಾಖಲಾಗಿವೆ. ಫೋಕ್ಸೊ ಪ್ರಕರಣಗಳ ಸಂಖ್ಯೆಯು ಏರುಮುಖವಾಗಿದ್ದು 2023ರಲ್ಲಿ 3,902, 2024ರಲ್ಲಿ 4,064 ಮತ್ತು 2025ರಲ್ಲಿ 2,544 ಪ್ರಕರಣಗಳು ದಾಖಲಾಗಿವೆ. ಇದು ಹೆಚ್ಚು ಆತಂಕಕಾರಿಯಾದ ಸಂಗತಿಯಾಗಿದೆ. ಎಳೆಮಕ್ಕಳ ಮೇಲೆ ನಡೆಸುವ ದೌರ್ಜನ್ಯದ ಪ್ರಮಾಣವನ್ನು ಇದು ಬಿಂಬಿಸುತ್ತದೆ. ರಾಜ್ಯದಲ್ಲಿ ನಾಲ್ಕು ತಿಂಗಳಲ್ಲಿ 979 ಬಾಲಕಿಯರ ಮೇಲೆ ಅತ್ಯಾಚಾರ ಘಟಿಸಿದರೆ, ಹತ್ತು ತಿಂಗಳಲ್ಲಿ 24,463 ಬಾಲಗರ್ಭಿಣಿಯರು ಪತ್ತೆಯಾಗಿದ್ದಾರೆ. ಬಾಲ್ಯವಿವಾಹಗಳು ದಿನೇದಿನೆ ಹೆಚ್ಚುತ್ತಿವೆ ಎನ್ನುವುದನ್ನು ಧ್ವನಿಸುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ 1465 ಬಾಲ್ಯವಿವಾಹಗಳು ಘಟಿಸಿವೆ. 2024–25ರಲ್ಲಿಯೇ 719ಕ್ಕೂ ಹೆಚ್ಚು ಬಾಲ್ಯವಿವಾಹಗಳು ಘಟಿಸಿವೆ. ಕೌಟುಂಬಿಕ ಹಿಂಸೆಗೆ ಸಂಬಂಧಿಸಿದ ಬಂಧನದ ಪ್ರಕರಣಗಳಲ್ಲಿ ಶೇ. 95–98 ಪ್ರಕರಣಗಳಲ್ಲಿ ಆರೋಪಿಗಳು ಬಂಧಮುಕ್ತರಾಗುತ್ತಾರೆ ಎಂಬುದು ಮಹಿಳಾವಿರೋಧಿ ಮನೋಸ್ಥಿತಿಯನ್ನು ಬಿಂಬಿಸುತ್ತದೆ.

ತೀರ ಕಳವಳಕಾರಿಯಾದದ್ದೇನೆಂದರೆ ಯಾದಗಿರಿ ಜಿಲ್ಲೆಯಲ್ಲಿ 9ನೇ ತರಗತಿ ಓದುವ ವಿದ್ಯಾರ್ಥಿನಿಯು ಶೌಚಾಲಯದಲ್ಲಿ ಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಅಲ್ಲಿಯವರೆಗೆ ಅವಳು ಗರ್ಭಿಣಿ ಎಂಬುದು ಯಾರಿಗೂ ಗೊತ್ತಾಗಲಿಲ್ಲವಂತೆ. ಹಾಸ್ಟೆಲ್ ವಾರ್ಡನ್ ಇದ್ದೂ, ಶಾಲೆಯಲ್ಲಿ ಶಿಕ್ಷಕರೂ ಇದ್ದೂ ಅವಳು ಗರ್ಭಿಣಿ ಎಂಬುದು ಯಾರಿಗೂ ಗೊತ್ತಿಲ್ಲವೆಂಬುದೇ ತೀರಾ ಆಶ್ಚರ್ಯವಲ್ಲದೆ ವಿದ್ಯಾರ್ಥಿನಿಯರ ಬಗ್ಗೆ ತೀವ್ರ ನಿರ್ಲಕ್ಷ್ಯ ಎದ್ದು ಕಾಣಿಸುತ್ತದೆ.

ದಲಿತ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳಲ್ಲಿಯ ಹೆಚ್ಚಳದ ವರದಿಯಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗೆ ಯಾವುದೇ ಗಂಭೀರ ಕ್ರಮವಿಲ್ಲವಾಗಿದೆ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಇಲಾಖೆಯ 2019–20ರ ಸಮೀಕ್ಷೆಯ ಪ್ರಕಾರ ಕರ್ನಾಟಕದ 16 ಜಿಲ್ಲೆಗಳು ತೀವ್ರ ಲಿಂಗಾನುಪಾತದ ಕುಸಿತದಲ್ಲಿ ಸಿಲುಕಿವೆ. ಕಳವಾಳಕಾರಿ ದಿಕ್ಕಿನಲ್ಲಿ ಬಾಣಂತಿಯರ ಸಾವುಗಳು ಘಟಿಸುತ್ತಿವೆ. 15ರಿಂದ 49ರ ನಡುವಿನ ವಯೋಮಾನದ ಶೇ. 48ರಷ್ಟು ಯುವತಿಯರಲ್ಲಿ ರಕ್ತಹೀನತೆ ಇದೆ ಎಂದು ಸಮೀಕ್ಷೆ ಹೇಳುತ್ತದೆ. ದೇವದಾಸಿ ಮತ್ತು ಒಂಟಿ ಮಹಿಳೆಯರ ಸಂಕಟಗಳು ಹೆಚ್ಚುತ್ತಿವೆ.

ಮಹಿಳೆಯರ ಅಸ್ತಿತ್ವ ಅಸ್ಮಿತೆಯನ್ನು ನಿರಾಕರಿಸುವ ವಿದ್ಯಮಾನಗಳಿಗೆ ಕರ್ನಾಟಕವು ಸಾಕ್ಷಿಯಾಗುತ್ತಿದೆ. ದಸರಾ ಸಂದರ್ಭದಲ್ಲಿ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಕರ್ನಾಟಕ ಸರಕಾರವು ದಸರಾ ಉತ್ಸವದ ಉದ್ಘಾಟನೆಗೆ ಅಹ್ವಾನ ಮಾಡಿದೆ. ಅನ್ಯಧರ್ಮೀಯಳೆಂಬ ಕಾರಣ ಮುಂದೊಡ್ಡಿ ಉದ್ಘಾಟನೆ ಮಾಡಬಾರದೆಂದು ಬಿಜೆಪಿ ಹುಯಿಲೆಬ್ಬಿಸುತ್ತಿದೆ. ಹಿಂದೆ ಕವಿಗಳಾದ ನಿಸಾರ್ ಅಹ್ಮದ್ ಅವರು ದಸರಾ ಉತ್ಸವ ಉದ್ಘಾಟನೆ ಮಾಡಿದಾಗ ಇದೇ ಬಿಜೆಪಿಯ ಆರ್.ಅಶೋಕ ಅವರ ಪಕ್ಕದಲ್ಲಿ ನಿಂತುಕೊಂಡು ಫೋಟೊ ಕ್ಲಿಕ್ಕಿಸಿಕೊಂಡಿದ್ದರು. ಅಂದರೆ ಬಾನು ಮಹಿಳೆ ಮತ್ತು ಮುಸ್ಲಿಂ ಮಹಿಳೆ ಎಂಬ ಕಾರಣಕ್ಕೆ ಇನ್ನಿಲ್ಲದಂತೆ ವಿರೋಧ ವ್ಯಕ್ತಪಡಿಸುತ್ತಿರುವುದು ಬಲಪಂಥೀಯ ವ್ಯಕ್ತಿಗಳು ಮತ್ತು ಬಿಜೆಪಿ. ಬಾನು ಅವರಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಬಂದಾಗ ಕಡೆಪಕ್ಷ ನರೇಂದ್ರ ಮೋದಿಯವರು ಪ್ರದಾನ ಮಂತ್ರಿಯಾಗಿಯೂ ಅಭಿನಂದಿಸಲಿಲ್ಲ. ಇದು ಧರ್ಮದ್ವೇಷದ ವಿಷ ಕಕ್ಕುವ ಪರಿಯಾಗಿದೆ. 'ದಸರಾ' ನಾಡಿನ ಹಬ್ಬವಾಗಿದೆ. ಧರ್ಮದ ಹಬ್ಬವಲ್ಲ. ಆದಾಗ್ಯೂ ಮಹಿಳಾ ವಿರೋಧಿ ಮನೋಸ್ಥಿತಿಯನ್ನು ಇನ್ನಷ್ಟು ವ್ಯಾಪಕಗೊಳಿಸುವ ಹುನ್ನಾರ ಇದಾಗಿದೆ.

ಇಂತಹ ಸಂದರ್ಭದಲ್ಲಿ ಕರ್ನಾಟಕ ಸರಕಾರವು ಮಹಿಳಾಪರವಾದ ನಿಲುವನ್ನು ಪ್ರಕಟಪಡಿಸುತ್ತಿದೆಯೇ ಎಂದು ನೋಡಿದರೆ, ಅಲ್ಲಿಯೂ ನಿರಾಶೆಯೇ ಕಾದಿದೆ. ಮಹಿಳಾ ಸಂಕಟಗಳಿಗೆ ದನಿಯಾಗಿ, ಸಮಸ್ಯೆಗಳ ಪರಿಹಾರಕ್ಕಾಗಿ ನೀತಿ ನಿರೂಪಣೆಯಲ್ಲಿ ಬದಲಾವಣೆ ತರುವಲ್ಲಿ ರಾಜಕೀಯವಾಗಿ ಮಹಿಳಾ ಭಾಗಿದಾರಿಕೆ ಹೆಚ್ಚಾಗಬೇಕು. ಆದರೆ ಕರ್ನಾಟಕದಲ್ಲಿ ಹೀಗಾಗುತ್ತಿದೆಯೇ? ಕರ್ನಾಟಕದಲ್ಲಿ ಶಾಸಕಿಯರಾಗಿ ಆಯ್ಕೆಯಾದವರ ಸಂಖ್ಯೆ ಕಡಿಮೆ. 1957ರಲ್ಲಿ 13 ಮತ್ತು 1962ರಲ್ಲಿ 18 ಮಹಿಳಾ ಶಾಸಕಿಯರು ಆಯ್ಕೆಯಾಗಿದ್ದರು ಎಂಬ ವರದಿ ಇದೆ. 2024ರಲ್ಲಿ ಕೇವಲ ಹತ್ತು ಶಾಸಕಿಯರಿದ್ದಾರೆ. ಒಟ್ಟು ಅಸೆಂಬ್ಲಿ ಸ್ಥಾನಗಳು 224 ಇವೆ. ಸ್ಥಳೀಯ ಸಂಸ್ಥೆಯಲ್ಲಿ ಅಂದರೆ ಪಂಚಾಯತ್ ಮತ್ತು ಮುನಸಿಪಲ್‌ನಲ್ಲಿ ಮೀಸಲಾತಿಯ ಕಾರಣದಿಂದ ಶೇ.50 ಮಹಿಳೆಯರ ಭಾಗೀದಾರಿಕೆ ಇದೆ. ಮಹಿಳಾ ವಿರೋಧಿ ಮನೋಭಾವನೆಯು ಜಡ್ಡುಗಟ್ಟಿದ ಸಂದರ್ಭದಲ್ಲಿ ಕಾನೂನಾತ್ಮಕವಾಗಿ ಮೀಸಲಾತಿ ಜಾರಿಗೊಳಿಸುವ ಅಗತ್ಯತೆಯನ್ನು ಇದು ಬಲವಾಗಿ ಧ್ವನಿಸುತ್ತದೆ.

ಈ ಸಂದರ್ಭದಲ್ಲಿ ಕರ್ನಾಟಕವು ಮಹಿಳಾ ಸಂಬಂಧಿ ಎರಡು ತೀವ್ರ ಪರಿಣಾಮಕಾರಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಹೋರಾಟಗಳನ್ನು ಕಂಡಿದೆ. ಒಂದು; 1980ಕ್ಕೂ ಪೂರ್ವದಿಂದ ಈವರೆಗೂ ಧರ್ಮಸ್ಥಳದ ಆಸುಪಾಸಿನಲ್ಲಿ ನಡೆದ ಮಹಿಳೆಯರ–ಯುವತಿಯರ–ಬಾಲಕಿಯರ ಅಸಹಜ ಸಾವುಗಳು, ಅತ್ಯಾಚಾರ, ಕೊಲೆ ಮುಂತಾದ ಭೀಕರ ಕೃತ್ಯಗಳ ವಿರುದ್ಧ ನಿರಂತರ ಹೋರಾಟಗಳು. ಪದ್ಮಲತಾಳಿಂದ ಸೌಜನ್ಯಳವರೆಗೆ ನಲುಗಿದ ಹೆಣ್ಣು ಜೀವಗಳಿಗೆ ನ್ಯಾಯಕ್ಕಾಗಿ ಸಮರ ಸುರುವಾಗಿದೆ. ಎರಡನೆಯದಾಗಿ; ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರನ್ನು ಆಮಿಷದ ಖೆಡ್ಡಾಕ್ಕೆ ತಳ್ಳಿ ತನ್ನ ಸ್ಥಾನದ ಸಾಮರ್ಥ್ಯವನ್ನು ಬಳಸಿ ದಬ್ಬಾಳಿಕೆಯಿಂದ, ಧಮಕಿಯಿಂದ ಅವರೊಂದಿಗೆ ದೈಹಿಕ ಸಂಬಂಧ ಏರ್ಪಡಿಸಿಕೊಂಡು ವಿಕೃತ ವಿಡಿಯೋಗಳನ್ನು ಮಾಡಿ, ಅವುಗಳನ್ನೂ ಬಳಸಿ ಮತ್ತೆ ಮತ್ತೆ ಮಹಿಳೆಯರನ್ನು ಬ್ಲಾಕ್ ಮೇಲೆ ಮಾಡಿದ ಪ್ರಕರಣಗಳ ವಿರುದ್ಧ ಕರ್ನಾಟಕದ ನ್ಯಾಯಪರ ಜೀವಗಳು ತೀವ್ರತರವಾಗಿ ಪ್ರತಿಭಟನೆ ಮಾಡಿದವು. ಪ್ರತಿಫಲವಾಗಿ ಪ್ರಜ್ವಲ್ ರೇವಣ್ಣನಿಗೆ ಶಿಕ್ಷೆಯಾಗಿದೆ. ಆದರೆ ಧರ್ಮಸ್ಥಳದಲ್ಲಿ ಬಾರ್ಬರಿಕವಾಗಿ ಹತ್ಯೆಯಾದ ಹೆಣ್ಣುಜೀವಗಳಿಗೆ ಇದುವರೆಗೂ ನ್ಯಾಯ ಸಿಕ್ಕಿಲ್ಲ. ಇದು ಏನನ್ನು ಧ್ವನಿಸುತ್ತದೆ? ಸರಕಾರವು ಲಿಂಗಸಂವೇದನಾಶೀಲವಾಗಿಲ್ಲದಿದ್ದರೆ ಮಹಿಳಾ ಸಂಬಂಧಿ ಅಭಿವೃದ್ಧಿಯ ಕಾರ್ಯಯೋಜನೆಗಳನ್ನು ರೂಪಿಸುವುದಿಲ್ಲ. ಕೋಮುವಾದಿ ರಾಜಕೀಯ ಶಕ್ತಿಗಳ ಕೈಯಲ್ಲಿ ಆಡಳಿತದ ಚುಕ್ಕಾಣಿ ಇದ್ದಲ್ಲಿ ಸಂಪೂರ್ಣವಾಗಿ ಮಹಿಳಾ ವಿರೋಧಿ ನೆಲೆಯಲ್ಲಿ ಯೋಜನೆಗಳು ರೂಪುಗೊಳ್ಳುತ್ತವೆ. ಅಥವಾ ಮಹಿಳಾಪರವೆನಿಸಿದರೂ ಅವುಗಳನ್ನು ನೆನೆಗುದಿಗೆ ತಳ್ಳಲಾಗುತ್ತದೆ. ಒಟ್ಟಿನಲ್ಲಿ ಎಲ್ಲವೂ ಅಧಿಕಾರ ರಕ್ಷಣೆಯ ಕೇಂದ್ರಿತವಾಗಿ ಸರಕಾರದ ಚಲನೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಮಾಜದಲ್ಲಿ ಸಮಗ್ರ ಅಭಿವೃದ್ಧಿಯ ಕಣ್ಣೋಟವು ರೂಪುಗೊಳ್ಳಬೇಕಿದೆ. ಏಕೆಂದರೆ ಮಹಿಳಾ ನ್ಯಾಯದ ಪ್ರಶ್ನೆಯು ಮಹಿಳೆಯರದ್ದು ಮಾತ್ರವಲ್ಲ. ಅದು ರಾಜಕೀಯ ಪ್ರಶ್ನೆ. ಸಮಸ್ತ ಅಭಿವೃದ್ಧಿಯ ಪ್ರಶ್ನೆ. ಆರೋಗ್ಯಕರವಾದ ಸಮಾಜವೆಂದರೆ ಅದು ಲಿಂಗಸಮಾನತೆಯನ್ನು ಪ್ರತಿಫಲಿಸಬೇಕು. ಆರ್ಥಿಕ, ರಾಜಕೀಯ, ಸಾಮಾಜಿಕ ಸಮಾನತೆಯಲ್ಲಿ ಮಹಿಳಾ ಭಾಗೀದಾರಿಕೆಯು ಗಣನೀಯವಾಗಿರಬೇಕು. ಸಾಮಾಜಿಕ ನ್ಯಾಯವು ಬದ್ಧತೆಯೊಂದಿಗೆ ಸಹಜವಾಗಿ ಮಿಳಿತವಾಗಿರಬೇಕು. ಆದ್ದರಿಂದ ಮಹಿಳಾ ಚಳುವಳಿಗಳು ಎಂದಿಗಿಂತಲೂ ಹೆಚ್ಚು ಐಕ್ಯತೆಯಿಂದ ದನಿಯೆತ್ತಬೇಕಿದೆ. ಸಮಾಜದ ಸಮಸ್ತ ವಲಯದಿಂದಲೂ ಇದಕ್ಕೆ ಪ್ರತಿಸ್ಪಂದಿಸಬೇಕಿದೆ. ಮಹಿಳಾ ಆಯೋಗ, ಮಹಿಳಾ ಸಂಬಂಧಿ ಸಮಿತಿಗಳು ಮಹಿಳಾಪರವಾದ ದೃಷ್ಟಿ–ಧೋರಣೆಯೊಂದಿಗೆ ಕಾರ್ಯತತ್ಪರವಾಗಬೇಕು. ಪಾಳೆಗಾರಿಕೆ, ಕೋಮುವಾದ, ಜಾತಿದಬ್ಬಾಳಿಕೆ, ಪುರುಷಪ್ರದಾನ ನಿಲುವುಗಳು ಸಮಾಜಕ್ಕೆ ಅತ್ಯಂತ ಅಪಾಯಕಾರಿಯಾದವುಗಳು. ಇವುಗಳನ್ನು ಹಿಮ್ಮೆಟ್ಟಿಸುವಲ್ಲಿ ಸಮಾಜವು ವಿಶೇಷ ವಿವೇಕದೊಂದಿಗೆ ವಿಶಾಲ ನೆಲೆಯಲ್ಲಿ ಸಂಚಲನಗೊಳ್ಳಬೇಕಿದೆ.

ಮೈಸೂರು ದಸರಾ ಉದ್ಘಾಟನೆಗೆ ಧರ್ಮದ್ವೇಷ ರಾಜಕಾರಣ ಮಾಡುವ ಬಿಜೆಪಿ ನಡೆಗೆ ಸಿಪಿಐ(ಎಂ) ಖಂಡನೆ

ನಾಡಹಬ್ಬ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತೆ, ಕನ್ನಡದ ಹೆಸರಾಂತ ಬರಹಗಾರ್ತಿ ಬಾನು ಮುಷ್ತಾಕ್ ಆಯ್ಕೆಯನ್ನು ಸ್ವಾಗತಿಸಿರುವ ಸಿಪಿಐ(ಎಂ) ರಾಜ್ಯ ಸಮಿತಿಯು, ದಸರಾ ಉದ್ಘಾಟನೆಗೆ ಬಾನುಮುಷ್ತಾಕ್ ಆಯ್ಕೆಯನ್ನು ವಿರೋಧಿಸಿ ನಾಡ ಹಬ್ಬದಲ್ಲಿ ಧರ್ಮದ್ವೇಷ ರಾಜಕಾರಣ ಮಾಡುವ ಬಿಜೆಪಿಯ ನಡೆಯನ್ನು ಖಂಡಿಸಿದೆ.

ಭಾರತೀಯ ಜನತಾ ಪಕ್ಷ ಎಂದಿನಂತೆ ಇಲ್ಲಿಯೂ ಧರ್ಮದ್ವೇಷ ರಾಜಕಾರಣ ಮಾಡುತ್ತಿರುವುದು ಖಂಡನೀಯವಾಗಿದೆ. ಕನ್ನಡ ಸಾಹಿತ್ಯಕ್ಕೆ ತಮ್ಮದೇ ಕೊಡುಗೆ ನೀಡಿ, ನಾಡಿನ ಸೌಹಾರ್ದ ಪರಂಪರೆಯನ್ನು ಪ್ರೀತಿಸುವ, ಗೌರವಿಸುವ ಬಾನುಮುಷ್ತಾಕ್ ರವರ ಕೃತಿಗೆ ಬೂಕರ್ ಪ್ರಶಸ್ತಿ ಲಭಿಸಿದೆ. ಇದು ಕನ್ನಡದ ಕೀರ್ತಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪಸರಿಸಿದೆ. ಅವರು ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರು ಎಂಬ ಕಾರಣಕ್ಕೆ, ಆಗಲೂ ಕನಿಷ್ಟ ಅಭಿನಂದನೆ ಸಲ್ಲಿಸುವ ಸೌಜನ್ಯ ತೋರದಿರುವ ಭಾರತೀಯ ಜನತಾ ಪಕ್ಷ ಈಗ ನಾಡಹಬ್ಬದಲ್ಲಿ ತನ್ನ ಕೋಮುವಾದೀ ರಾಜಕಾರಣವನ್ನು ಮುಂದೆ ಮಾಡುತ್ತಿದೆ.

ಸಿಪಿಎಂ ಪಕ್ಷವು ಕೋಮುವಾದದ ವಿರುದ್ಧ ನಡೆಸುವ ನಿರಂತರ ಹೋರಾಟದ ಭಾಗವಾಗಿಯೇ ಬಿಜೆಪಿಯ ಈ ಧರ್ಮದ್ವೇಷ ರಾಜಕಾರಣವನ್ನು ವಿರೋಧಿಸುತ್ತದೆ. ಮತ್ತು ನಾಡ ಹಬ್ಬ ದಸರಾವನ್ನು ಈ ಹಿಂದೆ ಖ್ಯಾತ ಕವಿ ನಿಸಾರ್ ಅಹ್ಮದ್ ರವರು ಉದ್ಘಾಟನೆ ಮಾಡಿದ್ದರು. ದಸರಾ ಕನ್ನಡ ನಾಡಿನ ಹಬ್ಬವೇ ಹೊರತು, ಹಿಂದುತ್ವವಾದಿಗಳ ಹಬ್ಬವಲ್ಲ ಎಂಬುದನ್ನು ಬಿಜೆಪಿಯವರು ಅರ್ಥಮಾಡಿಕೊಂಡು ಕ್ಷುಲ್ಲಕ ರಾಜಕಾರಣವನ್ನು ಕೈಬಿಡಬೇಕೆಂದು ಎಂದು ಸಿಪಿಎಂ ಒತ್ತಾಯಿಸಿದೆ.



ಟ್ರಂಪ್‌ರನ್ನು ತಡೆಯಲಾಗದ್ದಕ್ಕೆ ಭಾರತದ ಹತ್ತಿ ರೈತರಿಗೆ ಶಿಕ್ಷೆ:

ರೈತ ಸಂಘಟನೆಗಳ ಆಕ್ರೋಶ

ನಮ್ಮ ಪ್ರಧಾನ ಮಂತ್ರಿ ಮೋದಿಯವರು ತಮ್ಮ 'ಪರಮ ಮಿತ್ರ' ಟ್ರಂಪ್‌ರವರ ಸುಂಕಯುದ್ಧದ ಭಾಗವಾಗಿ ಭಾರತದ ಜವಳಿ ರಫ್ತಿನ ಮೇಲೆ ಅಮೆರಿಕ ಶೇ. 50ಕ್ಕಿಂತ ಹೆಚ್ಚು ಸುಂಕವನ್ನು ಘೋಷಿಸಿರುವುದರಿಂದಾಗಿ ಉಂಟಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು, ಜಾಗತಿಕ ಪೂರೈಕೆ ಸರಪಳಿಯಲ್ಲಿ ದುರ್ಬಲ ಕೊಂಡಿಯಾಗಿರುವ ಭಾರತೀಯ ಹತ್ತಿ ರೈತರನ್ನೇ ಶಿಕ್ಷಿಸಲು ನಿರ್ಧರಿಸಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ಮತ್ತು ಅಧ್ಯಕ್ಷ ಅಶೋಕ ಧವಳೆಯವರು ಕಟುವಾಗಿ ಟೀಕಿಸಿದ್ದಾರೆ. ಅವರು ಕೇಂದ್ರ ಸರ್ಕಾರ ಕಚ್ಚಾ ಹತ್ತಿಯ ಮೇಲಿನ ಶೇ. 11 ಆಮದು ಸುಂಕ ರದ್ದುಗೊಳಿಸಿದ ನಿರ್ಧಾರವನ್ನು ಖಂಡಿಸುತ್ತ ಈ ಮಾತುಗಳನ್ನು ಹೇಳಿದ್ದಾರೆ.

ಆಗಸ್ಟ್ 25ರಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಕೂಡ ಪತ್ರಿಕಾಗೋಷ್ಠಿಯಲ್ಲಿ ಇಂತಹುದೇ ಟೀಕೆಮಾಡುತ್ತ, ಸೆಪ್ಟೆಂಬರ್ ಒಂದರಿಂದ ಇದರ ವಿರುದ್ಧ ಪ್ರತಿಭಟನಾ ಚಳುವಳಿ ಆರಂಭಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

'ಕೇಂದ್ರೀಯ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ' (ಸಿಬಿಐಸಿ) ಆಗಸ್ಟ್ 18ರಂದು ಪ್ರಕಟಿಸಿದ ಅಧಿಸೂಚನೆಯು ಆಗಸ್ಟ್ 19ರಿಂದ ಸೆಪ್ಟೆಂಬರ್ 30, 2025 ರವರೆಗೆ ಹತ್ತಿ ಆಮದು ಸುಂಕವನ್ನು ರದ್ದುಮಾಡಿರುವುದಾಗಿ ಹೇಳಿತ್ತು. ಈಗ ಆಗಸ್ಟ್ 27ರಂದು ಟ್ರಂಪ್‌ರವರ ಶೇ. 50 ಸುಂಕ ಜಾರಿಗೆ ಬರುತ್ತಿರುವಂತೆಯೇ ಈ ಸಂಪೂರ್ಣ ಸುಂಕ ರಿಯಾಯ್ತಿಯನ್ನು ಡಿಸೆಂಬರ್ 31 ರವರೆಗೆ ವಿಸ್ತರಿಸುವುದಾಗಿಯೂ ಅಧಿಸೂಚನೆ ಹೊರಡಿಸಿದೆ ಎಂದು ವರದಿಯಾಗಿದೆ.

ಈ ನಿರ್ಧಾರವು ಆಮದು ಮಾಡಿಕೊಂಡ ಹತ್ತಿಯ ಬೆಲೆಯಲ್ಲಿ ಇಳಿಕೆಗೆ ಕಾರಣವಾಗುತ್ತದೆ, ಪರಿಣಾಮವಾಗಿ ಇದು ದೇಶೀಯ ಹತ್ತಿಯ ಬೆಲೆಗಳನ್ನೂ ಕೆಳಕ್ಕೆ ತಳ್ಳುತ್ತದೆ. ಭಾರತದಲ್ಲಿನ ಸಣ್ಣ ಹತ್ತಿ ಉತ್ಪಾದಕರು ಐತಿಹಾಸಿಕವಾಗಿ ಬೃಹತ್ ಸರ್ಕಾರಿ ಸಬ್ಸಿಡಿಗಳನ್ನು ಪಡೆದಿರುವ ಯುನೈಟೆಡ್ ಸ್ಟೇಟ್ಸ್‌ನ ದೊಡ್ಡ, ಕೈಗಾರಿಕಾ-ಪ್ರಮಾಣದ ಹತ್ತಿ ರೈತರೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲವಾದ್ದರಿಂದ ಇದು ರೈತ-ವಿರೋಧಿ ನಿರ್ಧಾರ ಎಂದು ರೈತಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿಯವರು ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ "ಭಾರತದ ರೈತರು, ಮೀನುಗಾರರು ಮತ್ತು ಪಶುಪಾಲಕರ ಮೇಲೆ ಪರಿಣಾಮ ಬೀರುವ ಯಾವುದೇ ಪ್ರತಿಕೂಲ ನೀತಿಯ ವಿರುದ್ಧ ಗೋಡೆಯಂತೆ ನಿಲ್ಲುತ್ತೇನೆ, ಭಾರತವು ಭಾರತೀಯ ರೈತರು, ಮೀನುಗಾರರು ಮತ್ತು ಪಶುಪಾಲಕರ ಹಿತಾಸಕ್ತಿಗಳನ್ನು ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ" ಎಂದು ಹೇಳಿದ್ದರ ಬೆನ್ನಲ್ಲೇ ಸಿಬಿಐಸಿ ಇಂತಹ ಅಧಿಸೂಚನೆಗಳನ್ನು ಪ್ರಕಟಿಸಿರುವುದು ಒಂದು ವಿಪರ್ಯಾಸ ಎಂದು ಅವರು ಹೇಳಿದ್ದಾರೆ.

ಹೆಚ್ಚಿನ ಹತ್ತಿ ಬೆಳೆಯುವ ಪ್ರದೇಶಗಳಲ್ಲಿನ ರೈತರು ಸುಮಾರು ಎರಡು ತಿಂಗಳ ಹಿಂದೆಯೇ ತಮ್ಮ ಬೆಳೆಗಳನ್ನು ಬಿತ್ತಿದ್ದಾರೆ ಮತ್ತು ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯನ್ನು ಪಡೆಯುವ ನಿರೀಕ್ಷೆಯಲ್ಲಿ ಗಮನಾರ್ಹ ವೆಚ್ಚಮಾಡಿದ್ದಾರೆ. ಈಗ ಆಮದು ಸುಂಕ ರದ್ದುಗೊಳಿಸುವ ಈ ಕ್ರಮವು ರೈತರು ತಮ್ಮ ಬೆಳೆಯನ್ನು ಕೊಯ್ಲುಮಾಡಲು ಸಿದ್ಧರಾಗುತ್ತಿರುವಾಗ ಅವರಿಗೆ ಖಂಡಿತವಾಗಿಯೂ ಒಂದು ಕೆಟ್ಟ ಸುದ್ದಿ. ಭಾರತದ ಹತ್ತಿ ಬೆಳೆಯುವ ಪ್ರದೇಶಗಳು ಕೃಷಿ ಸಂಕಷ್ಟ ಮತ್ತು ರೈತರ ಆತ್ಮಹತ್ಯೆ ಸಾವುಗಳಿಗೆ ಕುಖ್ಯಾತವಾಗಿವೆ. ಸರಕಾರದ ಈ ಕ್ರಮವು ಹತ್ತಿ ರೈತರನ್ನು ಮತ್ತಷ್ಟು ಸಾಲಕ್ಕೆ ತಳ್ಳುತ್ತದೆ ಮತ್ತು ಆರ್ಥಿಕ ಸಂಕಷ್ಟವನ್ನು ಉಲ್ಬಣಗೊಳಿಸುತ್ತದೆ.

ಮೋದಿಯವರು ಎಡೆಬಿಡದೆ ಸಾಮ್ರಾಜ್ಯಶಾಹಿ ಪರ ನೀತಿಗಳನ್ನು ಅನುಸರಿಸಿದರೂ ಟ್ರಂಪ್ ಪ್ರಾರಂಭಿಸಿದ ಸುಂಕ ಯುದ್ಧದಲ್ಲಿ ಭಾರತದ ಹಿತಾಸಕ್ತಿಗಳಿಗೆ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ವಿಫಲರಾಗಿರುವ ಮೋದಿ ಅದಕ್ಕಾಗಿ ಜಾಗತಿಕ ಪೂರೈಕೆ ಸರಪಳಿಯಲ್ಲಿ ದುರ್ಬಲ ಕೊಂಡಿಯಾಗಿರುವ ಭಾರತದ ಹತ್ತಿ ರೈತರನ್ನು ಶಿಕ್ಷಿಸಲು ನಿರ್ಧರಿಸಿದ್ದಾರೆ ಎಂದು ಎಐಕೆಎಸ್ ಮತ್ತು ಎಸ್‌ಕೆಎಂ ಖೇದ ವ್ಯಕ್ತಪಡಿಸಿವೆ.

ಸಿ2+50% ದರದಲ್ಲಿ ಕನಿಷ್ಟ ಬೆಂಬಲ ಬೆಲೆ ನೀಡಲಿಲ್ಲ.

ನವ ಉದಾರವಾದಿ ಯುಗದಲ್ಲಿ ಪ್ರಭುತ್ವ ಮತ್ತು ಬಂಡವಾಳದ ನಂಟು ಭಾರತದ ಹತ್ತಿ ರೈತರನ್ನು ಲಾಗುವಾಡುಗಳ ಕಡೆಯಿಂದಲೂ ಮತ್ತು ಮತ್ತು ಉತ್ಪನ್ನದ ಕಡೆಯಿಂದಲೂ ಹಿಂಡಿರುವುದನ್ನು ಕಂಡಿದ್ದೇವೆ. ಪ್ರಧಾನ ಮಂತ್ರಿಯಾಗಿ ತಮ್ಮ 11 ವರ್ಷಗಳ ಅವಧಿಯಲ್ಲಿ, ಮೋದಿ ಹತ್ತಿ ರೈತರಿಗೆ ಶಿಫಾರಸು ಮಾಡಿದ ಸಿ2+50% ದರದಲ್ಲಿ ಕನಿಷ್ಟ ಬೆಂಬಲ ಬೆಲೆ (ಎಂಎಸ್‌ಪಿ) ನೀಡಲಿಲ್ಲ. ಉದಾಹರಣೆಗೆ, ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ (ಸಿಎಸಿಪಿ) 2025ರ ಮುಂಗಾರು ಋತುವಿನಲ್ಲಿ ಹತ್ತಿಗೆ ಪ್ರತಿ ಕ್ವಿಂಟಲ್‌ಗೆ ರೂ.7710 ಎಂದು ಎಂಎಸ್‌ಪಿ ಘೋಷಿಸಿದೆ. ಸಿ2+50% ಸೂತ್ರವನ್ನು ಬಳಸಿದ್ದರೆ, ಅದು ಕ್ವಿಂಟಲ್‌ಗೆ ರೂ.10,075 ಆಗುತ್ತಿತ್ತು. ಸರಳವಾಗಿ ಹೇಳುವುದಾದರೆ, ಭಾರತೀಯ ಹತ್ತಿ ರೈತರು ಪ್ರಸ್ತುತ ಕ್ವಿಂಟಲ್‌ಗೆ ರೂ.2365 ಕಡಿಮೆ ಎಂಎಸ್‌ಪಿ ಪಡೆಯುತ್ತಿದ್ದಾರೆ. ಇದೇ ರೈತರಿಗೆ ಸ್ಪಷ್ಟವಾದ ದ್ರೋಹವಾಗಿದೆ. ಈಗ ಹತ್ತಿ ಬೆಲೆ ಮತ್ತಷ್ಟು ಕುಸಿಯುವಂತಾದರೆ ಅದು ರೈತರ ಸಂಪೂರ್ಣ ಲೂಟಿಯಾಗುತ್ತದೆ ಎಂದು ಎಐಕೆಎಸ್ ಈ ಮೊದಲು ಆಗಸ್ಟ್ 20ರಂದು ನೀಡಿದ ಹೇಳಿಕೆಯಲ್ಲಿ ವಿಶ್ಲೇಷಿಸಿತ್ತು.

ರೈತರಿಗೆ ಸಬ್ಸಿಡಿ ವಿಷಯದಲ್ಲಿ ಅಮೆರಿಕ ದ್ವಂದ್ವ ನೀತಿಯನ್ನು ಅನುಸರಿಸುತ್ತ, ಭಾರತದ ಹತ್ತಿ ರೈತರಿಗೆ ಸರಕಾರದ ಬೆಂಬಲವನ್ನು ಕಡಿಮೆಮಾಡಲು ಭಾರತ ಸರ್ಕಾರದೊಂದಿಗೆ ಎಷ್ಟೆಲ್ಲಾ ಲಾಬಿಮಾಡಿದೆ ಎಂಬುದು ಚೆನ್ನಾಗಿಯೇ ದಾಖಲಾಗಿರುವ ಸಂಗತಿ. ಇದರ ಪರಿಣಾಮವೆಂದರೆ, ಅಮೆರಿಕದಲ್ಲಿ, ಸರ್ಕಾರದ ಸಬ್ಸಿಡಿಗಳು ಹತ್ತಿಯ ಒಟ್ಟು ಉತ್ಪಾದನೆಯ ಮೌಲ್ಯದ ಶೇ. 12ರಷ್ಟಿದೆ ಎಂದು ಅಂದಾಜಿಸಲಾಗಿದ್ದರೆ, ಭಾರತದಲ್ಲಿ ಹತ್ತಿ ರೈತರಿಗೆ ಸರ್ಕಾರದ ಬೆಂಬಲವು ಉತ್ಪಾದನೆಯ ಮೌಲ್ಯದ ಶೇ. 2.37ರಷ್ಟು ಮಾತ್ರ. ಪ್ರಭುತ್ವ ಬೆಂಬಲದ ಮಟ್ಟದಲ್ಲಿನ ಈ ಬೃಹತ್ ಅಸಮಾನತೆಯು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹತ್ತಿ ಉತ್ಪಾದಕರ ಮೇಲೆ ಅಮೆರಿಕದ ಹತ್ತಿ ರೈತರು ಹೊಂದಿರುವ ಪ್ರಯೋಜನದ ಮೂಲವಾಗಿದೆ ಎಂದಿರುವ ಎಐಕೆಎಸ್, ಸರ್ಕಾರದ ಬೆಂಬಲದ ಮಟ್ಟದಲ್ಲಿನ ಬೃಹತ್ ಅಸಮಾನತೆ ಮತ್ತು ಅಮೆರಿಕ ಮತ್ತು ಭಾರತದಲ್ಲಿ ರೈತರ ಉತ್ಪಾದನೆಯ ಪ್ರಮಾಣದಲ್ಲಿನ ದೊಡ್ಡ ವ್ಯತ್ಯಾಸವು ಭಾರತದ ರೈತರನ್ನು ಭಾರಿ ಅನಾನುಕೂಲಕ್ಕೆ ದೂಡುತ್ತದೆ ಎಂಬ ಪರಿಸ್ಥಿತಿಯತ್ತ ಗಮನ ಸೆಳೆದಿದೆ.

ಯುಎಸ್ ಸರ್ಕಾರವು ಭಾರತದ ಮೇಲೆ ಅಮೆರಿಕದ ಇತರ ಕೃಷಿ ಉತ್ಪನ್ನಗಳಿಗೂ ಇದೇ ರೀತಿ ಭಾರತೀಯ ಮಾರುಕಟ್ಟೆಗಳನ್ನು ತೆರೆಯಲು ಒತ್ತಡ ಹೇರುತ್ತಿದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಮುಖ್ಯ. ಇಂತಹ ರೈತ-ವಿರೋಧಿ ನಿರ್ಧಾರಗಳನ್ನು ನಮ್ಮ ರೈತರು ಸಹಿಸುವುದಿಲ್ಲ ಎಂದು ಭಾರತ ಸರ್ಕಾರಕ್ಕೆ ಸ್ಪಷ್ಟಪಡಿಸದಿದ್ದರೆ, ಮೋದಿ ಸರ್ಕಾರವು ಅಮೆರಿಕದ ಒತ್ತಡಕ್ಕೆ ಮಣಿದು ಇತರ ಬೆಳೆಗಳಿಗೂ ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ. ಈ ನಿರ್ಧಾರವನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲು ಎಲ್ಲಾ ರೈತರು ಒಗ್ಗೂಡಿ ತೀವ್ರ ಆಂದೋಲನಗಳನ್ನು ಪ್ರಾರಂಭಿಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಸೆಪ್ಟೆಂಬರ್ ಒಂದರಿಂದ ಹತ್ತಿ ರೈತರ ಪ್ರತಿಭಟನೆಗೆ ಎಸ್‌ಕೆಎಂ ಕರೆ

ಆಗಸ್ಟ್ 25ರಂದು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಪತ್ರಿಕಾಗೋಷ್ಠಿಯಲ್ಲಿ, ವಿವಿಧ ರೈತ ಸಂಘಟನೆಗಳ ಮುಖಂಡರು 11 ರಾಜ್ಯಗಳ ಸುಮಾರು 70 ಲಕ್ಷ ಹತ್ತಿ ರೈತರ ಪ್ರತಿಭಟನಾ ಕ್ರಮಗಳನ್ನು ಪ್ರಕಟಿಸಿದರು. ಹತ್ತಿ ರೈತರು ಅಧಿಸೂಚನೆಯ ಪ್ರತಿಗಳನ್ನು ಸುಟ್ಟು ಸೆಪ್ಟೆಂಬರ್ 1, 2, 3, 2025 ಈ ಮೂರು ದಿನಗಳು ಹಳ್ಳಿಗಳಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸಲಿದ್ದಾರೆ.

ಗ್ರಾಮ ಸಭೆಗಳನ್ನು ಕರೆಯಲಾಗುವುದು ಮತ್ತು ಪ್ರಧಾನಿ ನರೇಂದ್ರ ಮೋದಿಯವರನ್ನು ಹತ್ತಿಯ ಮೇಲಿನ ಶೇ. 11 ಆಮದು ಸುಂಕವನ್ನು ರದ್ದುಗೊಳಿಸುವ ಮತ್ತು ಕಚ್ಚಾ ಹತ್ತಿಗೆ ಕ್ವಿಂಟಲ್‌ಗೆ ಸಿ2+50% ಶಿಫಾರಸಿನಂತೆ ರೂ. 10,075 ಎಂಎಸ್‌ಪಿಯನ್ನು ತಕ್ಷಣವೇ ಘೋಷಿಸುವಂತೆ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಗುವುದು. ನಿರ್ಣಯವನ್ನು ಪ್ರಧಾನ ಮಂತ್ರಿಗಳಿಗೆ ಕಳುಹಿಸಲಾಗುವುದು.

ಸೆಪ್ಟೆಂಬರ್ 10, 2025ರ ಮೊದಲು ಆಯಾ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಿಗೆ ಸಲ್ಲಿಸುವ ಜ್ಞಾಪಕ ಪತ್ರವನ್ನು ಬೆಂಬಲಿಸಿ ಸಹಿ ಅಭಿಯಾನ ಮತ್ತು ಮನೆ ಮನೆಗೆ ಕರಪತ್ರ ವಿತರಣೆ ನಡೆಸಲಾಗುತ್ತದೆ.

ಪ್ರಧಾನ ಮಂತ್ರಿಗಳು ಬೇಡಿಕೆಯ ಬಗ್ಗೆ ತಕ್ಷಣ ನಿರ್ಧಾರ ತೆಗೆದುಕೊಳ್ಳದಿದ್ದರೆ ಹತ್ತಿ ರೈತರು ಮಂಡಲ ಮಹಾಪಂಚಾಯತ್ ಅನ್ನು ಕರೆದು ಆಯಾ ಸಂಸತ್ತಿನ ಸದಸ್ಯರಿಗೆ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸುತ್ತಾರೆ.

ಹತ್ತಿ ಬೆಳೆಯುವ 11 ರಾಜ್ಯಗಳಲ್ಲಿನ ಎಸ್‌ಕೆಎಂ ರಾಜ್ಯ ಸಮನ್ವಯ ಸಮಿತಿಗಳು ತಕ್ಷಣವೇ ಹತ್ತಿ ರೈತರ ಸಭೆಗಳು ಮತ್ತು ಸಮಾವೇಶಗಳನ್ನು ಕರೆದು ಭವಿಷ್ಯದ ಹೋರಾಟದ ಯೋಜನೆಗಳನ್ನು ಚರ್ಚಿಸಲು ಮತ್ತು ನಿರ್ಧರಿಸಲು ಕರೆಯುತ್ತವೆ.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಜುಲೈ4, 2025ರಂದು ಅಲ್ಲಿನ ಪರಿಹಾರ ಮತ್ತು ಮರುವಸತಿ ಮಂತ್ರಿಗಳು ನೀಡಿದ ಮಾಹಿತಿಯ ಪ್ರಕಾರ ಮಹಾರಾಷ್ಟ್ರದ ಮರಾಠವಾಡ ಮತ್ತು ವಿದರ್ಭ ಪ್ರದೇಶದಲ್ಲಿ ಮಾರ್ಚ್ ಮತ್ತು ಎಪ್ರಿಲ್ 2025ರ ಎರಡೇ ತಿಂಗಳುಗಳಲ್ಲಿ 479 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹತ್ತಿ ರೈತರಲ್ಲಿ ಇಂತಹ ವ್ಯಾಪಕ ಆತ್ಮಹತ್ಯೆಗಳ ಹಿನ್ನೆಲೆಯಲ್ಲಿ ಎಸ್‌ಕೆಎಂನ ಒಂದು ನಿಯೋಗವು ಸೆಪ್ಟೆಂಬರ್ 17 ಮತ್ತು 18, 2025ರಂದು ಮಹಾರಾಷ್ಟ್ರದ ವಿದರ್ಭಕ್ಕೆ ಭೇಟಿ ನೀಡಲಿದೆ ಎಂದೂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಲಾಯಿತು.

ಈ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಹಿರಿಯ ಎಸ್‌ಕೆಎಂ ಮುಖಂಡರಾದ ಹನ್ನನ್ ಮೊಲ್ಲ, ರಾಕೇಶ್ ಟಿಕಾಯತ್, ರಾಜನ್ ಕ್ಷೀರಸಾಗರ್, ಪ್ರೇಮ್‌ಸಿಂಗ್ ಗೆಹ್ಲಾವತ್ ಮತ್ತು ಪಿ.ಕೃಷ್ಣಪ್ರಸಾದ್ ಮಾತಾಡಿದರು.

ಪುಟ 15 ನೋಡಿ

‘ಭೂಸುಧಾರಣಾ ಕಾಯ್ದೆ ಬಂದಾಗ ಬೆಳ್ತಂಗಡಿ, ಸುಳ್ಯ, ಮಂಗಳೂರು, ಬಂಟ್ವಾಳದ ಹಲವು ಗೇಣಿ ಜಮೀನುಗಳಲ್ಲಿ ಭೂ ಮಾಲಕ ವಿರೇಂದ್ರ ಹೆಗ್ಗಡೆ ಮತ್ತು ಸಣ್ಣ ರೈತರು ವಾದಿ ಪ್ರತಿವಾದಿಗಳಾಗಿ ಲ್ಯಾಂಡ್ ಟ್ರಿಬ್ಯುನಲ್ ಮೊರೆ ಹೋದರು. ಅಲ್ಲಿ ವಿಚಾರಣೆ ನಡೆದು ಹಲವು ಪ್ರಕರಣಗಳಲ್ಲಿ ರೈತರಿಗೆ ಜಯವಾಯ್ತು. ಧರ್ಮಸ್ಥಳದ ಭೂಮಿ ರೈತರ ಪಾಲಾಯ್ತು. ಇಷ್ಟಾದರೂ ಹೆಗ್ಗಡೆಯವರು ಸುಮ್ಮನೆ ಕೂರಲಿಲ್ಲ. ಉಳುವವನೇ ಹೊಲದೊಡೆಯ ಕಾನೂನಿನಂತೆ ರೈತರ ಪಾಲಾದ ಭೂಮಿಯನ್ನು ಮರಳಿ ಪಡೆಯಲು ಅವರು ಹೈಕೋರ್ಟ್ ಮೆಟ್ಟಿಲೇರಿದರು.

ಧರ್ಮಸ್ಥಳದ ಗೇಣಿದಾರರು ಮತ್ತು ಹೆಗ್ಗಡೆ ವಾದಿ- ಪ್ರತಿವಾದಿಗಳಾದರು.

ಭೂಸುಧಾರಣಾ ಕಾಯ್ದೆ:

ಧರ್ಮಸ್ಥಳದ ಗೇಣಿದಾರರು ಮತ್ತು ಹೆಗ್ಗಡೆ ವಾದಿ– ಪ್ರತಿವಾದಿಗಳು



ಚಕ್ರವರ್ತಿ ಸೂಲಿಬೆಲೆಯವರು ಇತ್ತೀಚೆಗೆ ಮಾತನಾಡುತ್ತಾ ‘ಭೂಸುಧಾರಣಾ ಕಾಯ್ದೆ ಬಂದಾಗ ಧರ್ಮಸ್ಥಳದ ಭೂಮಿಯನ್ನು ಪಡೆಯಲು ರೈತರೇ ಹಿಂದೇಟು ಹಾಕಿದರು. ಆಗ ಹೆಗ್ಗಡೆಯವರೇ ರೈತರನ್ನು ಕರೆದು ಭೂಮಿ ನೀಡಿದರು’ ಎಂದು ಹೇಳಿದ್ದಾರೆ. ಇದು ಅಪ್ಪಟ ಸುಳ್ಳು. ಕಮ್ಯೂನಿಸ್ಟರ ಸಂಘರ್ಷದಿಂದ ಧರ್ಮಸ್ಥಳದ ಕೃಷಿ ಕಾರ್ಮಿಕರು, ಕೃಷಿಕರಿಗೆ ಭೂಸುಧಾರಣಾ ಕಾಯ್ದೆಯ ಭೂಮಿ ಲಭಿಸಿತ್ತು. ಹೋರಾಟದಿಂದ ನೇರವಾಗಿ ದಕ್ಕದೇ ಇದ್ದಾಗ ಲ್ಯಾಂಡ್ ಟ್ರಿಬ್ಯುನಲ್, ನ್ಯಾಯಾಲಯಗಳ ಮೂಲಕ ರೈತರು ಭೂಮಿ ತಮ್ಮದಾಗಿಸಿಕೊಂಡರು. ಕಾನೂನಿನ ಮೂಲಕ ರೈತರು ಭೂಮಿಯನ್ನು ತಮ್ಮದಾಗಿಸಿಕೊಂಡರೂ ಮತ್ತೆ ಅದನ್ನು ಕಿತ್ತುಕೊಳ್ಳಲು ಹೆಗ್ಗಡೆಯವರು ಹೈಕೋರ್ಟ್ ಮೆಟ್ಟಿಲೇರಿದರು. ಇದನ್ನು ಲ್ಯಾಂಡ್ ಟ್ರಿಬ್ಯುನಲ್ ದಾಖಲೆಗಳು, ಹೈಕೋರ್ಟ್ ದಾಖಲೆಗಳು ಮಾತನಾಡುತ್ತವೆ.

ಇಡೀ ರಾಜ್ಯಾದ್ಯಂತ ಬಹುತೇಕ ಜಿಲ್ಲೆಗಳಲ್ಲಿ ಭೂಮಿ ಹೊಂದಿರುವ ಧರ್ಮಸ್ಥಳ ಟ್ರಸ್ಟ್, ಜನಸಾಮಾನ್ಯರ ಸಣ್ಣ ಭೂಮಿಯನ್ನೂ ಬಿಡದೇ ಕಬಳಿಕೆ ಮಾಡಿರುವುದರಿಂದಲೇ ಇಂದು ಬೆಳ್ತಂಗಡಿ, ಉಜಿರೆಯ ಜನಸಾಮಾನ್ಯರು ಹೋರಾಟದ ಜೊತೆ ಗಟ್ಟಿಯಾಗಿ ನಿಂತಿದ್ದಾರೆ. ಭೂಸುಧಾರಣಾ ಕಾಯ್ದೆ ಜಾರಿಯಾದಾಗ ಧರ್ಮಸ್ಥಳ ಮಂಜುನಾಥ ದೇವರ ಹೆಸರಿನಲ್ಲಿದ್ದ ಭೂಮಿ, ಧರ್ಮಸ್ಥಳ ಬೀಡುವಿನ ಹೆಸರಿನಲ್ಲಿದ್ದ ಭೂಮಿ ರೈತರಿಗೆ ಸಿಗುವಂತೆ ಮಾಡಿದ್ದು ಕಮ್ಯುನಿಸ್ಟ್ ಹೋರಾಟ. ಕೊಲೆಯಾದ ಪದ್ಮಲತಾ ಅವರ ತಂದೆ ಎಂ.ಕೆ. ದೇವಾನಂದರು ಕೂಡಾ ಈ ಹೋರಾಟದ ಭಾಗವಾಗಿದ್ದರು.

ಭೂಸುಧಾರಣಾ ಕಾಯ್ದೆ ಜಾರಿಯಾದಾಗ ಧರ್ಮಸ್ಥಳ ಟ್ರಸ್ಟ್ ಗೇಣಿದಾರ ರೈತರಿಗೆ ಭೂಮಿ ನೀಡಲು ಸಿದ್ದರಿರಲಿಲ್ಲ. ಹಾಗಾಗಿ ಬಹುತೇಕ ರೈತರು ಕಮ್ಯೂನಿಸ್ಟ್ ಚಳವಳಿಯ ಆಶ್ರಯ ಪಡೆದು ಭೂಮಿ ಧಕ್ಕಿಸಿಕೊಂಡರು. ಹೋರಾಟ ಮಾಡಿಯೂ ಭೂಮಿ ಸಿಗದೇ ಇದ್ದ ರೈತರು ಲ್ಯಾಂಡ್ ಟ್ರಿಬ್ಯುನಲ್ (ಭೂ ನ್ಯಾಯಾಧಿಕರಣ) ಮೊರೆ ಹೋದರು. ರೈತರು ಮಾತ್ರವಲ್ಲ, ಧರ್ಮಸ್ಥಳ ಟ್ರಸ್ಟ್‌ನ ವಿರೇಂದ್ರ ಹೆಗ್ಗಡೆಯವರೂ ಕೂಡಾ ಲ್ಯಾಂಡ್ ಟ್ರಿಬ್ಯುನಲ್‌ಗೆ ಹೋಗಿ ರೈತರಿಂದ ವಾಪಸ್ ನಮಗೇ ಭೂಮಿ ಕೊಡಿಸಿ ಎಂದು ಕೇಸು ಹಾಕಿದರು. ಈ ರೀತಿ ಬೆಳ್ತಂಗಡಿ, ಸುಳ್ಯ, ಮಂಗಳೂರು, ಬಂಟ್ವಾಳದ ಹಲವು ಗೇಣಿ ಜಮೀನುಗಳಲ್ಲಿ ಭೂ ಮಾಲಕ ವಿರೇಂದ್ರ ಹೆಗ್ಗಡೆ ಮತ್ತು ಸಣ್ಣ ರೈತರು ವಾದಿ – ಪ್ರತಿವಾದಿಗಳಾಗಿ ಲ್ಯಾಂಡ್ ಟ್ರಿಬ್ಯುನಲ್ ಮೊರೆ ಹೋದರು. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ವಿಚಾರಣೆ ನಡೆದು ಹಲವು ಪ್ರಕರಣಗಳಲ್ಲಿ ರೈತರಿಗೆ ಜಯವಾಯ್ತು. ಧರ್ಮಸ್ಥಳದ ಭೂಮಿ ರೈತರ ಪಾಲಾಯ್ತು. ಇಷ್ಟಾದರೂ ಹೆಗ್ಗಡೆಯವರು ಸುಮ್ಮನೆ ಕೂರಲಿಲ್ಲ. ಉಳುವವನೇ ಹೊಲದೊಡೆಯ ಕಾನೂನಿನಂತೆ ರೈತರ ಪಾಲಾದ ಭೂಮಿಯನ್ನು ಮರಳಿ ಪಡೆಯಲು ಅವರು ಹೈಕೋರ್ಟ್ ಮೆಟ್ಟಿಲೇರಿದರು.

ಗೇಣಿದಾರ ರೈತರ ಪರವಾಗಿ ಲ್ಯಾಂಡ್ ಟ್ರಿಬ್ಯುನಲ್ ಆದೇಶ ನೀಡಿದಾಗ ಹೆಗ್ಗಡೆಯವರು ಹೈಕೋರ್ಟ್‌ನಲ್ಲಿ ರಿಟ್ ಪಿಟೀಷನ್ ಹಾಕಿದರು. ಲ್ಯಾಂಡ್ ಟ್ರಿಬ್ಯುನಲ್ ಹೆಗ್ಗಡೆಯವರ ಪರ ಆದೇಶ ನೀಡಿದಾಗ ಹಲವು ರೈತರುಗಳು ಹೈಕೋರ್ಟ್‌ನಲ್ಲಿ ರಿಟ್ ಪಿಟೀಷನ್ ದಾಖಲಿಸಿದರು. ಹೈಕೋರ್ಟ್ ರಿಟ್ ಪಿಟೀಷನ್(writ petition) ಗಳಲ್ಲಿ ಕೆಲವು ತೀರ್ಪುಗಳು ರೈತರ ಪರವಾಗಿ ಬಂದಾಗ ಅದನ್ನು ಪ್ರಶ್ನಿಸಿ ಹೆಗ್ಗಡೆಯವರು ವಿಭಾಗೀಯ ಪೀಠದಲ್ಲಿ ರಿಟ್ ಅಪೀಲ್ (writ appeal) ಸಲ್ಲಿಸಿದರು. ಉದಾಹರಣೆಗೆ WP 5191/95, WA 758 ಸೇರಿದಂತೆ ನೂರಾರು ಪ್ರಕರಣಗಳು ಹೈಕೋರ್ಟ್‌ನಲ್ಲಿ ಇತ್ಯರ್ಥಗೊಂಡಿರುವುದನ್ನು ನಾವು ಗಮನಿಸಬಹುದು.

300ಕ್ಕೂ ಹೆಚ್ಚು ಪ್ರಕರಣಗಳಲ್ಲಿ ವಾದಿ–ಪ್ರತಿವಾದಿ

ಗೇಣಿದಾರರಿಗೆ, ಭೂಮಿಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಹೆಗ್ಗಡೆಯವರು ಹೈಕೋರ್ಟ್‌ನಲ್ಲಿ ವಾದಿ–ಪ್ರತಿವಾದಿಯಾಗಿದ್ದಾರೆ. ಕೋರ್ಟ್ ದಾಖಲೆಗಳನ್ನು ಓದಲು ಸಾಧ್ಯವಾಗದವರು ಧರ್ಮಸ್ಥಳ, ಬೆಳ್ತಂಗಡಿ, ಉಜಿರೆಯ ಗ್ರಾಮಸ್ಥರನ್ನು ಮಾತಾಡಿಸಿಕೊಂಡು ಬಂದರೆ ಭೂಸುಧಾರಣಾ ಕಾಯ್ದೆ ಧರ್ಮಸ್ಥಳದಲ್ಲಿ ಜಾರಿಯಾದ ಕರಾಳ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ನೂರಾರು ರೈತರ ಪೈಕಿ ಸಣ್ಣ ಉದಾಹರಣೆಯಾಗಿ ಬೆಳ್ತಂಗಡಿಯ ಲಾಯಿಲ ಗ್ರಾಮದ ರಾಘವೇಂದ್ರನಗರ ರುಕ್ಮಯ್ಯ ಪೂಜಾರಿಯವರ ಮನೆ ಯಾವುದು ಎಂದು ಹುಡುಕಿಕೊಂಡು ಹೋದರೆ ತಿಳಿಯುತ್ತದೆ.

ರುಕ್ಮಯ್ಯ ಭಂಡಾರಿಯವರ ಮೇಲೆ ದೈಹಿಕ ದಾಳಿ

ರೈತರೂ, ಗೋವಾ ವಿಮೋಚನಾ ಹೋರಾಟಗಾರರೂ, ರೈತ ಸಂಘದ ಮುಖಂಡರೂ ಆಗಿದ್ದ ರುಕ್ಮಯ್ಯ ಭಂಡಾರಿಯವರಿಗೆ ಭೂಸುಧಾರಣಾ ಕಾಯ್ದೆಯಂತೆ ಧರ್ಮಸ್ಥಳ ದೇವರ ಹೆಸರಿನಲ್ಲಿದ್ದ ಜಮೀನು ಬರಬೇಕಿತ್ತು. ಆದರೆ ಧರ್ಮಸ್ಥಳದ ಹೆಗ್ಗಡೆಯವರು ಭೂಮಿ ನೀಡಲು ಹಿಂದೇಟು ಹಾಕಿದಾಗ ರುಕ್ಮಯ್ಯ ಭಂಡಾರಿಯವರು ಲ್ಯಾಂಡ್ ಟ್ರಿಬ್ಯುನಲ್ ಮೊರೆ ಹೋಗುತ್ತಾರೆ. ಈ ಸಂದರ್ಭದಲ್ಲಿ ರುಕ್ಮಯ್ಯ ಭಂಡಾರಿಯವರ ಮೇಲೆ ದೈಹಿಕ ದಾಳಿಗಳು ನಡೆಯುತ್ತದೆ. ರುಕ್ಮಯ್ಯ ಭಂಡಾರಿಯವರಿಗೆ ಕಮ್ಯೂನಿಸ್ಟ್ ಚಳವಳಿ ಬೆಂಗಾವಲಾಗಿ ನಿಂತು ಭೂಸುಧಾರಣಾ ಕಾಯ್ದೆಯ ಭೂಮಿ ದೊರಕುವಂತೆ ಮಾಡುತ್ತದೆ. ಲ್ಯಾಂಡ್ ಟ್ರಿಬ್ಯುನಲ್ ಮಾತ್ರವಲ್ಲದೇ, ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದಲ್ಲೂ ಭೂಮಿ ರುಕ್ಮಯ್ಯ ಭಂಡಾರಿಯವರಿಗೇ ಸೇರಿದ್ದು ಎಂಬ ಆದೇಶ ಬರುತ್ತದೆ. ಇಷ್ಟಾದರೂ ಹೆಗ್ಗಡೆಯವರು ಪಟ್ಟು ಬಿಡದೇ ಹೈಕೋರ್ಟ್‌ನಲ್ಲಿ ದಾವೆ ಹೂಡುತ್ತಾರೆ. ಹೈಕೋರ್ಟ್ ಕೂಡಾ ಲ್ಯಾಂಡ್ ಟ್ರಿಬ್ಯುನಲ್ ಆದೇಶವನ್ನೇ ಎತ್ತಿ ಹಿಡಿದು ರುಕ್ಮಯ್ಯ ಭಂಡಾರಿಯವರಿಗೆ ಭೂಮಿ ಸೇರಿದ್ದು ಎಂದು ತೀರ್ಪು ನೀಡುತ್ತದೆ. ಈ ರೀತಿ ಪ್ರತಿಭಟನೆ–ಕಾನೂನು ಹೋರಾಟಗಳ ಮೂಲಕ ತುಂಡು ಭೂಮಿ ದಕ್ಕಿಸಿಕೊಂಡ ರುಕ್ಮಯ್ಯ ಭಂಡಾರಿಯವರು ಸಾಯುವ ಕಾಲಕ್ಕೆ ಮಕ್ಕಳಿಗೆ ಭೂಮಿ ಹಂಚಿಕೆ ಮಾಡುವಾಗ ಹೋರಾಟದ ಹೆಗ್ಗುರುತಾಗಿ ಸಿಪಿಐ(ಎಂ) ಪಕ್ಷಕ್ಕೆಂದು 8 ಸೆಂಟ್ಸ್ (ಅಂದಾಜು ಮೂರುಕಾಲು ಗುಂಟೆ) ಜಮೀನಿನ ಪಾಲು ಮೀಸಲಿರಿಸುತ್ತಾರೆ.

ಧರ್ಮಸ್ಥಳದ ಗೇಣಿದಾರ ರೈತರ ಹೋರಾಟ

ಭೂಸುಧಾರಣಾ ಕಾಯ್ದೆ ಜಾರಿಯಾದಾಗ ನಡೆದ ಜನ ಸಂಘರ್ಷದ ಇತಿಹಾಸದಲ್ಲಿ ಬೆಳ್ತಂಗಡಿ, ಧರ್ಮಸ್ಥಳಕ್ಕೊಂದು ಪ್ರಮುಖ ಸ್ಥಾನವಿದೆ. ಬಡ, ಅನಕ್ಷರಸ್ಥ ರೈತರನ್ನು ಪ್ರತಿನಿಧಿಸಿದ್ದ ಅಂದಿನ ಕಮ್ಯೂನಿಸ್ಟ್ ನಾಯಕರು ರೈತರಿಗೆ ಧರ್ಮಸ್ಥಳದಿಂದ ಭೂಮಿ ಕೊಡಿಸಿದರು. ಅದಕ್ಕೆ ಪ್ರತಿಯಾಗಿ ಕಮ್ಯೂನಿಸ್ಟ್ ನಾಯಕರು ದೈಹಿಕ ಹಲ್ಲೆ, ಕುಟುಂಬಸ್ಥರ ಸಾವು, ನೋವುಗಳನ್ನು ಎದುರಿಸಬೇಕಾಯಿತು. ಹಲವು ಕಮ್ಯೂನಿಸ್ಟರನ್ನು ಊರು ಬಿಟ್ಟು ಓಡಿಸಿದರು. ರೈತರ ಭೂಮಿಗಾಗಿ ಹೋರಾಟ ಮಾಡಿದರು ಎಂಬ ಒಂದೇ ಕಾರಣಕ್ಕಾಗಿ ಎಂ.ಕೆ. ದೇವಾನಂದರು ತಮ್ಮ ಮಗಳು ಪದ್ಮಲತಾರನ್ನೇ ಕಳೆದುಕೊಳ್ಳಬೇಕಾಯಿತು. ಪದ್ಮಲತಾ ನ್ಯಾಯಕ್ಕಾಗಿ ನಡೆದ ಹೋರಾಟ ಎಂತಹ ಸಂಘರ್ಷದ ವಾತಾವರಣ ನಿರ್ಮಿಸಿತು ಎಂದರೆ, ಬೆಳ್ತಂಗಡಿಯಲ್ಲಿ ಸಿಪಿಐ(ಎಂ) ಕಚೇರಿಯನ್ನೇ ಕ್ಲೋಸ್ ಮಾಡಬೇಕಾಯಿತು. ಇದೆಲ್ಲದರ ಪ್ರಾರಂಭ ಯಾವುದೆಂದರೆ, ಧರ್ಮಸ್ಥಳದ ಗೇಣಿದಾರ ರೈತರ ಹೋರಾಟ!

ಹಾಗಾಗಿ, ಹೆಗ್ಗಡೆಯವರು ಕರೆದು ಕರೆದು ರೈತರಿಗೆ ಭೂಮಿ ನೀಡಿದರು ಎಂಬುದು ಅಪ್ಪಟ ಸುಳ್ಳು. ಕಮ್ಯೂನಿಸ್ಟರ ಸಂಘರ್ಷದಿಂದ ಧರ್ಮಸ್ಥಳದ ಕೃಷಿ ಕಾರ್ಮಿಕರು, ಕೃಷಿಕರಿಗೆ ಭೂಸುಧಾರಣಾ ಕಾಯ್ದೆಯ ಭೂಮಿ ಲಭಿಸಿತ್ತು. ಹೋರಾಟದಿಂದ ನೇರವಾಗಿ ದಕ್ಕದೇ ಇದ್ದಾಗ ಲ್ಯಾಂಡ್ ಟ್ರಿಬ್ಯುನಲ್, ನ್ಯಾಯಾಲಯಗಳ ಮೂಲಕ ರೈತರು ಭೂಮಿ ತಮ್ಮದಾಗಿಸಿಕೊಂಡರು. ಆ ಸಂದರ್ಭದಲ್ಲೂ ಧರ್ಮಸ್ಥಳದ ದಾಳಿಯನ್ನು ರೈತರು ಎದುರಿಸಿ ನಿಂತಿದ್ದ ಕಮ್ಯೂನಿಸ್ಟ್ ಚಳವಳಿಯ ಬೆಂಬಲದಿಂದ ಎಂಬುದು ನಿರ್ವಿವಾದ. ಕಾನೂನಿನ ಮೂಲಕ ರೈತರು ಭೂಮಿಯನ್ನು ತಮ್ಮದಾಗಿಸಿಕೊಂಡರೂ ಮತ್ತೆ ಅದನ್ನು ಕಿತ್ತುಕೊಳ್ಳಲು ಹೆಗ್ಗಡೆಯವರು ಹೈಕೋರ್ಟ್ ಮೆಟ್ಟಿಲೇರಿದರು. ಇದನ್ನು ಲ್ಯಾಂಡ್ ಟ್ರಿಬ್ಯುನಲ್ ದಾಖಲೆಗಳು, ಹೈಕೋರ್ಟ್ ದಾಖಲೆಗಳು ಮಾತನಾಡುತ್ತದೆ. ವಸ್ತುಸ್ಥಿತಿ ಹೀಗಿದ್ದಾಗ, ಹೆಗ್ಗಡೆಯವರು ಭೂಸುಧಾರಣಾ ಕಾಯ್ದೆಯ ಕಾಲದಲ್ಲಿ ರೈತರಿಗೆ ಕರೆದು ಕರೆದು ಭೂ ವಿತರಣೆ ಮಾಡಿದರು ಎನ್ನುವ ಸೂಲಿಬೆಲೆ ಭಾಷಣ ಅಪ್ಪಟ ಸುಳ್ಳು ಎಂದು ಸಾಬೀತಾಗುತ್ತದೆ.

ನವೀನ್ ಸೂರಿಂಜೆ– ಪತ್ರಕರ್ತರು

ಕೃಪೆ: ಕನ್ನಡಪ್ಲಾನೆಟ್ ಡಾಟ್ ಕಾಂ

●

ಸಲ್ವಾ ಜುಡುಮ್ ಪ್ರಕರಣ:

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಗೃಹಮಂತ್ರಿಗಳ ದ್ವೇಷಪ್ರಚಾರ

ಉಪರಾಷ್ಟ್ರಪತಿಗಳ ಹಠಾತ್ ರಾಜೀನಾಮೆ ಮತ್ತು ಆ ವಿಷಯದಲ್ಲಿ ಆಳುವ ಪಕ್ಷದ ವರ್ತನೆ ಬಹಳಷ್ಟು ಅನುಮಾನಗಳನ್ನು ಸೃಷ್ಟಿಸಿದ್ದರೆ, ಈಗ ಆ ಸ್ಥಾನಕ್ಕೆ ಚುನಾವಣೆ ಸಂವಿಧಾನವನ್ನು ರಕ್ಷಿಸುವ ಹೋರಾಟವಾಗಿ ವಿಕಸನಗೊಳ್ಳುತ್ತಿದೆ. ಸ್ವಾಭಾವಿಕವಾಗಿಯೇ, ಸಂವಿಧಾನವನ್ನು ನಾಶಮಾಡಿ ಅದರ ಸ್ಥಳದಲ್ಲಿ ಮನು ಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವವರು ಪ್ರತಿಪಕ್ಷಗಳ ಅಭ್ಯರ್ಥಿ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿಯವರ ವಿರುದ್ಧ ದ್ವೇಷವನ್ನು ಹೊರಹಾಕುತ್ತಿದ್ದಾರೆ. ಅವರ ಬಗ್ಗೆ ಅಮಿತ್ ಶಾ ಟೀಕೆ ಈ ದ್ವೇಷದ ಅಭಿವ್ಯಕ್ತಿಯಾಗಿ ಕಾಣುತ್ತಿದೆ. ಸಲ್ವಾ ಜುಡುಮ್ ತೀರ್ಪು ಕುರಿತಂತೆ ಕೇಂದ್ರ ಗೃಹಮಂತ್ರಿಗಳು ಹೇಳಿದ್ದನ್ನು ಗಮನಿಸಿದರೆ, 2007ರಿಂದ 2025 ರವರೆಗೆ ಇಡೀ ಸುಪ್ರೀಂ ಕೋರ್ಟ್ ನಕ್ಸಲ್ ವಾದಿಗಳನ್ನು ಬೆಂಬಲಿಸುತ್ತಿದೆ ಎಂದು ವಾದಿಸಿದಂತಾಗುತ್ತದೆ.

– ಸಿ.ಸಿದ್ದಯ್ಯ

ಉಪರಾಷ್ಟ್ರಪತಿ ಚುನಾವಣೆಗೆ 'ಇಂಡಿಯಾ' ಕೂಟದ ಅಭ್ಯರ್ಥಿಯಾಗಿರುವ ನ್ಯಾ.ಸುದರ್ಶನ್ ರೆಡ್ಡಿ ಅವರನ್ನು ನಕ್ಸಲ್ ಬೆಂಬಲಿಗ ಎಂದು ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. 2011ರಲ್ಲಿ ಛತ್ತೀಸ್‌ಗಢದಲ್ಲಿ ಮಾವೋವಾದಿಗಳ ವಿರುದ್ಧ ಪ್ರಭುತ್ವ ಪ್ರಾಯೋಜಿತ ಹತ್ಯೆಗಳು ಸೇರಿದಂತೆ ಹಲವಾರು ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಸಲ್ವಾ ಜುಡುಮ್ ಎಂಬ ಸಂಘಟನೆಯನ್ನು ಕಾನೂನುಬಾಹಿರ ಎಂದು ಘೋಷಿಸಿದ ಇಬ್ಬರು ನ್ಯಾಯಾಧೀಶರ ಪೀಠದಲ್ಲಿ ನ್ಯಾ. ಸುದರ್ಶನ್ ರೆಡ್ಡಿ ಒಬ್ಬರು. ಇದನ್ನೇ ಅಮಿತ್ ಶಾ ಟೀಕಿಸುತ್ತಿದ್ದಾರೆ. ಅಮಿತ್ ಶಾ ಅವರ ಹೇಳಿಕೆಗಳನ್ನು ಖ್ಯಾತ ನ್ಯಾಯಮೂರ್ತಿಗಳಾದ ಚೆಲಮೇಶ್ವರ್, ಕುರಿಯನ್ ಜೋಸೆಫ್ ಮತ್ತು ಮದನ್ ಬಿ ಲೋಕೂರ್ ಸೇರಿದಂತೆ 18 ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರು ತೀವ್ರವಾಗಿ ವಿರೋಧಿಸಿದ್ದಾರೆ.

ಆಗಸ್ಟ್ 22ರಂದು ಕೇರಳದಲ್ಲಿ ಮಾಡಿದ ಭಾಷಣದಲ್ಲಿ ಅಮಿತ್ ಶಾ ಹೇಳಿದ್ದು ಹೀಗೆ: "ಸುದರ್ಶನ್ ರೆಡ್ಡಿ ನಕ್ಸಲ್‌ವಾದಕ್ಕೆ ಸಹಾಯ ಮಾಡಿದ ವ್ಯಕ್ತಿ. ಅವರು ಸಲ್ವಾ ಜುಡುಮ್ ತೀರ್ಪು ನೀಡಿದರು. ಸಲ್ವಾ ಜುಡುಮ್ ತೀರ್ಪು ನೀಡದಿದ್ದರೆ, 2020ರ ವೇಳೆಗೆ ನಕ್ಸಲ್ ಭಯೋತ್ಪಾದನೆ ಕೊನೆಗೊಳ್ಳುತ್ತಿತ್ತು".

ಭಾರತೀಯ ಸಮಾಜದಲ್ಲಿ ಮಾವೋವಾದಿಗಳಂತಹ ಸಂಘಟನೆಗಳು ಏಕೆ ರೂಪುಗೊಳ್ಳುತ್ತವೆ ಎಂಬುದು ಗೃಹಸಚಿವರಿಗೆ ಅರ್ಥವಾಗುತ್ತಿಲ್ಲ. ಮಾತ್ರವಲ್ಲ, ಅಂತಹ ಸಂಘಟನೆಗಳನ್ನು ಎದುರಿಸಲು ಸರ್ಕಾರ ಕಾನೂನುಬಾಹಿರ ಸಂಘಟನೆಗಳನ್ನು ಹುಟ್ಟುಹಾಕುವುದರ ಅಪಾಯಗಳ ಬಗ್ಗೆಯೂ ಇವರಿಗೆ ಅರ್ಥವಾದಂತಿಲ್ಲ ಎಂಬುದು ಇವರ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಸಲ್ವಾ ಜುಡುಮ್ ಅನ್ನು ಟೀಕಿಸಿದ ಎಲ್ಲಾ ನ್ಯಾಯಾಧೀಶರು, ಅಂದರೆ ನ್ಯಾಯಮೂರ್ತಿಗಳಾದ ಕೆ.ಜಿ.ಬಾಲಕೃಷ್ಣನ್, ಪಿ.ಸದಾಶಿವಂ, ಜೆ.ಎಂ.ಬನ್ಸಾಲ್, ಅಫ್ತಾಬ್ ಅಲಂ, ನಿಜ್ಜರ್ ಈ ಎಲ್ಲರೂ ನಕ್ಸಲ್ ಬೆಂಬಲಿಗರೇ? ಗುಜರಾತ್‌ನಲ್ಲಿ ನಡೆದ ಪ್ರಜಾಪತಿ ಎನ್‌ಕೌಂಟರ್ ಪ್ರಕರಣದಲ್ಲಿ ನ್ಯಾ. ಸದಾಶಿವಂ ಅವರು ಅಮಿತ್ ಶಾ ಅವರನ್ನು ಖುಲಾಸೆಗೊಳಿಸಿದ್ದು, ನಿವೃತ್ತಿಯ ನಂತರ ಅವರು ಕೇರಳದ ರಾಜ್ಯಪಾಲರಾಗಿ ನೇಮಕಗೊಂಡರು. ಅವರನ್ನೂ ಅಮಿತ್ ಶಾ ನಕ್ಸಲ್ ಬೆಂಬಲಿಗ ಎಂದು ಕರೆಯುತ್ತಾರೆಯೇ? ನ್ಯಾ. ಸುದರ್ಶನ್ ರೆಡ್ಡಿ ವಿರುದ್ಧ ಮಾತ್ರ ಇಂತಹ ಟೀಕೆ ಏಕೆ?

ಸಲ್ವಾ ಜುಡುಮ್ ಪ್ರಕರಣವೇನು?


ಛತ್ತೀಸ್‌ಗಢದಲ್ಲಿ ಸಲ್ವಾ ಜುಡುಂ ಎಂಬುದು ಸರಕಾರವೇ ಪ್ರಾಯೋಜಿಸಿದ ಒಂದು ಸಂಘಟನೆ, ಮಾವೋವಾದಿಗಳ ವಿರುದ್ಧ ಕಾರ್ಯಾಚರಣೆಗೆಂದು ಇದನ್ನು ಪ್ರಾಯೋಜಿಸಲಾಗಿತ್ತು. ಆದರೆ ಈ ಪ್ರಭುತ್ವ ಪ್ರಾಯೋಜಿತ ಸಂಘಟನೆ ನಾಗರಿಕರ ಹತ್ಯೆಗಳು ಸೇರಿದಂತೆ ಹಲವಾರು ಅಪರಾಧೀ ಚಟುವಟಿಕೆಗಳಲ್ಲಿ ಭಾಗಿಯಾಗಿತ್ತು. ಪ್ರಭುತ್ವವು ಸಲ್ವಾ ಜುಡುಮ್‌ಗೆ ಶಸ್ತ್ರಾಸ್ತ್ರಗಳನ್ನು ಒದಗಿಸುತಿತ್ತು ಮತ್ತು ಅವರು ಗಲಭೆಗಳು ಮತ್ತು ದರೋಡೆಗಳಲ್ಲಿ ಭಾಗಿಯಾಗುತ್ತಿದ್ದರು. 2007ರಲ್ಲಿ, ಪ್ರಾಧ್ಯಾಪಕಿ ಮತ್ತು ಸಾಮಾಜಿಕ ಕಾರ್ಯಕರ್ತೆ ನಂದಿನಿ ಸುಂದರ್, ಇತಿಹಾಸಕಾರ ರಾಮಚಂದ್ರ ಗುಹಾ ಮತ್ತು ಮಾಜಿ ಐಎಎಸ್ ಅಧಿಕಾರಿ ಇ.ಎ. ಎಸ್.ಶರ್ಮಾ ಅವರು ಛತ್ತೀಸ್‌ಗಢದಲ್ಲಿ ಸಲ್ವಾ ಜುಡುಮ್ ಎಂಬ ಸಂಘಟನೆಯನ್ನು ನಿಷೇಧಿಸುವಂತೆ ಕೋರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದರು.

ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್, ನ್ಯಾ. ತರುಣ್ ಚಟರ್ಜಿ ಮತ್ತು ನ್ಯಾ. ರವೀಂದ್ರನ್ ಅವರನ್ನೊಳಗೊಂಡ ಪೀಠವು 2007ರಲ್ಲಿ ಸಲ್ವಾ ಜುಡುಮ್ ಪ್ರಕರಣವನ್ನು ಮೊದಲು ಆಲಿಸಿತು. ಮುಂದಿನ ವರ್ಷ, ಆಗಿನ ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್ ಮತ್ತು ನ್ಯಾ. ಅಫ್ತಾಬ್ ಅಲಂ ಇವರುಗಳು ಇದ್ದ ನ್ಯಾಯಪೀಠ ವಿಚಾರಣೆ ಮುಂದುವರೆಸಿತು.

ಮಾರ್ಚ್ 31, 2008ರಂದು, ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್, ನ್ಯಾ. ಪಿ.ಸದಾಶಿವಂ ಮತ್ತು ನ್ಯಾ. ಅಫ್ತಾಬ್ ಆಲಂ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್‌ನ ಪೀಠವು, ಛತ್ತೀಸ್‌ಗಢ ಸರ್ಕಾರಕ್ಕೆ 2007ರ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (NHRC) ಸಲ್ವಾ ಜುಡುಮ್ ವರದಿಗಳನ್ನು ಜಾರಿಗೆ ತರುವಂತೆ ನಿರ್ದೇಶನ ನೀಡಿತು. "ವರದಿಯನ್ನು ಓದುವುದು ನೋವಿನ ಸಂಗತಿ. ಸಲ್ವಾ ಜುಡುಮ್‌ಗೆ ಶಸ್ತ್ರಾಸ್ತ್ರಗಳನ್ನು ನೀಡಲಾಗಿದೆ ಮತ್ತು ಅವರು ಗಲಭೆಗಳು ಮತ್ತು ದರೋಡೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ" ಎಂದು ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್ ಹೇಳಿದರು."ನೀವು ಸಲ್ವಾ ಜುಡುಮ್‌ನಂತಹ ಜನರಿಗೆ ಶಸ್ತ್ರಾಸ್ತ್ರಗಳನ್ನು ನೀಡಿದರೆ, ಅವರು ನಕಲಿ ಪೊಲೀಸರಾಗುತ್ತಾರೆ. ಅವರು ಮಾಡಲು ಯಾವುದೇ ಹಕ್ಕಿಲ್ಲದ ಅಪರಾಧಗಳನ್ನು ಮಾಡುತ್ತಾರೆ" ಎಂದು ನ್ಯಾಯಾಧೀಶರು ಹೇಳಿದರು.

"ಇದು ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ. ನೀವು ಕೆಲವು ಸಾರ್ವಜನಿಕರಿಗೆ ಶಸ್ತ್ರಾಸ್ತ್ರಗಳನ್ನು ನೀಡಿ ಇನ್ನೊಂದು ವರ್ಗವನ್ನು ಕೊಲ್ಲಲು ಅನುಮತಿಸಬಾರದು. ಹಾಗೆ ಮಾಡುವುದು ಸೆಕ್ಷನ್ 302ರ ಅಡಿಯಲ್ಲಿ ಕೊಲೆಗೆ ಪ್ರಚೋದನೆಯ ಅಪರಾಧಕ್ಕೆ ಸಮಾನವಾಗಿದೆ. ಸಲ್ವಾ ಜುಡುಮ್ ಅನ್ನು ಬೆಂಬಲಿಸುವುದು ಅದರ ಕೊಲೆ ಕೃತ್ಯಗಳಲ್ಲಿ ಸಹಚರರಾಗಿರುವುದಕ್ಕೆ ಸಮಾನವಾಗಿದೆ." ಎಂದು ಪೀಠವು ತೀವ್ರವಾಗಿ ಟೀಕಿಸಿತು.

ಏಪ್ರಿಲ್ 15, 2008ರಂದು, ವಿಚಾರಣಾ ಸಮಿತಿಯನ್ನು ರಚಿಸುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು (ಎನ್‌ಎಚ್‌ಆರ್‌ಸಿ)



ಸುಪ್ರೀಂ ಕೋರ್ಟ್ ಕೇಳಿಕೊಂಡಿತು. ನಂತರ, ಡಿಸೆಂಬರ್ 16, 2008ರಂದು, ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್ ಮತ್ತು ನ್ಯಾಯಮೂರ್ತಿ ಸಿ.ಸದಾಶಿವಂ ಅವರು ಎನ್‌ಎಚ್‌ಆರ್‌ಸಿ ವರದಿಯ ಕುರಿತು ಕ್ರಮ ತೆಗೆದುಕೊಂಡ ವರದಿಯನ್ನು (ಎಟಿಆರ್) ಸಲ್ಲಿಸುವಂತೆ ಕೇಂದ್ರ ಸರ್ಕಾರವನ್ನು ಕೇಳಿದರು.

2009ರಲ್ಲಿ ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್, ನ್ಯಾ. ಪಿ.ಸದಾಶಿವಂ ಮತ್ತು ನ್ಯಾ. ಚೌಹಾಣ್ ಅವರನ್ನೊಳಗೊಂಡ ಪೀಠವು ಈ ಪ್ರಕರಣದ ವಿಚಾರಣೆ ನಡೆಸಿತು, ನಂತರ 2010ರಲ್ಲಿ ಮುಖ್ಯ ನ್ಯಾಯಮೂರ್ತಿ ಬಾಲಕೃಷ್ಣನ್, ನ್ಯಾ. ಕಪಾಡಿಯಾ ಮತ್ತು ನ್ಯಾ. ಅಫ್ತಾಬ್ ಅಲಂ ಅವರನ್ನೊಳಗೊಂಡ ಪೀಠವು ವಿಚಾರಣೆ ನಡೆಸಿತು.

ಮಾರ್ಚ್ 2010ರಲ್ಲಿ, ಸುಪ್ರೀಂ ಕೋರ್ಟ್ ಅರ್ಜಿದಾರರಿಗೆ ಪುನರ್ವಸತಿ ಯೋಜನೆಯನ್ನು ಸಲ್ಲಿಸಲು ಮತ್ತು ಮೇಲ್ವಿಚಾರಣಾ ಸಮಿತಿಯಲ್ಲಿ ಸೇವೆ ಸಲ್ಲಿಸುವ ಜನರ ಒಪ್ಪಿಗೆಯನ್ನು ಪಡೆಯಲು ಕೇಳಿತು. ಈ ವೇಳೆಗೆ, ನ್ಯಾ. ಬಾಲಕೃಷ್ಣನ್ ನಿವೃತ್ತರಾಗಿದ್ದರು.

'ನಕ್ಸಲ್‌ವಾದಕ್ಕೆ ಉತ್ತೇಜನ ನೀಡುವ ಪ್ರಭುತ್ವ ನೀತಿ'

2011ರಲ್ಲಿ ನ್ಯಾ. ಬಿ.ಸುದರ್ಶನ್ ರೆಡ್ಡಿ ಮತ್ತು ನ್ಯಾ. ಎಸ್.ಎಚ್.ನಿಜ್ಜರ್ ಅವರು ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿದರು ಮತ್ತು ಪೀಠವು ಅದೇ ವರ್ಷದ ಜುಲೈ 5ರಂದು ತೀರ್ಪು ನೀಡಿತು. ಪ್ರಭುತ್ವವು ತನ್ನ ಕರ್ತವ್ಯಗಳನ್ನು ತರಬೇತಿ ಪಡೆಯದ ದಳಗಳಿಗೆ ಹೊರಗುತ್ತಿಗೆ ನೀಡಲು ಸಾಧ್ಯವಿಲ್ಲ, ಇದು ವಿಶೇಷ ಪೊಲೀಸ್ ಅಧಿಕಾರಿಗಳ ಬದುಕುವ ಹಕ್ಕು, ಸಮಾನತೆ ಮತ್ತು ಸಲ್ವಾ ಜುಡುಮ್‌ಗೆ ಬಲಿಯಾದ ಗ್ರಾಮಸ್ಥರ ಬದುಕುವ ಹಕ್ಕನ್ನು ಒಳಗೊಂಡಂತೆ ಸಂವಿಧಾನದ 14 ಮತ್ತು 21ನೇ ವಿಧಿಯನ್ನು ಉಲ್ಲಂಘಿಸುತ್ತದೆ ಎಂದು ತೀರ್ಪು ಹೇಳಿತು. ಇದು ನಕ್ಸಲಿಸಂಗೆ ಉತ್ತೇಜನ ನೀಡುವ ಪ್ರಭುತ್ವ ನೀತಿ ಎಂದು ಪೀಠವು ಗಮನಸೆಳೆಯಿತು.

ಈ ತೀರ್ಪಿನ ಪರಿಷ್ಕರಣೆಗೆ ಕೇಂದ್ರ ಸರಕಾರದ ಅರ್ಜಿಯ ವಿಚಾರಣೆಯನ್ನು ಸೆಪ್ಟೆಂಬರ್ 2011ರಲ್ಲಿ, ನ್ಯಾಯಮೂರ್ತಿಗಳಾದ ಅಲ್ತಮಸ್ ಕಬೀರ್, ನಿಜ್ಜರ್ ಮತ್ತು ಜ್ಞಾನ ಸುಧಾ ಮಿಶ್ರಾ ಅವರನ್ನೊಳಗೊಂಡ ಪೀಠವು ಪ್ರಾರಂಭಿಸಿತು. ನ್ಯಾ. ಕಬೀರ್ ಅವರು ತೀರ್ಪನ್ನು ದೃಢಪಡಿಸಿದರು ಮತ್ತು ತೀರ್ಪು ಕೇವಲ ಛತ್ತೀಸ್‌ಗಢಕ್ಕೆ ಅನ್ವಯಿಸುವ ಮಟ್ಟಿಗೆ ಮಾತ್ರ ಪರಿಷ್ಕರಣೆಗಾಗಿ ಕೇಂದ್ರದ ಅರ್ಜಿಗೆ ಸಮ್ಮತಿಸಿದರು.

ನ್ಯಾಯಾಮೂರ್ತಿಗಳಾದ ಕಬೀರ್, ನಿಜ್ಜರ್, ಚಲಮೇಶ್ವರ್ ಮತ್ತು ಪಿನಾಕಿ ಘೋಷ್ ಅವರು ಪರಿಷ್ಕರಣಾ ಅರ್ಜಿಯನ್ನು ವಿಚಾರಣೆ ನಡೆಸಿದರು. ನ್ಯಾಯಮೂರ್ತಿಗಳಾದ ಗೊಗೊಯ್, ಕಲಿಫುಲ್ಲಾ, ಮದನ್ ಲೋಕೂರ್, ಯು.ಯು.ಲಲಿತ್, ಎಂ.ವಿ.ರಮಣ, ದೀಪಕ್ ಗುಪ್ತಾ, ಬೊಬ್ಡೆ, ಹೃಷಿಕೇಶ್ ರಾಯ್, ಎಸ್.ವಿ.ಎನ್. ಬಟ್ಟಿ, ಬಿ.ವಿ.ನಾಗರತ್ನ ಮತ್ತು ಸತೀಶ್ ಶರ್ಮಾ ಅವರು 2012ರಿಂದ 2025 ರವರೆಗೆ ಈ ಪ್ರಕರಣದ ವಿಚಾರಣೆ ನಡೆಸಿದ್ದಾರೆ.

ಮೇ 15, 2025ರಂದು, ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಸತೀಶ್ ಶರ್ಮಾ ಅವರು ಜುಲೈ 5, 2011ರ ಆದೇಶವನ್ನು ಎತ್ತಿಹಿಡಿದರು, ಅರ್ಜಿಯಲ್ಲಿನ ಮನವಿಗಳನ್ನು "ಸ್ಫಟಿಕೀಕರಿಸಲಾಗಿದೆ" (crystallized) ಎಂದು ಗಮನಿಸಿದರು.

"ಛತ್ತೀಸ್‌ಗಢ ರಾಜ್ಯದಲ್ಲಿ ದಶಕಗಳಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಗಮನಿಸಿದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಗಮನ ಅಗತ್ಯವಿರುವ ಪ್ರದೇಶಗಳಲ್ಲಿ ಶಾಂತಿ ಮತ್ತು ಪುನರ್ವಸತಿಯನ್ನು ತರಲು ನಿರ್ದಿಷ್ಟ ಕ್ರಮಗಳನ್ನು

ಪುಟ 14 ನೋಡಿ

ಸಂವಿಧಾನದ 130ನೇ ತಿದ್ದುಪಡಿ ಕುರಿತಂತೆ ಅಮಿತ್ ಷಾರವರ 'ಸಾಂವಿಧಾನಿಕ ನೈತಿಕತೆ'ಯ ಸಂತವೇಷದ ಉಲ್ಲೇಖವನ್ನು ಎಂದಿಗೂ ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಸಂಸತ್ತಿನ ಎರಡು ಸದನಗಳ ಪ್ರಸ್ತುತ ಸಂಯೋಜನೆಯ ಸರಳ ಅಂಕಗಣಿತದ ತಿಳಿವು ಇರುವ ಯಾರಿಗೇ ಆದರೂ, ಈ ಮಸೂದೆಯ ಅಂಗೀಕಾರ ಸಾಧ್ಯವೇ ಇಲ್ಲ ಎಂದು ಖಂಡಿತವಾಗಿಯೂ ಕಾಣುತ್ತದೆ. ಹೀಗಿರುವಾಗ ಇದನ್ನು ಇಷ್ಟೊಂದು ಹತಾಶೆಯಿಂದ ಮುಂದೊತ್ತುತ್ತಿರುವುದಾದರೂ ಯಾಕೆ ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ. ಬಿಜೆಪಿಯ ಚುನಾವಣಾ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಜನರ ಮತದಾನದ ಸಾಂವಿಧಾನಿಕ ಹಕ್ಕು ಇಲ್ಲದಂತೆ ಮಾಡಲು. ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗ ಮತ್ತು ಸ್ವತಃ ಸಂವಿಧಾನವನ್ನು ಬುಡಮೇಲು ಮಾಡಲಾಗುತ್ತಿದೆ ಎಂಬುದಕ್ಕೆ ಹೆಚ್ಚೆಚ್ಚು ಪುರಾವೆಗಳು ಪ್ರಕಟವಾಗುತ್ತಿರುವಾಗ ಗಮನವನ್ನು ಬೇರೆಡೆಗೆ ತಿರುಗಿಸುವ ಒಂದು ಪ್ರಯತ್ನವಿದು ಎಂದು ಹೆಚ್ಚೆಚ್ಚು ಜನವಿಭಾಗಗಳು ನೋಡುತ್ತಿವೆ.

130ನೇ ತಿದ್ದುಪಡಿ ಮಸೂದೆ:
ಮತದಾನದ ಹಕ್ಕನ್ನು ಬುಡಮೇಲು ಮಾಡುವ ಪ್ರಯತ್ನಗಳತ್ತ ಗಮನ ಹರಿಯದಂತೆ ಮಾಡುವ ತಂತ್ರ?

ನೀಲೋತ್ಪಲ್ ಬಸು
ಕನ್ನಡಕ್ಕೆ: ವೇದರಾಜ ಎನ್.ಕೆ.



ಸಂಸತ್ತಿನ ಮಳೆಗಾಲದ ಅಧಿವೇಶನದ ಕೊನೆಯ ದಿನ ಜನರಿಗೆ ಮತ್ತು ಅವರ ಪ್ರತಿನಿಧಿಗಳಿಗೆ ಅಚ್ಚರಿ ಮತ್ತು ಆಘಾತ ಕಾದಿತ್ತು. ಜನರ ಮತದಾನದ ಮೂಲಭೂತ ಹಕ್ಕಿಗೆ ದೊಡ್ಡ ಪ್ರಮಾಣದಲ್ಲಿ ಕಂಟಕ ಉಂಟುಮಾಡುವ ಆರೋಪಗಳು ತೀವ್ರ ಬಿರುಗಾಳಿ ಎಬ್ಬಿಸಿದ್ದ ಒಂದು ಅಧಿವೇಶನದ ನಡುವೆ, ಸಂಜೆ ಮುಗಿಯುತ್ತಿದ್ದಂತೆ ಗೃಹಮಂತ್ರಿ ಅಮಿತ್ ಷಾ ಒಂದು ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು.

'ಸಂವಿಧಾನ (130ನೇ ತಿದ್ದುಪಡಿ) ಮಸೂದೆ, 2025,' ಸಾಂವಿಧಾನಿಕ ಮತ್ತು ಕಾನೂನಿನ ಪ್ರಶ್ನೆಗಳನ್ನು ಎತ್ತಿದೆ. ಆದರೆ ಇಲ್ಲಿ ಮುಖ್ಯವಾಗಿ ಇದನ್ನು ಬರೆಯುವಲ್ಲಿ ಒಳಗೊಂಡಿರುವ ರಾಜಕೀಯವನ್ನು ಪರೀಕ್ಷಿಸಬೇಕಾಗಿದೆ. ಅದರಲ್ಲೂ, ಸಂವಿಧಾನ ತಿದ್ದುಪಡಿಯನ್ನು ತರುವ ಕಾರ್ಯವಿಧಾನದಲ್ಲಿ ತುಸುವಾದರೂ ಕಾತುರತೆ ಇರುವ ಯಾವುದೇ ನಾಗರಿಕರಿಗೆ ಈ ಕಸರತ್ತು ತಲ್ಲಣ ಉಂಟು ಮಾಡದಿರದು. ಒಂದು ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಲು, ಆಳುವ ಕೂಟಕ್ಕೆ ಸಂಸತ್ತಿನ ಎರಡೂ ಸದನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರು ಹಾಜರಿದ್ದು, ಅವರ ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ. ಪ್ರಸ್ತುತ ಎರಡು ಸದನಗಳ ಸಂಯೋಜನೆಯ ಬಗ್ಗೆ ಸರಳ ಅಂಕಗಣಿತದ ಮೂಲಭೂತ ತಿಳಿವು ಇರುವ ಯಾರಿಗಾದರೂ, ಈ ಮಸೂದೆಯ ಅಂಗೀಕಾರ ಸಾಧ್ಯವೇ ಇಲ್ಲ ಎಂದು ಖಂಡಿತವಾಗಿಯೂ ಕಾಣುತ್ತದೆ.

ಹಾಗಾದರೆ ಎಂದಿಗೂ ಅಂಗೀಕಾರವಾಗಲಾರದ ಒಂದು ಶಾಸನವನ್ನು ಮುಂದೊತ್ತಲು ಏಕೆ ಈ ಅತ್ಯಾತುರ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಸರ್ಕಾರ ತನ್ನದೇ ಆದ ಉತ್ತರವನ್ನು ಒದಗಿಸಿದೆ. ಇದು 'ಸಾರ್ವಜನಿಕ ಹಿತಾಸಕ್ತಿ, ಕಲ್ಯಾಣ ಮತ್ತು ಉತ್ತಮ ಆಳ್ವಿಕೆಯ' ಒಂದು ಹೆಚ್ಚು ಉತ್ತಮವಾದ ರಕ್ಷಣೆಯನ್ನು ತರುವುದಕ್ಕಾಗಿ ಎಂಬುದು ಅವರ ದಾವೆ. ಈ ದಾವೆಯನ್ನು 'ಸಾಂವಿಧಾನಿಕ ನೈತಿಕತೆಯ' ಪುನಃಸ್ಥಾಪನೆಯ ಮಟ್ಟಕ್ಕೆ ಏರಿಸುವುದಾದರೆ, ಅದು ನಿಜವಾಗಿಯೂ ವಿಲಕ್ಷಣ ಸಂಗತಿಯಾಗುತ್ತದೆ.

'ಸಾಂವಿಧಾನಿಕ ನೈತಿಕತೆ'ಯ ಭೀಷಣ ದಾಖಲೆ!

ಈ ವಿಷಯದಲ್ಲಿ ಸರ್ಕಾರದ ದಾಖಲೆಯ ಆಧಾರದ ಮೇಲೆ ಇಂತಹ ಉನ್ನತ ದಾವೆಗಳನ್ನು ಪರೀಕ್ಷಿಸಬೇಕಾಗುತ್ತದೆ. ಹಿಂದೆ ಈ ಸರ್ಕಾರವೇ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ)ಗೆ ತಿದ್ದುಪಡಿ ತಂದಿತು; ವಾಸ್ತವವಾಗಿ ಇದು ಜಾರಿ ನಿರ್ದೇಶನಾಲಯವನ್ನು (ಇ.ಡಿ.) ಅಸ್ತ್ರವನ್ನಾಗಿ ಮಾಡಿತು. ಈ ಹೊಸ ತಿದ್ದುಪಡಿಯ ಅಡಿಯಲ್ಲಿ ಆರೋಪ ಹೊರಿಸಲ್ಪಟ್ಟವರಿಗೆ ಜಾಮೀನು ನಿರಾಕರಿಸಲು ಇ.ಡಿ.ಯನ್ನು ಶಸ್ತ್ರಸಜ್ಜಿತಗೊಳಿಸಲಾಯಿತು. ಪಿಎಂಎಲ್ಎಯ ಈ ಹೊಸ ಅವತಾರವನ್ನು ಅಂಗೀಕರಿಸಿದ ನಂತರ, ಮುಖ್ಯಮಂತ್ರಿಗಳೂ ಸೇರಿದಂತೆ ಹೆಚ್ಚಾಗಿ ಪ್ರಮುಖ ವಿಪಕ್ಷಗಳ ನಾಯಕರನ್ನೇ ಈ ಕಾನೂನಿನ ನಿಬಂಧನೆಗಳ ಅಡಿಯಲ್ಲಿ ಆರು ತಿಂಗಳಿಗಿಂತ ಹೆಚ್ಚು ಕಾಲ ಜೈಲಿನಲ್ಲಿ ಇರಿಸಲಾಗಿದೆ ಎಂಬುದನ್ನು ದೇಶ ಕಂಡಿದೆ. ಮುಖ್ಯಮಂತ್ರಿಗಳಾದ ದೆಹಲಿಯ ಅರವಿಂದ್ ಕೇಜ್ರಿವಾಲ್ ಮತ್ತು ಜಾರ್ಖಂಡ್‌ನ ಹೇಮಂತ್ ಸೊರೇನ್ ಅವರನ್ನು ನಂತರ ಸಂಬಂಧಪಟ್ಟ ಹೈಕೋರ್ಟ್‌ಗಳು ಈ ಆರೋಪಗಳಿಂದ ಮುಕ್ತಗೊಳಿಸಿದವು. ಪ್ರಸ್ತಾವಿತ 130ನೇ ಸಂವಿಧಾನ ತಿದ್ದುಪಡಿ ಜಾರಿಯಲ್ಲಿದ್ದಿದ್ದರೆ, ಈ ಇಬ್ಬರು ಖಂಡಿತವಾಗಿಯೂ ತಮ್ಮ ಹುದ್ದೆಯನ್ನು ಕಳೆದುಕೊಳ್ಳುತ್ತಿದ್ದರು.



ಆದರೆ, ಸರ್ಕಾರದ ಮುಂದೆ ಮಣಿಯಲು ಸತತವಾಗಿ ನಿರಾಕರಿಸುವ ವಿಪಕ್ಷಗಳ ಮುಖ್ಯಮಂತ್ರಿಗಳು ಒತ್ತಟ್ಟಿಗಿರಲಿ, ಸರ್ಕಾರವು ತನಗೆ ಬೇಕಾದಂತೆ ವಿಪಕ್ಷಗಳ ನಾಯಕರನ್ನು, ಸಂಸದರನ್ನು ಮತ್ತು ಶಾಸಕರನ್ನು ಶರಣಾಗುವಂತೆ ಮತ್ತು ಬಿಜೆಪಿಗೆ ಬಂದುಬಿಡುವಂತೆ ಮಣಿಸಬಹುದು. ಏಪ್ರಿಲ್ 2024ರಲ್ಲಿ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಇದರ ಕಾರ್ಯವಿಧಾನವನ್ನು ಮತ್ತು ಆಳುವ ಪಕ್ಷದ ಸವಲತ್ತುಗಳನ್ನು ಪಡೆಯಲು ಮುಂದಾದ ಇಂತಹ ಎರಡು ಡಜನ್‌ಗಿಂತಲೂ ಹೆಚ್ಚು ವಿಪಕ್ಷಗಳ ಸದಸ್ಯರ ಪಟ್ಟಿಯೊಂದಿಗೆ ಒಂದು ವರದಿಯನ್ನು ಮುಖಪುಟದಲ್ಲಿ ಪ್ರಕಟಿಸಿತು. ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್‌ನ ಮಾಜಿ ಸಚಿವ ಹಾಗೂ ಈಗ ಪ್ರತಿಪಕ್ಷ ಬಿಜೆಪಿಯ ಮುಖಂಡರಾಗಿರುವ ಸುವೇಂಧು ಅಧಿಕಾರಿಯಿಂದ ಹಿಡಿದು, ಮಹಾರಾಷ್ಟ್ರದ ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ್ ಚವಾಣ್ ಮತ್ತು ಬಿಜೆಪಿಯ ಉನ್ನತ ನಾಯಕರ ಪ್ರಸಕ್ತ ಕಣ್ಮಣಿ ಮತ್ತು ಅಸ್ಸಾಂನ ಪ್ರಸ್ತುತ ಮುಖ್ಯಮಂತ್ರಿ ಹೇಮಂತ ಬಿಸ್ವ ಶರ್ಮಾವರೆಗೆ ಈ ಪಟ್ಟಿಯಲ್ಲಿದ್ದರು.

ಅವರೆಲ್ಲರ ಮೇಲೂ ಇ.ಡಿ ಆರೋಪಗಳನ್ನು ಹೊರಿಸಿತ್ತು. ಮತ್ತು ಆಳುವ ಪಕ್ಷದ ಕಡೆಗೆ ದಾಟಿದ ನಂತರ, ಅವರಿಗೆ ತಕ್ಷಣವೇ ಶುದ್ಧಹಸ್ತರೆಂಬ ಪ್ರಮಾಣ ಪತ್ರ ಸಿಕ್ಕಿತು. ಅತ್ಯಂತ ಕೆಟ್ಟ ಪ್ರಹಸನವನ್ನು ಮಹಾರಾಷ್ಟ್ರದಲ್ಲಿ ಆಡಲಾಯಿತು; ಅಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಅಘಾಡಿ ಸರ್ಕಾರವನ್ನು ಶಿವಸೇನೆ ಮತ್ತು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ ಎರಡನ್ನೂ ವಿಭಜಿಸುವ ಮೂಲಕ ಉರುಳಿಸಲಾಯಿತು. ಈ ಕೃತ್ಯ ಎಷ್ಟು ನಿರ್ಲಜ್ಜವಾಗಿತ್ತೆಂದರೆ, ಶಿವಸೇನೆಯಿಂದ ಬಣ್ಣ ಬದಲಾಯಿಸಿದ ಏಕನಾಥ್ ಶಿಂಧೆ ನೇತೃತ್ವದ ಹೊಸ ಸರ್ಕಾರದ ಒಂಬತ್ತು ಸಚಿವರ ಮೇಲೆ ಇ.ಡಿ ಆರೋಪ ಹೊರಿಸಿತ್ತು ಎಂದು ಗೊತ್ತಾಗಿದೆ. ನಂತರ ಈ ವ್ಯಕ್ತಿಗಳ ನೈರ್ಮಲ್ಯೀಕರಣವು ಬಿಜೆಪಿಗೆ 'ವಾಷಿಂಗ್ ಮೆಷಿನ್' ಎಂಬ ಜುಗುಪ್ಸೆ ಹುಟ್ಟಿಸುವ ವಿಶೇಷಣವನ್ನು ತಂದುಕೊಟ್ಟಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ, ಇಂದು ಅಮಿತ್ ಷಾ ಪ್ರಸ್ತಾವಿತ ತಿದ್ದುಪಡಿಯು ರಾಜಕೀಯ ಅಥವಾ ಚುನಾವಣೆಯ ಬಗ್ಗೆ ಅಲ್ಲ ಎಂದು ಹೇಳುವ ಮೂಲಕ ಸಂತನಂತೆ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಂಡು ಅವರ ಸ್ವಂತ ಪಕ್ಷದ ಜನರು ಸಹ ಅಂತಹ ಅಸಂಬದ್ಧ ದಾವೆಗಳ ಬಗ್ಗೆ ಖಾಸಗಿಯಾಗಿ ನಗುತ್ತಿರಬಹುದು!

ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿಯನ್ನು ಬಯಲಿಗೆ ತಂದ ಅತಿದೊಡ್ಡ ಸಂಗತಿ ಈಗ ಬಹಳ ಚೆನ್ನಾಗಿ ದಾಖಲಾಗಿದೆ. ಬಿಜೆಪಿ ಸರಕಾರದ ಚುನಾವಣಾ ಬಾಂಡ್ (ಇಬಿ) ಯೋಜನೆಯನ್ನು ಅಸಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಘೋಷಿಸಿದೆ. ಈ ಯೋಜನೆ ಬಿಜೆಪಿ ಮತ್ತು ಕಾರ್ಪೊರೇಟ್‌ಗಳ ಒಂದು ಭಾಗದ ನಡುವೆ ಪರಸ್ಪರ ಕೆಲಸ ಮಾಡಿಸಿಕೊಳ್ಳುವ ಒಂದು ಅತ್ಯಂತ ನಗ್ನ ಕೃತ್ಯವಾಗಿತ್ತು. ವಾಸ್ತವವಾಗಿ, ಈ ಯೋಜನೆಯಡಿಯಲ್ಲಿ ಬಿಜೆಪಿ ಸ್ವೀಕರಿಸಿದ ದೇಣಿಗೆಗಳ ವಿವರಗಳು ಅದಕ್ಕೆ 5,000 ಕೋಟಿ ರೂ.ಗಳಿಗಿಂತ ಹೆಚ್ಚಿನ ಭಂಡಾರವನ್ನು ಪಡೆಯಲು ಯಾವ ರೀತಿಯ ಅಕ್ರಮ ವಹಿವಾಟುಗಳಿಗೆ ಅನುವು ಮಾಡಿಕೊಟ್ಟವು ಎಂಬುದರ ರೂಪುರೇಷೆಯನ್ನು ಸ್ಪಷ್ಟವಾಗಿ ಕೊಡುತ್ತವೆ. ಅಂತಹ ಬೃಹತ್ ಪ್ರಮಾಣದ ನಿಧಿಗಳನ್ನು ಪಡೆಯುವುದನ್ನು ಇ.ಡಿ ಮತ್ತು ಸಿಬಿಐ ಸುಗಮಗೊಳಿಸಿದವು ಎಂಬುದನ್ನು ನಂತರದ ಮಾಧ್ಯಮ ತನಿಖೆಗಳು ಪ್ರಕಟಪಡಿಸಿವೆ. ಚುನಾವಣಾ ಬಾಂಡ್ ಯೋಜನೆ ಸ್ವಯಂಪ್ರೇರಿತ ದೇಣಿಗೆಗಳಲ್ಲ, ಅದಕ್ಕಿಂತ ಸಂಪೂರ್ಣ ಭಿನ್ನವಾಗಿ ಪಕ್ಕಾ ಸುಲಿಗೆಗಳೇ ಎಂದು ತೋರಿಸಿವೆ.

ಅಪಾರದರ್ಶಕತೆಯ
ಅತ್ಯಂತ ಕೆಟ್ಟ ಜಾಹೀರಾತು

ಆದರೆ ಅಮಿತ್ ಷಾರವರಿಗೆ, ಸಾರ್ವಜನಿಕರ ನೆನಪು ಅಷ್ಟೇನೂ ಬೇಗ ಅಳಿಸಿಹೋಗುವುದಿಲ್ಲ. ಸಾಂವಿಧಾನಿಕ ನೈತಿಕತೆಯ ಅವರ ಉಲ್ಲೇಖವನ್ನು ಎಂದಿಗೂ ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಯಾರು ತಾನೇ ನೆನಪಿಸಲು ಸಾಧ್ಯ? ಗೃಹ ಸಚಿವರು ಉಪರಾಷ್ಟ್ರಪತಿ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರ ಮೇಲೆ ಆರೋಪ ಹೊರಿಸಲು ಸುಪ್ರೀಂ ಕೋರ್ಟ್ ಆದೇಶದ ನಿಂದನೆಯವರೆಗೂ ಯಾವುದೇ ಹಂತಕ್ಕೂ ಹೋಗಬಲ್ಲರು; ಹಾಗೆ ನೋಡಿದರೆ, ಈ ಚುನಾವಣೆ ನಡೆಯುತ್ತಿರುವುದೇ, ಮೊದಲನೆಯದಾಗಿ ಮಾಜಿ ಉಪರಾಷ್ಟ್ರಪತಿ ಜಗದೀಪ್ ಧಂಖರ್‌ಗೆ ಅವರು ಏನೇನೋ ಮಾಡಿದ್ದರಿಂದ ತಾನೇ.

ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರಧಾನ ಸಾಧನವೆಂದರೆ ಆಳ್ವಿಕೆಯಲ್ಲಿ ಪಾರದರ್ಶಕತೆಯನ್ನು ಸ್ಫುರಿಸುವುದು. ಪ್ರಧಾನ ಮಂತ್ರಿಯವರ ಶೈಕ್ಷಣಿಕ ದಾಖಲೆಗಳನ್ನು ನಿರಾಕರಿಸುವ ಬಗ್ಗೆ ಕಾನೂನು ಜಗ್ಗಾಟಗಳು ಬಹುಶಃ ಈ ಸರಕಾರ ಅಪಾರದರ್ಶಕತೆಗೆ ಎಷ್ಟೊಂದು ಅಂಟಿಕೊಂಡಿದೆ ಎಂಬುದರ ಅತ್ಯಂತ ಕೆಟ್ಟ ಜಾಹೀರಾತು! ಅವರ ಶೈಕ್ಷಣಿಕ ದಾಖಲೆಯೇನೇ ಇರಲಿ, ಈ ಕೃತ್ಯ ಸಾರ್ವಜನಿಕರ ದೃಷ್ಟಿಯಲ್ಲಿ ಪ್ರಧಾನಿ ಅಥವಾ ಅವರ ಸರ್ಕಾರದ ನೈತಿಕಮಟ್ಟವನ್ನು ಹೆಚ್ಚಿಸುತ್ತದೆಯೇ?

ಸರ್ಕಾರದ ಇಂತಹ ಭೀಷಣ ದಾಖಲೆಯ ಹಿನ್ನೆಲೆಯಲ್ಲಿ, ಸಂವಿಧಾನದ 130ನೇ ತಿದ್ದುಪಡಿ ಮಸೂದೆ, 2025ರಲ್ಲಿ ನಿರೂಪಿಸಿರುವ ಧ್ಯೇಯೋದ್ದೇಶಗಳನ್ನು ಯಾರೂ ನಂಬಲು ಸಾಧ್ಯವಿಲ್ಲ. ಇಂತಹ ಅಸಹ್ಯಕರ ತಿದ್ದುಪಡಿಯನ್ನು ಇಷ್ಟೊಂದು ಹತಾಶರಾಗಿ ಮುಂದೊತ್ತುತ್ತಿರುವುದಾದರೂ ಯಾಕೆ ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ. ಬಿಜೆಪಿಯ ಚುನಾವಣಾ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಜನರ ಮತದಾನದ ಸಾಂವಿಧಾನಿಕ ಹಕ್ಕು ಇಲ್ಲದಂತೆ ಮಾಡಲು, ಸಾಂವಿಧಾನಿಕ ಸಂಸ್ಥೆಯಾದ ಭಾರತದ ಚುನಾವಣಾ ಆಯೋಗ (ಇಸಿಐ) ಮತ್ತು ಸ್ವತಃ ಸಂವಿಧಾನವನ್ನು ಬುಡಮೇಲು ಮಾಡಲಾಗುತ್ತಿದೆ ಎಂಬುದಕ್ಕೆ ಹೆಚ್ಚುತ್ತಿರುವ ಪುರಾವೆಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಒಂದು ಪ್ರಯತ್ನವಿದು ಎಂದು ಹೆಚ್ಚೆಚ್ಚು ಜನವಿಭಾಗಗಳು ನೋಡುತ್ತಿವೆ. ●

‘ಘನತೆಯ ಬದುಕು ನಮ್ಮ ಹಕ್ಕು’ ಘೋಷಣೆಯೊಂದಿಗೆ ‘ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ’ಯ 12ನೇ ಕರ್ನಾಟಕ ರಾಜ್ಯ ಸಮ್ಮೇಳನವು 2025ರ ಆಗಸ್ಟ್ 30ರಿಂದ ಸೆಪ್ಟೆಂಬರ್ 1ರವರೆಗೆ ರಾಯಚೂರು ಜಿಲ್ಲೆಯ ಸಿಂದನೂರಿನಲ್ಲಿ ನಡೆದಿದೆ. ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಈ ಹಿಂದಿನ ಸಮ್ಮೇಳನಗಳ ಕುರಿತು ಮತ್ತು ಆರ್ಥಿಕ ಅಸಮಾನತೆಯ ವರ್ಗ ತಾರತಮ್ಯದ ಸಮಾಜದಲ್ಲಿ ಮಹಿಳೆಯನ್ನು ಎರಡನೆ ದರ್ಜೆಗೆ ತಳ್ಳಲಾದ ಚರಿತ್ರೆಯ ಕುರಿತಾದ ಲೇಖನಗಳು.



ಮಹಿಳೆ: ಜೀವಕೊಡುವ ಜೀವವಿದು ಕಡಿಮೆ ಯಾರಿಗೆ?



ಕೆ.ನೀಲಾ

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ
ಗಂಡೂ ಅಲ್ಲ ರಾಮನಾಥ
ಜೇಡರ ದಾಸಿಮಯ್ಯ.

ಹೀಗೆ ಮಹಿಳೆಯನ್ನು ವೈಜ್ಞಾನಿಕ ನೆಲೆಯಲ್ಲಿ ನಿರ್ವಚನೆಮಾಡಿದ್ದು 12ನೇ ಶತಮಾನದ ಕಾಯಕ ಜೀವಿಗಳು. ಸಮಾನತೆಯ ಪರಿಕಲ್ಪನೆಯು ಆಧಾರಸಹಿತವಾಗಿ ಮುನ್ನೆಲೆಗೆ ತಂದವರನ್ನು ಚರಿತ್ರೆಯು ತನ್ನ ಒಡಲಲ್ಲಿ ಭರಿಸಿಕೊಂಡಿದೆ. ಇದೊಂದು ಸಂಘರ್ಷವೇ ಆಗಿತ್ತು, ಆಗಿದೆ ಮತ್ತು ಸಂಘರ್ಷ ಮುಂದುವರೆಯುವುದು. ಉತ್ಪಾದನಾ ಸಂಬಂಧಗಳಲ್ಲಿನ ಬದಲಾವಣೆಯು ಮಾನವ ಬದುಕಿನ ಎಲ್ಲ ಆಯಾಮಗಳಲ್ಲಿ ತನ್ನ ಪರಿಣಾಮ ಬಿಟ್ಟುಕೊಟ್ಟಿದೆ. ಬೇಟೆಯಲ್ಲಿ ಅವಳನ್ನು ಮುಂಚೂಣಿಗೆ ತಂದಿದ್ದು ಜನಸಮೂಹವೇ. ನಿಸರ್ಗ ಸಹಜವಾಗಿ ಅವಳು ಹೊಸ ಜೀವವನ್ನು ಪೊರೆದು ಜನ್ಮ ಕೊಟ್ಟು ಎಲ್ಲವನ್ನೂ ನಿಭಾಯಿಸುವ ತಾಕತ್ತು ಹೊಂದಿದ್ದನ್ನು ಜನಸಮೂಹವು ಕಣ್ಣಮುಂದೆಯೇ ಕಂಡಿತಲ್ಲ.. ಹೀಗಾಗಿ ಅವಳನ್ನು ಬೇಟೆಯ ನಾಯಕಿಯಾಗಿಸಿದರು. ಆದರೆ ಕ್ರಮೇಣ ಸಮಾಜವು ನಿರಂತರ ಬದಲಾವಣೆಗೆ ಒಳಗಾಯಿತು. ಸಾಮಾಜಿಕ ಸಂಪತ್ತನ್ನು ಖಾಸಗಿಗೊಳಿಸಿ ಕೆಲವರೇ ಅದನ್ನು ಉಪಭೋಗಿಸುವ ಹುನ್ನಾರಿನಲ್ಲಿ ಸಮಾಜವನ್ನು ತಾರತಮ್ಯದತ್ತ ದೂಡಲಾಯಿತು.

ಸ್ವತ್ತಿನ ಸಂಗ್ರಹವೇ ಎಲ್ಲ ಅಸಮಾನತೆಯ ಬೀಜವಾಯಿತು

ಕೃಷಿಯನ್ನು ಕಂಡುಹಿಡಿದ ಮಹಿಳೆಯು ಬೀಜಗಳನ್ನು ಸಂಗ್ರಹಿಸಲು ಮಡಕೆ, ಕುಡಿಕೆಗಳನ್ನು ನಿರ್ಮಾಣ ಮಾಡಿದಳು. ಕೃಷಿಗಾಗಿ ಹುಟ್ಟಿಕೊಂಡ ಮನೆಗಳು, ಅಲ್ಲಿಯೇ ವಾಸಿಸುವ ಹೆಣ್ಣು ಗಂಡಿಗೆ ಜನಿಸಿದ ಮಕ್ಕಳು ಎಲ್ಲರೂ ಸೇರಿ ಕುಟುಂಬದ ಸದಸ್ಯರಾದರು. ಅವರು ಉಳುಮೆ ಮಾಡಿದಷ್ಟು ಭೂಮಿಯು ಅವರ ಖಾಸಗಿ ಸ್ವತ್ತಿನಂತಾಯಿತು. ಕ್ರಮೇಣ ಹೆಚ್ಚಿನ ಉತ್ಪಾದನೆಯು ಅನಗತ್ಯವಾಗಿ ಶೇಖರಿಸಿಕೊಂಡ ಖಾಸಗಿ ಸಂಪತ್ತಾಗಿ ಅಸಮಾನ ವಿತರಣೆಗೆ ಎಡೆಯಾಯಿತು. ಈ ಮಿಗುತಾಯ ಮೌಲ್ಯವೇ, ಕೆಲವೇ ಜನತೆಯ ಸೊತ್ತಿನ ಸಂಗ್ರಹವೇ ಎಲ್ಲ ಅಸಮಾನತೆಯ ಬೀಜವಾಯಿತು. ಉಳ್ಳವರು ಮತ್ತು ಇಲ್ಲದವರನ್ನು ಸೃಷ್ಟಿಸಿತು. ಸಂಪತ್ತಿನ ಸಂಗ್ರಹದ ದಾಹವೇ ಅಸಮಾನತೆಯ ನೀತಿಗಳ ನಿರೂಪಣೆಯನ್ನು ಕಟ್ಟುತ್ತ ಅವುಗಳನ್ನು ಸಮಾಜದ ಮೇಲೆ ಹೇರುತ್ತ ಬರುವ ವಾಹಕವಾಯಿತು.

ಅಸಮಾನತೆಗೆ ಮೊದಲ ಬಲಿ ಮಹಿಳೆ

ಇದಕ್ಕೆ ಮೊದಲಿಗೆ ಬಲಿ ಮಾಡಿದ್ದು ಮಹಿಳೆಯನ್ನು. ಮಹಿಳೆ ಮತ್ತು ಪುರುಷರ ನಡುವೆ ಅಸಮಾನ ಅವೈಜ್ಞಾನಿಕ ಕೆಲಸದ ವಿಭಜನೆ ಮಾಡಲಾಯಿತು. ಮಹಿಳೆಯ ಕೆಲಸಕ್ಕೆ ಆರ್ಥಿಕ ಮೌಲ್ಯವೇ ಇಲ್ಲದ ಉತ್ಪಾದನೆಯಲ್ಲಿ ತೊಡಗಿಸಲಾಯಿತು. ಮನೆಗೆಲಸ, ಮಕ್ಕಳನ್ನು ಹೆರುವುದು ಮತ್ತು ಕೃಷಿಯಲ್ಲಿ ತೊಡಗಿದರೂ ಅದರ ಲಾಭಾಂಶದಲ್ಲಿ ಅವಳಿಗೆ ಪಾಲು ಇಲ್ಲದ ಹಾಗಾಯಿತು. ಆರ್ಥಿಕ ಅಸಮಾನತೆ ತಂದವರನ್ನು ಚರಿತ್ರೆಯು ತನ್ನ ಒಡಲಲ್ಲಿ ಭರಿಸಿಕೊಂಡಿದೆ. ಇದೊಂದು ಸಂಘರ್ಷವೇ ಆಗಿತ್ತು. ಆಗಿದೆ ಮತ್ತು ಸಂಘರ್ಷ ಮುಂದುವರೆಯುವುದು. ಉತ್ಪಾದನಾ ಸಂಬಂಧಗಳಲ್ಲಿನ ಬದಲಾವಣೆಯು ಮಾನವ ಬದುಕಿನ ಎಲ್ಲ ಆಯಾಮಗಳಲ್ಲಿ ತನ್ನ ಪರಿಣಾಮ ಬಿಟ

ವರ್ಗದ ಮಹಿಳೆಯರಿಗೆ ತಲುಪಲಿಲ್ಲ. ಅದು ಸಹಜವಾಗಿಯೇ ವರ್ಗ ಹಿತಾಸಕ್ತಿಯ ನೆಲೆಯಲ್ಲಿ

ಇತ್ತು. 1939ರ ನಂತರ ಜಗತ್ತು ತೀವ್ರತರವಾಗಿ ಬದಲಾಗತೊಡಗಿತು. ಅದು ಎರಡನೆಯ ಮಹಾಯುದ್ಧದ ಕಾಲ. 1941 ರ ಜೂನ್ 22 ರಂದು ಹಿಟ್ಲರ್ ಫ್ಯಾಸಿಸ್ಟ್ ಸೈನ್ಯವು ಸೋವಿಯತ್ ರಷ್ಯಾದ ಮೇಲೆ ದಾಳಿಯಿಟ್ಟಿತು. ಆಗ ಸ್ತ್ರೀ ಪುರುಷರೆಲ್ಲ ಅತ್ಯಂತ ಧೀರತೆಯಿಂದ ಫ್ಯಾಷಿಸ್ಟ್ ದಾಳಿಯನ್ನು ಹಿಮ್ಮೆಟ್ಟಿಸಲು ಸಂಘಟಿತರಾಗಿ ಯೋಜನಾಬದ್ಧವಾಗಿ ಸಿದ್ದಗೊಂಡರು. ಸೋವಿಯತ್ ಮತ್ತು ಚೀನಾದ ಮಹಿಳೆಯರು ತಮ್ಮ ತಮ್ಮ ದೇಶಗಳಲ್ಲಿ ನಿರ್ವಹಿಸುತ್ತಿದ್ದ ಪಾತ್ರವು ಭಾರತದ ಮಹಿಳೆಯರ ಮೇಲೆ ಗಣನೀಯವಾಗಿ ಪರಿಣಾಮ ಬೀರಿತು. ಅವರ ಹೋರಾಟದ ಗಾಥೆಯು ಅಪಾರ ಸ್ಫೂರ್ತಿಯನ್ನು ತುಂಬಿತು. ಫ್ಯಾಸಿಸ್ಟ್ ವಿರೋಧಿ ಹೋರಾಟದಲ್ಲಿ ಸೋವಿಯತ್ ಮಹಿಳೆಯರು ಹೊಣೆ ಹೊತ್ತು ನಿರ್ವಹಿಸಿದ ಪಾತ್ರವು ಜಾಗತಿಕ ಸಂಚಲನೆಗೆ ಕಾರಣವಾಯಿತು.

ಭಾರತದಲ್ಲಿ ದುಡಿಯುವ ಮಹಿಳೆಯರ ಸಂಘಟನೆ

ಸೋವಿಯತ್ ಯೂನಿಯನ್ ಆಂಟಿ ಫ್ಯಾಸಿಸ್ಟ್ ಸಮಿತಿ ರಚನೆಯಾಯಿತು. ಭಾರತದಲ್ಲಿ ಇದೇ ಸಂದರ್ಭದಲ್ಲಿ ದುಡಿಯುವ ಮಹಿಳೆಯರ ಸಂಘಟನೆಯು ರೂಪುಗೊಂಡಿತು. ಎರಡನೆಯ ಮಹಾ ಯುದ್ಧದ ನಂತರ ಸಮಾಜವಾದಿ ಆಂದೋಲನವು ರೈತಾಪಿ, ಕಾರ್ಮಿಕ ವರ್ಗದ ಮತ್ತು ಮಧ್ಯಮ ವರ್ಗದ ಸಂಘಟನೆಯನ್ನು

ಪುಟ 14 ನೋಡಿ

1981ರಲ್ಲಿ ‘ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ’ ರಚನೆ

ಶ್ರಮದ ಕಾರಣ ಎಲ್ಲ ಉತ್ಪಾದನೆಯ ಮೂಲಕ ಅಭಿವೃದ್ಧಿ ಕಾಣುವ ಸಮಾಜದಲ್ಲಿ ಮಹಿಳಾ ಶ್ರಮವು ತನ್ನ ಶ್ರಮದ ಪ್ರತಿಫಲವನ್ನು ಹಕ್ಕಿನಿಂದ ಕೇಳುವ ಚರಿತ್ರೆಯನ್ನು ಪರಂಪರೆಯ ಕೊಂಡಿಯಾಗಿಸಿ, ಚಳುವಳಿಯು ಸ್ತ್ರೀ ಅಸ್ಥಿತೆಯ ಅಸ್ಥಿತ್ವದೊಂದಿಗೆ ಮತ್ತು ಲಿಂಗಸಂವೇದನಾಶೀಲತೆಯೊಂದಿಗೆ ಸಂಘಟಿತ ಸ್ವರೂಪ ಪಡೆಯತೊಡಗಿತು. ಅಖಿಲ ಭಾರತ ಮಟ್ಟದಲ್ಲಿ 1981 ಮಾರ್ಚ್ 12ರಂದು ‘ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ’ ಹೆಸರಿನೊಂದಿಗೆ "ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆ" ಘೋಷಣೆಯೊಂದಿಗೆ ಸಮ್ಮೇಳನದಲ್ಲಿ ಕೇಂದ್ರ ಸಮಿತಿಯ ಆಯ್ಕೆಯಾಯಿತು.

1954ರ ಜೂನ್ 4ರಿಂದ 7 ರವರೆಗೆ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಸ್ಪಷ್ಟ ದೃಷ್ಟಿಕೋನದೊಂದಿಗೆ ಸಮಸ್ತ ಮಹಿಳೆಯರನ್ನು ಪ್ರತಿನಿಧಿಸುವ ಮಹಿಳಾ ಸಂಘಟನೆ ‘ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್’ ಜನ್ಮ ತಳೆಯಿತು. ನಂತರ ಮಹಿಳಾ ಆಂದೋಲನವು ಸೈದ್ಧಾಂತಿಕ ನೆಲೆಯಲ್ಲಿ ಇನ್ನೂ ಸ್ಪಷ್ಟತೆಯೊಂದಿಗೆ ಮುನ್ನಡೆಯಿತು. 1981 ಮಾರ್ಚ್ 12ರಂದು ‘ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ’ಯು ರೂಪುಗೊಂಡು ದೇಶದಾದ್ಯಂತ ಚಳುವಳಿಯಾಗಿ ಹರಡಿಕೊಂಡಿತು. ಈವರೆಗೂ ಒಂದು ಕೋಟಿ ನಲವತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಈ ಸಂಘಟನೆಯಲ್ಲಿ ಸದಸ್ಯತ್ವ ಪಡೆದುಕೊಂಡಿದ್ದಾರೆ. ದಲಿತ, ದಮನಿತ, ಗ್ರಾಮೀಣ, ನಗರ, ಕೊಳಚೆ ಪ್ರದೇಶ, ಆದಿವಾಸಿ, ಬುಡಕಟ್ಟು, ಅಲ್ಪಸಂಖ್ಯಾತ, ಮಹಿಳೆಯರೆಂದು ಪರಿಗಣಿಸಲ್ಪಡುವ ಟ್ರಾನ್ಸೆಂಡರ್ ಸಮುದಾಯ ಹೀಗೆ ಸಮಸ್ತ ಮಹಿಳೆಯರು ಅಖಿಲ ಭಾರತ ಪ್ರಜಾಸತ್ತಾತ್ಮಕ (ಜನವಾದಿ) ಮಹಿಳಾ ಸಂಘಟನೆಯಲ್ಲಿ ತೊಡಗಿಸಿಕೊಂಡು ಚಳುವಳಿಯನ್ನು ಮುನ್ನಡೆಸುತ್ತಿರುವರು. ಹೀಗೊಂದು ಬಲಿಷ್ಠ ಮಹಿಳಾ ಸಂಘಟನೆಯು ಸ್ವಾತಂತ್ರ್ಯ ಚಳುವಳಿಯ ಮುನ್ನಾ ದಿನಗಳಿಂದಲೂ ಬೆಳೆದು ಬಂದಿದೆ. ದೀರ್ಘ ಸಂಘರ್ಷದ ಇತಿಹಾಸ ಹೊಂದಿದ ಮಹಿಳಾ ಚಳುವಳಿಯು ಬೆಳೆಯಲು ಮುಖ್ಯ ಕಾರಣ ಗಟ್ಟಿಯಾದ ಸಂಘಟನಾ ಚೌಕಟ್ಟು.



ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡಲು ದೃಢವಾದ ನಿಲುವಿನಿಂದ ಬಹುದೊಡ್ಡ ಸಮೂಹವು, ರಾಜಕೀಯ ಪ್ರಜ್ಞೆಯೊಂದಿಗೆ ಸುಸಜ್ಜಿತ ಸಂಘಟನೆಯನ್ನು ಹೊಂದಬೇಕಾಗುತ್ತದೆ. ಇಂತಹ ಸಂಘಟನೆಯು ಈವರೆಗೆ ಬೆಳೆದು ಬರಲು ಸಂಘಟನೆಯು ಕಾಲಕಾಲಕ್ಕೆ ಮಹಿಳೆಯರಿಗೆ ಬಾಧಿಸುವ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುತ್ತಲೂ, ಸಮಾಜದಲ್ಲಿನ ತಾರತಮ್ಯವನ್ನು ತಿರಸ್ಕರಿಸಿ ಸಮಭಾವದ ಅಭಿಪ್ರಾಯ ರೂಪಿಸುತ್ತಲೂ, ಮಹಿಳಾ ಅಸ್ಮಿತೆ ಅಸ್ತಿತ್ವವನ್ನು ಜಾಗೃತಗೊಳಿಸುತ್ತಲೂ ಮತ್ತು ಜಾಗತಿಕ ಕಣ್ಣೋಟದಲ್ಲಿ ಸಮಸ್ತ ಮಹಿಳೆಯರನ್ನು ಒಳಗೊಳ್ಳುತ್ತಲೂ ಸಂಘಟನೆಯು ಹೆಜ್ಜೆ ಹಾಕಿದೆ. ಈ ದಿಸೆಯಲ್ಲಿ ಹೆಜ್ಜೆ ಹಾಕುವಾಗ ಸಮಾಜವನ್ನು ಸಮಾಜೋ ಆರ್ಥಿಕ, ರಾಜಕೀಯ ನೆಲೆಯಲ್ಲಿ ವಿಶ್ಲೇಷಣೆ ಮಾಡುತ್ತ ಬಂದಿದೆ. ಮತ್ತು ಸಂಘಟನೆಯನ್ನು ಶಿಸ್ತುಬದ್ದವಾಗಿ ಮುನ್ನಡೆಯಲು ಕಾಲಕಾಲಕ್ಕೆ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸುತ್ತ ಬಂದಿದೆ.

‘ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ’ಗೆ ಸಂಘಟನೆಯ ಸಂವಿಧಾನವಿದೆ. ಕಾರ್ಯಕ್ರಮವಿದೆ. ಸಂವಿಧಾನ ಮತ್ತು ಕಾರ್ಯಕ್ರಮದ ಮಾರ್ಗದರ್ಶನದಲ್ಲಿ ಸಂಘಟನೆಯು ಮುನ್ನಡೆಯುತ್ತದೆ. ಯಾವುದೇ ವೈಯಕ್ತಿಕ ಇಚ್ಛೆಗನುಸರಿಸಿ ಅಲ್ಲ, ವರ್ಷಕ್ಕೊಮ್ಮೆ ಸದಸ್ಯತ್ವ ಅಭಿಯಾನ ನಡೆಯುವುದು, ತಳಹಂತದಲ್ಲಿ ಘಟಕಗಳ ರಚನೆ ಮಾಡಲಾಗುವುದು, ಘಟಕಗಳು ಒಗ್ಗೂಡಿ ಪ್ರದೇಶ ಸಮಿತಿ ಅಥವ ತಾಲ್ಲೂಕು ಸಮಿತಿ ರಚನೆಯಾಗುವುದು. ಕ್ರಮವಾಗಿ ಜಿಲ್ಲಾ, ರಾಜ್ಯ ಮತ್ತು ಕೇಂದ್ರ ಸಮಿತಿಗಳು ಸಮ್ಮೇಳನಗಳಲ್ಲಿ ಆಯ್ಕೆಯಾಗುತ್ತವೆ. ಸಮ್ಮೇಳನದಲ್ಲಿ ಸಮಿತಿಗಳನ್ನು ಆಯ್ಕೆ ಮಾಡುವವರು ಪ್ರತಿನಿಧಿಗಳು. ಅತ್ಯಂತ ಪ್ರಜಾಪ್ರಭುತ್ವ ಮಾದರಿಯಲ್ಲಿ ನಡೆಯುವ ಸಂಘಟನೆಯು ಭಾರತದಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಿರಂತರ ಕಾರ್ಯ ನಿರ್ವಹಿಸುತ್ತ ಬಂದಿದೆ. ಇದೆಲ್ಲದಕ್ಕೂ ಮುಖ್ಯ ಕಾರಣ ಸಂಘಟನೆ ಎಂಬ ಪ್ರಬಲವಾದ ಅಸ್ತ್ರ. ಹಾಗೂ ಸಮಾನತೆಯ ಸಮಾಜಕ್ಕಾಗಿ

ಸೆಪ್ಟೆಂಬರ್ 01–07, 2025 September 01–07, 2025

ಕರ್ನಾಟಕದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ



ಆಗಸ್ಟ್ 30 ರಂದು ಸಿಂಧನೂರಿನಲ್ಲಿ ನಡೆದ 12ನೇ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನದ ಬಹಿರಂಗ ಸಭೆ

ಕರ್ನಾಟಕವು ಇತರೆ ರಾಜ್ಯಗಳಂತಲ್ಲ. ದಕ್ಷಿಣ ಭಾರತದ ರಾಜ್ಯಗಳು ಮಹಿಳಾ ಅಸ್ಮಿತೆಯ ಚರಿತ್ರೆಯನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿವೆ. ಕರ್ನಾಟಕದಲ್ಲಿ 12ನೇ ಶತಮಾನದ ಕಾಯಕ ಜೀವಿಗಳ ಚಳುವಳಿಯು ಮಹಿಳಾ ಸಮಾನತೆಯನ್ನು ಸ್ಪಷ್ಟ ತಾತ್ವಿಕ ನೆಲೆಯಲ್ಲಿ ನಿರ್ವಚನೆ ಮಾಡಿದೆ. ಮಾತ್ರವಲ್ಲ ಅನುಭವ ಮಂಟಪದಲ್ಲಿ ನಡೆಸಲಾದ ಚಿಂತನ ಮಂಥನಗಳು ಬದುಕಿನ ನಡೆಗಳೂ ಆಗಿದ್ದವು. ನುಡಿಯೊಳಗಾಗಿ ನಡೆಯುವ ಬದ್ಧತೆಯು ಕಾಯಕ ಜೀವಿಗಳಲಿತ್ತು. ಕರಾವಳಿ ಪ್ರದೇಶದಲ್ಲಿನ ಸಿರಿ ಪಾಡ್ದನ, ಮಹಿಳಾ ಅಸ್ಮಿತೆಯ ಪ್ರತೀಕವಾದ ರಾಣಿ ಅಬ್ಬಕ್ಕ ದೇವಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಎದುರಿಸಿದ ಕಿತ್ತೂರಿನ ರಾಣಿ ಚನ್ನಮ್ಮ, ಕಲ್ಯಾಣ ನಾಡಿನ ಅಸಂಖ್ಯ ವಚನಕಾರ್ತಿಯರು, ಮಹಿಳೆಯರ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನದ ಭಾಗವಾಗಿ ಹುಟ್ಟಿಕೊಂಡ ಸಾಹಿತ್ಯ ಹೀಗೆ ಕನ್ನಡ ನೆಲವು ಮಹಿಳಾ ಅಸ್ಮಿತೆಯ ಚಹರೆಯು ಲಿಂಗ ಸಮಾನತೆಯ ನೆಲೆಯಲ್ಲಿ ವಿಭಿನ್ನವಾಗಿ ಗುರುತಿಸಿಕೊಂಡಿದೆ.

ಇನ್ನಷ್ಟು ಆಳಗೊಳ್ಳುತ್ತಿರುವ ಮಹಿಳೆಯ ಸಂಘರ್ಷದ ಆಯಾಮಗಳು

ಮಹಿಳಾ ಅಸ್ಮಿತೆಯು, ಅಸ್ತಿತ್ವವು ಸಮಾಜದ ಅಭಿವೃದ್ಧಿಯ ಕಣ್ಣೋಟದಲ್ಲಿ ವಿಶ್ಲೇಷಿಸುವಾಗ ಅದೊಂದು ಸವಾಲಾಗಿ ಪರಿಣಮಿಸಿದೆ. ಏಕೆಂದರೆ ನಮ್ಮ ಸಮಾಜವು ಮನುವಾದದ ನಿಯಮಗಳನ್ನು ಹೀರಿಕೊಳ್ಳುತ್ತ ಪಾಳೇಗಾರಿಕೆಯಲ್ಲಿ ನಲುಗುತ್ತ, ಪುರುಷ ಪ್ರದಾನ್ಯತೆಯ ಪ್ರತಿಷ್ಠೆಯಲ್ಲಿ ಒಣಹಮ್ಮಿನಲ್ಲಿ ತೆವಳುತ್ತ ಬರುತ್ತಿರುವ ಪಯಣದಲ್ಲಿ ಮೂರು ಪಟ್ಟು ಶ್ರಮಕ್ಕೆ, ಉತ್ಪಾದನೆಯ ಪ್ರಕ್ರಿಯೆಗೆ ಒಡ್ಡಿಕೊಂಡ ಮಹಿಳೆಯರ ಸಾಧನೆ ಮತ್ತು ಸಾಮರ್ಥ್ಯವನ್ನು ಸಾದರಪಡಿಸುವುದು ಬಹು ಕಠಿಣವಾದ ಸಂಗತಿಯಾಗಿದ್ದು ಹೌದು. ಮಹಿಳೆಯೊಬ್ಬಳು ಸಮಾಜದ ಯಾವುದೇ ಸ್ಥರದಲ್ಲಿದ್ದವಳಾಗಿದ್ದಾಗಲೂ ಅವರವರ ಹಂತದಲ್ಲಿ ಮತ್ತು ಆಯಾ ಪರಿಸ್ಥಿತಿಯಲ್ಲಿ ಮಡುಗಟ್ಟಿದ ಮಹಿಳಾ ವಿರೋಧಿ ನಿಯಮಗಳು ಬಹುದೊಡ್ಡ ತೊಡರುಗಾಲಾಗಿ ಅವಳನ್ನು ಅಧಃಪತನಕ್ಕೆ ತಳ್ಳುವ ಪ್ರಯತ್ನಗಳು ನಡೆದೇ ಇರುತ್ತವೆ. ಇವುಗಳ ಮದ್ಯದಿಂದಲೇ ಮಹಿಳೆಯು ಉತ್ಪಾದನಾ ಸಾಧನಗಳು ಮತ್ತು ಸಂಬಂಧಗಳ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಸಾಮಾಜಿಕ ವಿದ್ಯಮಾನಗಳೊಂದಿಗೆ ಸೆಣೆಸುತ್ತ, ಬೆರೆಯುತ್ತ, ಬದಲಾಗುತ್ತ, ಬದಲಾಯಿಸುತ್ತ ಸಮಗ್ರ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿದ್ದಾಳೆ.

ರಕ್ಷಿಸುವ ಹೆಸರಿನಲ್ಲಿ ಮತ್ತೆಮತ್ತೆ ಪಾತಾಳಕ್ಕೆ ತಳ್ಳುತ್ತಿವೆ

ಒಟ್ಟು ಬದಲಾವಣೆಯಲ್ಲಿ ತೊಡಗಿದ ಶ್ರಮಶಕ್ತಿಯ ಮತ್ತು ಸಮಾಜದ ನಿಯಮಗಳ ಸಂಘರ್ಷದಲ್ಲಿ ದಮನಿತ ಲೋಕದ ಭಾಗವೇ ಆಗಿ ಅವಳ ಅಸ್ಮಿತೆಯು ಮುನ್ನೆಲೆಗೆ ಬಂದಿದೆ. ಏಳು ಬೀಳುಗಳ ಹಾದಿಯು ಬಹಳ ಸಂಘರ್ಷಮಯ ಮತ್ತು ಸಂಕಟಮಯದ್ದಾಗಿದ್ದು ಸಹಜವಾಗಿದೆ. ಮನೆ ಮತ್ತು ಮದುವೆಗಳೆಂಬ ಸಂಸ್ಥೆಗಳು ಆರಂಭವಾದಾಗಿನಿಂದ ಮಹಿಳೆಯ ಸಂಘರ್ಷದ ಆಯಾಮಗಳು ಇನ್ನಷ್ಟು ಆಳಗೊಳ್ಳುತ ಬಂದಿವೆ. ಅವಳನ್ನು ರಕ್ಷಿಸುವ ಹೆಸರಿನಲ್ಲಿ ಮತ್ತೆಮತ್ತೆ ಪಾತಾಳಕ್ಕೆ ತಳ್ಳುತ್ತ ಹೆಚ್ಚು ಯಾತನಾಮಯಗೊಳಿಸಲಾಗಿದೆ. ಹಾಗೆ ನೋಡಿದರೆ ಈ ಎರಡೂ ಸಂಸ್ಥೆಗಳೂ ಅವಳನ್ನು ನಿರಂತರವಾಗಿ ಬಂಧನದಲ್ಲಿರಿಸುವ ಸಾಧನಗಳಾಗಿಯೇ ಬಳಸಲಾಗಿದೆ. ಖಾಸಗಿ ಆಸ್ತಿಯ ರಕ್ಷಣೆಯ ಯೋಜನೆಯು ಇದರ ಆಳದಲ್ಲಿ ಹುದುಗಿದ್ದು ಚರಿತ್ರೆ ಕೆದಕಿದರೆ ಅರಿವಿಗೆ ಬರುವುದು. ಮನೆ ಮತ್ತು ಮದುವೆಯ ಜೊತೆಗೆ ಪುತ್ರ ಫಲಾಪೇಕ್ಷೆಯು ಗಾಢವಾಗಿ, ಹೆಂಗೂಸು ನಿರಾಕರಣೆಗೆ ದೈವದ ನೆರವು ಪಡೆದು ಕ್ರಮೇಣ ಕ್ರೌರ್ಯದ ನಿಯಮಗಳು ಸಮಾಜದ ಮೌಲ್ಯಗಳಾದವು. ಮಕ್ಕಳಾಗದ ರಾಣಿಯರು, ದತ್ತು ಪಡೆಯಲಾಗದ ಅಸಹಾಯಕತೆಯ ರಾಣಿಯರು, ಗಂಡ ಸತ್ತ ನಂತರದಲ್ಲಿ ವೈಧವ್ಯದ ಸಂಕಟ ಅಪಮಾನದಲ್ಲಿ ಬೆಂದ ರಾಣಿಯರು ಹೀಗೆ ಅಧಿಕಾರದ ಅಕ್ಕಪಕ್ಕದಲ್ಲಿದ್ದ ಆರ್ಥಿಕ ಸದೃಢತೆಯ ಮಹಿಳೆಯರೂ ಎದುರಿಸಿದ ತಾರತಮ್ಯಗಳಿಗೂ ತೀವ್ರ ಮಹಿಳಾ ವಿರೋಧಿ ಆಯಾಮವಿದೆ.

ಇಂದಿಗೂ ಮುಂದುವರೆದಿರುವ ಮಹಿಳಾ ವಿರೋಧಿ ಮೌಡ್ಯಾಚರಣೆ

ಅಂತೆಯೇ ಅಸ್ಪೃಷ್ಟಾಚರಣೆಗೆ ಬಲಿಯಾದ ಮಹಿಳೆಯರ ಅಪಮಾನಜನಕ ಬದುಕಿಗೆ ತೀವ್ರ ಯಾತನಾಮಯದ ಸಂಕಥನವಿದೆ. ದೇವದಾಸಿ ಪದ್ಧತಿಯು ಇದಕ್ಕೊಂದು ಉಧಾಹರಣೆಯಾಗಿದೆ. ಒಟ್ಟು ಜನಸಂಖ್ಯೆಯ ಅರ್ಧದ ಹತ್ತಿರ ಇರುವ ಮಹಿಳಾ ಲೋಕವು, ಅದರಲ್ಲಿಯೂ ಶ್ರಮಜೀವಿ ವರ್ಗವು ಬಡತನ, ಹಿಂಸೆ, ದೌರ್ಜನ್ಯ ಅನುಭವಿಸುತ್ತ ಬಂದಿದೆ. ಕರ್ನಾಟಕದ ಅರ್ಧ ರಾಜ್ಯದವರೆಗೂ ಹರಡಿಕೊಂಡಿರುವ ಪ್ರದೇಶದಲ್ಲಿ ದೇವದಾಸಿ ಪದ್ಧತಿಯು ಚಾಲ್ತಿಯಲ್ಲಿದೆ. ಕಾಡುಗೊಲ್ಲರ ಹಟ್ಟಿಗಳಲ್ಲಿ ಮಹಿಳಾ ವಿರೋಧಿ ಮೌಡ್ಯಾಚರಣೆ ಇಂದಿಗೂ ಮುಂದುವರೆದಿದೆ. ಅಂದರೆ ತಿಂಗಳ ರಕ್ತಸ್ರಾವದ ಒಂದು ವಾರದವರೆಗೆ, ಬಾಣಂತಿ ಇದ್ದಾಗ ಮಹಿಳೆಯರು, ಯುವತಿಯರು ಹಟ್ಟಿಯ ಆಚೆಗೆ ಕಾಡಿನಲ್ಲಿ ನಿರ್ಜನ ಪ್ರದೇಶದಲ್ಲಿ ಸಣ್ಣ ಗುಬ್ಬದಲ್ಲಿ ವಾಸಮಾಡಬೇಕು. ಶಿಕ್ಷಣಕ್ಕೆ, ಆರೋಗ್ಯಕ್ಕೆ ಅತ್ಯಂತ ಮಾರಕ ಆಚರಣೆ ಇದು. ಮಾನಸಿಕವಾಗಿ ಜರ್ಝರಿತ ಆಘಾತ. ಹೆಣ್ಣು ಭ್ರೂಣ ಹತ್ಯೆಯು ಈಗಲೂ ಮುಂದುವರೆದಿದೆ. ಹೆಂಗೂಸುಗಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ತಡೆ ಬಿದ್ದಿಲ್ಲ. ಒಂಟಿ ಮಹಿಳೆಯರು ಕುಟುಂಬ ನಿರ್ವಹಣೆಯ ಜೊತೆಗೆ ಸಾಮಾಜಿಕವಾಗಿಯೂ ದೌರ್ಜನ್ಯ, ತಾರತಮ್ಯ ಎದುರಿಸಬೇಕು. ಕೌಟುಂಬಿಕ ದೌರ್ಜನ್ಯ ಕೋವಿಡ್ ನಿಂದ ಈಚೆಗೆ ಮೂರು ಪಟ್ಟು ಹೆಚ್ಚಿದೆ. ಲೈಂಗಿಕ ಅಲ್ಪಸಂಖ್ಯಾತ ಮಹಿಳೆಯರು ಕುಟುಂಬದಿಂದಲೂ, ಸಮಾಜದಿಂದಲೂ ವರ್ಜಿತರು. ತಿರಸ್ಕೃತರು. ಪೋಲಿಸ್ ಕಿರುಕುಳ, ಸಮಾಜದಿಂದ ಕಿರುಕುಳ, ಲೈಂಗಿಕ ಹಿಂಸೆಯಿಂದ ಈ ಸಮುದಾಯವು ನಲುಗಿ ಹೋಗುತ್ತಿದೆ. ಬಿಕ್ಷಾಟನೆ, ದೇಹಾಟನೆ ಹೊಟ್ಟೆ ತುಂಬಿಸಿಕೊಳ್ಳುವ ದಾರಿಯಾಗಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವಲಸೆ

ಉತ್ತರ ಕರ್ನಾಟಕದ ಜಿಲ್ಲೆಗಳಿಂದ ವಲಸೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಭೂಹೀನ ಕೃಷಿಕೂಲಿಕಾರರ ಪ್ರಮಾಣವು ಶೇ. 64ಕ್ಕಿಂತಲೂ ಹೆಚ್ಚಿದೆ. ಕೃಷಿಯಲ್ಲಿ ದೊರೆಯುವ ಕೆಲಸದ ದಿನಗಳು ಅತ್ಯಲ್ಪ. ಅಂದರೆ ವರ್ಷದಲ್ಲಿ 50 ರಿಂದ 100 ದಿನಗಳು ಮಾತ್ರ. ಉಳಿದ ದಿನಗಳು ನಿರುದ್ಯೋಗವೇ. ಸಂಪಾದನೆಗೆ ಬೇರೆ ವ್ಯವಸ್ಥೆ ಇಲ್ಲವಾಗಿದೆ. ಕೃಷಿ ಬಿಕ್ಕಟ್ಟು ಮತ್ತು ಕೃಷಿ ವಿರೋಧಿ ನೀತಿಯಿಂದಾಗಿ ಶ್ರೀಮಂತ ರೈತರು ಬಡ ರೈತರಾಗಿ ಮತ್ತು ಬಡ ರೈತರು ಭೂಹೀನ ರೈತರಾಗಿ ಮಾರ್ಪಟ್ಟಿದ್ದಾರೆ. ಹಾಗೂ ಭೂಹೀನ ರೈತರು ಸಮಿಪದ ಪಟ್ಟಣಗಳಿಗೆ ವಲಸೆ ಬಂದು ಕಾರ್ಮಿಕರಾಗಿದ್ದಾರೆ. ಮಹಿಳೆಯರು ಮನೆಗೆಲಸದ ಕಾರ್ಮಿಕರಾಗಿಯೊ, ಕಟ್ಟಡ ಕಾರ್ಮಿಕರಾಗಿಯೋ ಶ್ರಮದ ಬದುಕಿಗೆ ಒಡ್ಡಿಕೊಂಡಿದ್ದಾರೆ.



ಆಗಸ್ಟ್ 30 ರಂದು ಸಿಂಧನೂರಿನಲ್ಲಿ ನಡೆದ 12ನೇ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ

1979ರ 'ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮ್ಮೇಳನ'

1979ರ ಮಾರ್ಚ್ 10, 11 ರಂದು ಮಂಗಳೂರಿನಲ್ಲಿ ನಡೆದ 'ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮ್ಮೇಳನದಲ್ಲಿ ಮೊದಲ ಘೋಷಣೆಗಳ ಸ್ವರೂಪದಲ್ಲಿ ಚಾರಿತ್ರಿಕ ಅಂಶಗಳು ಬಂದಿದ್ದು ಹೀಗೆ: ನಾವು ಎಂದಿನವರೆಗೆ ಹೆಂಗಸರನ್ನು ಸಾರ್ವಜನಿಕ ಕ್ಷೇತ್ರಕ್ಕೆ ಎಳೆದು ತರುವುದಿಲ್ಲವೋ, ಎಂದಿನವರೆಗೆ ಅವರು ದೇಶದ ರಾಜಕೀಯದಲ್ಲಿ ಪಾತ್ರ ವಹಿಸುವುದಿಲ್ಲವೋ, ಎಂದಿನವರೆಗೆ ಆಕೆ ಅಡುಗೆಮನೆಯ ನಾಲ್ಕು ಗೋಡೆಗಳಿಂದೀಚೆಗೆ ಬರುವುದಿಲ್ಲವೋ ಅಂದಿನವರೆಗೆ 'ಪ್ರಜಾಪ್ರಭುತ್ವ' ಮತ್ತು 'ಸಮಾಜವಾದ'ದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗುತ್ತದೆ. ದುಡಿಯುವ ಮಹಿಳೆಯರ ಸಂಪೂರ್ಣ ವಿಮೋಚನೆಯಾಗದ ಹೊರತು ದುಡಿಯುವ ವರ್ಗದ ವಿಮೋಚನೆ ಸಾಧ್ಯವಿಲ್ಲ. ಉದ್ಯೋಗದ ಹಕ್ಕು ಎಲ್ಲ ಮಹಿಳೆಯರ ಹಕ್ಕಾಗಬೇಕು. ಆರ್ಥಿಕ ಕ್ಷೇತ್ರದಲ್ಲಿ ಪಾಲುಗೊಳ್ಳುವ ಹೆಣ್ಣು ಮಾತ್ರ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸಮಾನತೆಯನ್ನು ಸಾಧಿಸಬಲ್ಲಳು.

ಈ ಸಮ್ಮೇಳನದಲ್ಲಿ ಮಹಿಳೆಯರ ದಾರುಣ ಬದುಕಿನ ಬಗ್ಗೆ ಚರ್ಚೆಗಳು ನಡೆದಿವೆ. ಸಮಾಜದ ಮತ್ತು ಸರಕಾರದ ಧೋರಣೆಯನ್ನೂ ವಿಮರ್ಶಿಸಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಆಳುವ ವರ್ಗವು ತಳೆದ ಕಾರ್ಮಿಕ ವಿರೋಧಿ ನಿಲುವುಗಳನ್ನು ವಿವರಿಸಲಾಗಿದೆ. ಮತ್ತು ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಇರುವ ಏಕೈಕ ಅಸ್ತ್ರವೆಂದರೆ ಸಂಘಟನೆ ಮತ್ತು ಹೋರಾಟವಾಗಿರುವುದರಿಂದ ಸಂಘಟನೆಯನ್ನು ಬಲಿಷ್ಠಗೊಳಿಸುವ ಮತ್ತು ಮುಂದಕ್ಕೆ ಮಾಡಬೇಕಿರುವುದನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿದೆ. ತೀರ್ಮಾನ ಕೈಗೊಳ್ಳುವಾಗ ಎರಡು ಮುಖ್ಯ ಅಂಶಗಳನ್ನು ಅತ್ಯಂತ ದೃಢತೆಯಿಂದ ಹೇಳಲಾಗಿದೆ.

ಒಂದನೆಯದಾಗಿ: ಶ್ರಮಜೀವಿಗಳ ಸಂಘಟನೆಗಳಲ್ಲೇ ದುಡಿಯುವ ಮಹಿಳೆಯರ ನಾಯಕತ್ವ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ದೊರೆಯುವಂತಾಗಬೇಕು. **ಎರಡನೆಯದಾಗಿ;** ರಾಜಕೀಯ ಚಟುವಟಿಕೆ ಮತ್ತು ಮುಖಂಡತ್ವ ಪುರುಷರದ್ದೇ ಸ್ವತ್ತಾಗಬಾರದು.

ಇದಕ್ಕಾಗಿ ದುಡಿಯುವ ಮಹಿಳೆಯರ ಸಂಘಟನೆ ಮತ್ತು ಹೋರಾಟವು ಎಲ್ಲ ಮಹಿಳೆಯರ ಪ್ರಜಾಪ್ರಭುತ್ವ ಹೋರಾಟಕ್ಕೂ ವಿಮೋಚನೆಗೂ ಸ್ಫೂರ್ತಿ ಮತ್ತು ನಾಯಕತ್ವವನ್ನು ಕೊಡುವಂತಾಗಬೇಕು. ಮತ್ತು ಮುಂದುವರೆದು; ದುಡಿಯುವ ಮಹಿಳೆಯರು ಸಮಾಜವಾದಿ

ಪುಟ 14 ನೋಡಿ

ಸೆಪ್ಟೆಂಬರ್ 2008ರಲ್ಲಿ ಆರು ಜನರ ಸಾವು ಮತ್ತು ಸುಮಾರು 100 ಜನರನ್ನು ಗಾಯಾಳುಗಳಾಗಿಸಿದ ಮಾಲೆಗಾಂವ್ ಸ್ಫೋಟದ ಪ್ರಕರಣಕ್ಕೆ ಸಂಬಂಧಿಸಿ ಬಂದಿರುವ ಅಂತಿಮ ತೀರ್ಪು ಜಾಮೀನಿನ ಮೇಲೆ ಹೊರಗಿದ್ದ ಎಲ್ಲ 11 ಆರೋಪಿಗಳನ್ನು ಖುಲಾಸೆಗೊಳಿಸಿದೆ. ಆದರೆ, ಈ ಪ್ರಕರಣವು ಬಲವಾದ ಅನುಮಾನವನ್ನು ಸೃಷ್ಟಿಸಿದೆಯಾದರೂ, ಆರೋಪಗಳನ್ನು ಸಾಬೀತುಪಡಿಸಲು ವಾಸ್ತವಿಕ ಪುರಾವೆಗಳನ್ನು ಪ್ರಾಸಿಕ್ಯೂಷನ್ ಮಂಡಿಸಲಿಲ್ಲ ಎಂದು ಎನ್‌ಐಎ ನ್ಯಾಯಾಲಯ ಟಿಪ್ಪಣಿ ಮಾಡಿರುವುದು ಗಮನಾರ್ಹ. ಮಹಾರಾಷ್ಟ್ರದ ಎಟಿಎಸ್ ಸಲ್ಲಿಸಿದ್ದ ವರದಿಯಿಂದ ಮೂಡಿಬರುವ ಚಿತ್ರವೆಂದರೆ, ಖುಲಾಸೆಯಾದವರು ಪ್ರತಿಪಾದಿಸುವ ಆಲೋಚನೆಗಳು ಮತ್ತು ಆಕಾಂಕ್ಷೆಗಳು ಒಟ್ಟಾರೆಯಾಗಿ ಇಂದು ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಅಧಿಕಾರದಲ್ಲಿರುವ ಹೆಚ್ಚಿನವರ ಚಿಂತನೆಗಳ ಅವಿಭಾಜ್ಯ ಅಂಗವಾಗಿವೆ. ಇಂದು ನಾವು ನೋಡುತ್ತಿರುವ ವಿಷವೃಕ್ಷದ ಬೀಜಗಳನ್ನು ಮಾಲೆಗಾಂವ್ ಸ್ಫೋಟದಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವನ್ನು ಸರಕಾರೀ ಕ್ರಿಯೆಗಳ ಮೂಲಕ ವಾಸ್ತವಗೊಳಿಸಲಾಗುತ್ತಿದ್ದರೆ, ಇನ್ನು ಕೆಲವನ್ನು ಬಿಜೆಪಿ ಮತ್ತು ಆರೆಸ್ಸೆಸ್ ಹಂಚಿಕೊಂಡಿವೆ ಮತ್ತು ನೇರ ಕಾರ್ಯಾಚರಣೆಗಳನ್ನು ಇಂತಹ ಗುಂಪುಗಳಿಗೆ ಹೊರಗುತ್ತಿಗೆ ನೀಡಲಾಗುತ್ತಿದೆ.

ಮಾಲೆಗಾಂವ್ ಬಾಂಬ್ ಸ್ಫೋಟ ಮತ್ತು ಕೇಸರಿ ಉಗ್ರಗಾಮಿಗಳು 'ಅಮಾಯಕರೆ'?

2000ದ ದಶಕದ ಆರಂಭದಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ನಡೆದ ಸರಣಿ ಬಾಂಬ್ ಸ್ಫೋಟಗಳು ದೇಶವನ್ನು ಬೆಚ್ಚಿಬೀಳಿಸಿದ್ದವು. ಅವುಗಳೆಂದರೆ ಮಾಲೆಗಾಂವ್ (2006, 2008), ಸಂಝೌತಾ ಎಕ್ಸ್‌ಪ್ರೆಸ್ (2007), ಹೈದರಾಬಾದ್‌ನ ಮೆಕ್ಕಾ ಮಸೀದಿ (2007), ಅಜ್ಮೇರ್ ಷರೀಫ್ ದರ್ಗಾ (2007) ಮತ್ತು ಮೊದಸಾ (2008). ಅದಕ್ಕೂ ಮೊದಲು, ಸಾರ್ವಜನಿಕ ಸ್ಥಳಗಳಲ್ಲಿ ಹಲವಾರು ಬಾಂಬ್ ಸ್ಫೋಟಗಳು ನಡೆದಿದ್ದವು, ಇವುಗಳನ್ನು ಇಸ್ಲಾಮಿಸ್ಟ್ ಗುಂಪುಗಳು ತಾವು ನಡೆಸಿದ್ದೆಂದು ಹೇಳಿಕೊಂಡಿವೆ. ನಂತರದ ಸ್ಫೋಟಗಳು ಹಿಂದೂ ಮತಾಂಧರು ನಡೆಸಿದ ಸೇಡಿನ ದಾಳಿಗಳು ಎಂದು ಭಾವಿಸಲಾಗಿತ್ತು. ಆದರೆ, ಇವು ಹೆಚ್ಚು ಅಪಾಯಕಾರಿ ದೃಷ್ಟಿಕೋನ ಮತ್ತು ಯೋಜನೆಗಳನ್ನು ಹೊಂದಿದ್ದವು ಎಂದು ನಂತರದ ತನಿಖೆಗಳು ಬಹಿರಂಗಪಡಿಸಿದವು. ಇದು 'ಸೇಡಿನ ದಾಳಿಗಳು' ಎಂಬುದು ಒಂದು ನೆಪವಷ್ಟೆ ಎಂಬುದು ಸಾಬೀತಾಯಿತು. ಹಲವು ವರ್ಷಗಳ ನಂತರ, 2021ರಲ್ಲಿ ಬಂಧಿಸಲ್ಪಟ್ಟ ಸ್ವಾಮಿ ಅಸೀಮಾನಂದ ಎಂಬಾತ, ವಿವಿಧ ಸಂಘ ಪರಿವಾರದ ಸಂಘಟನೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ವ್ಯಕ್ತಿಗಳು ನಂತರದ ಸ್ಫೋಟಗಳಿಗೆ ಕಾರಣರಾಗಿದ್ದಾರೆ ಎಂದು ಪೊಲೀಸರ ಬಳಿ ತಪ್ಪೊಪ್ಪಿಕೊಂಡರು. ಈ ಪಿತೂರಿಯಲ್ಲಿ ಆರ್‌ಎಸ್‌ಎಸ್‌ನ ಕೆಲವು ಪ್ರಚಾರಕರು ಮತ್ತು ಒಬ್ಬ ಹಿರಿಯ ಆರ್‌ಎಸ್‌ಎಸ್ ಮುಖಂಡರೂ ಭಾಗಿಯಾಗಿದ್ದಾರೆ ಎಂದೂ ಆತ ಆರೋಪಿಸಿದರು.

ಇತ್ತೀಚೆಗೆ, ಸೆಪ್ಟೆಂಬರ್ 2008ರಲ್ಲಿ ನಡೆದ ಮಾಲೆಗಾಂವ್ ಸ್ಫೋಟದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈಯಲ್ಲಿ ಎನ್‌ಐಎ ನ್ಯಾಯಾಲಯವು ಅಂತಿಮ ತೀರ್ಪು ನೀಡಿತು. ಮನೆಯಲ್ಲಿ ತಯಾರಿಸಿದ ಒಂದು ಬಾಂಬ್ ಮಾಲೆಗಾಂವ್ ಪಟ್ಟಣದ ಮಸೀದಿಯೊಂದರ ಬಳಿ ಸ್ಫೋಟಗೊಂಡಾಗ ಆರು ಜನರು ಸಾವನ್ನಪ್ಪಿದರು ಮತ್ತು ಸುಮಾರು 100 ಜನರು ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರಗಿದ್ದ ಎಲ್ಲ 11 ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಇವರಲ್ಲಿ ಮಾಜಿ ಸಂಸತ್ ಸದಸ್ಯೆ ಸಾಧ್ವಿ ಪ್ರಜ್ಞಾ ಠಾಕೂರ್, ಕೆಲವು ಮಾಜಿ ಸೈನಿಕರು ಮತ್ತು ಕೆಲವು ಅತೃಪ್ತ ಸಂಘಪರಿವಾರದ ಸಹವರ್ತಿಗಳೂ ಸೇರಿದ್ದಾರೆ.

2011ರಲ್ಲಿ ದೇಶದ ವಿವಿಧ ಭಾಗಗಳಲ್ಲಿ ನಡೆದಿರುವ ಸ್ಫೋಟಗಳು ಒಂದಕ್ಕೊಂದು ಸಂಬಂಧ ಹೊಂದಿವೆ ಎಂದು ಪತ್ತೆಯಾದ ನಂತರ, ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್)ದಿಂದ ಈ ಪ್ರಕರಣವನ್ನು ಎನ್‌ಐಎ ವಹಿಸಿಕೊಂಡಿತು.

ರಾಗ ಬದಲಾಯಿತು



2014ರಲ್ಲಿ ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಎನ್‌ಐಎ ರಾಗ ಬದಲಾಯಿತು ಮತ್ತು 2016ರಲ್ಲಿ ಅದು ಪ್ರಜ್ಞಾ ಠಾಕೂರ್ ಅವರನ್ನು ಖುಲಾಸೆಗೊಳಿಸಲು ಪ್ರಕರಣದಲ್ಲಿ ಪೂರಕ ಆರೋಪಪಟ್ಟಿ ಸಲ್ಲಿಸಿತು. ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸಿತು ಮತ್ತು ಪ್ರಕರಣವು 2018ರಲ್ಲಿ ವಿಚಾರಣೆಗೆ ಬಂದಿತು. ವಿವಿಧ ತಾಂತ್ರಿಕ ಮತ್ತು ಕಾರ್ಯವಿಧಾನದ 'ಲೋಪ'ಗಳಿಂದಾಗಿ ಎಟಿಎಸ್ ನಡೆಸಿದ ಆರಂಭಿಕ ತನಿಖೆ ಹೆಚ್ಚು ಸ್ವೀಕಾರಾರ್ಹವಲ್ಲ ಎಂದು ಎನ್‌ಐಎ ನ್ಯಾಯಾಲಯಕ್ಕೆ ಕಂಡಿತು. ಈ ಪ್ರಕರಣವು ಬಲವಾದ ಅನುಮಾನವನ್ನು ಸೃಷ್ಟಿಸಿದೆ, ಆದರೆ ಆರೋಪಗಳನ್ನು ಸಾಬೀತುಪಡಿಸಲು ವಾಸ್ತವಿಕ ಪುರಾವೆಗಳನ್ನು ಪ್ರಾಸಿಕ್ಯೂಷನ್ ಮಂಡಿಸಲಿಲ್ಲ ಎಂದು ನ್ಯಾಯಾಲಯ ಹೇಳಿದೆ. ಇದರ ಸೂಚನೆಯನ್ನು 2015ರಷ್ಟು ಹಿಂದೆಯೇ ವಿಶೇಷ ಎನ್‌ಐಎ ಪ್ರಾಸಿಕ್ಯೂಟರ್ ರೋಹಿಣಿ ಸಾಲ್ಯಾನ್ ನೀಡಿದ್ದರು. "ಮೇಲಿನವರ" ನಿರ್ದೇಶನದಂತೆ ಈ ಪ್ರಕರಣವನ್ನು ನಿಧಾನಗೊಳಿಸಬೇಕು ಎಂದು ಎನ್‌ಐಎ ಬಯಸುತ್ತಿದೆ ಎಂದು ಅಂದು ಅವರು ಆರೋಪಿಸಿದ್ದರು.

ಎಟಿಎಸ್ ಸಲ್ಲಿಸಿದ ಆರೋಪಪಟ್ಟಿಯಲ್ಲಿ ಆರೋಪಿಗಳು ನಡೆಸಿದ ವಿವಿಧ ಸಭೆಗಳ ವೀಡಿಯೊ ರೆಕಾರ್ಡಿಂಗ್‌ಗಳು (ಭಾಗವಹಿಸಿದವರಲ್ಲಿ ಒಬ್ಬರು ಮಾಡಿದ್ದು), ವಿಚಾರಣೆಯ ದಾಖಲೆಗಳು, ಸಾಮಾನ್ಯ ವಿಧಿವಿಜ್ಞಾನ ವರದಿಗಳ ಹೊರತಾಗಿ, ಇತರ ಸಭೆಗಳ ಪ್ರತಿಗಳು ಇತ್ಯಾದಿಗಳನ್ನು ಒಳಗೊಂಡಿರುವ ಬೃಹತ್ ಪ್ರಮಾಣದ ಪೋಷಕ ಪುರಾವೆಗಳನ್ನು ಲಗತ್ತಿಸಲಾಗಿದೆ. 2010ರಲ್ಲಿ, ಈ ದಾಖಲೆಗಳನ್ನು ಪ್ಯಾರಿಸ್‌ನ CERI-Sciences Po/CNRS ನಲ್ಲಿ ಹಿರಿಯ ಸಂಶೋಧನಾ ಫೆಲೋ ಮತ್ತು ಲಂಡನ್‌ನ ಕಿಂಗ್ಸ್ ಕಾಲೇಜ್‌ನಲ್ಲಿ ಭಾರತೀಯ ರಾಜಕೀಯ ಮತ್ತು ಸಮಾಜಶಾಸ್ತ್ರದ ಪ್ರಾಧ್ಯಾಪಕರಾದ ಕ್ರಿಸ್ಟೋಫೆ ಜಾಫ್ರೆಲೊಟ್ ಅವರು 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' (ಸೆಪ್ಟೆಂಬರ್ 4, 2010)ಯಲ್ಲಿ ವಿಶೇಷ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಲೇಖನ ಮತ್ತು ಪ್ರಕರಣದ ಅನೇಕ ಪ್ರಮುಖ ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯ ಇವೆ. ಅದೇ ಪ್ರಕರಣದ ದಾಖಲೆಗಳೊಂದಿಗೆ ಅದರ ಸಾರಾಂಶವನ್ನು 'ದಿ ವೈರ್'ನಲ್ಲಿ (ಆಗಸ್ಟ್ 5, 2025) ಪ್ರಕಟಿಸಲಾಗಿದೆ. ಕೆಳಗೆ ನೀಡಲಾದ ವಿಶ್ಲೇಷಣೆಯು ಅದರಲ್ಲಿ ನೀಡಲಾದ ಪ್ರಕರಣದ ದಾಖಲೆಗಳನ್ನು ಆಧರಿಸಿದೆ.

ಸಂಚು ಮತ್ತು ಸಂಚುಕೋರರು

ವಿಚಾರಣಾ ಪ್ರತಿಲಿಪಿಯ ಪ್ರಕಾರ, 2006ರಲ್ಲಿ 'ಅಭಿನವ್ ಭಾರತ್' ಎಂಬ ಸಂಘಟನೆಯನ್ನು ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಹುಟ್ಟುಹಾಕಿದರು. ಈ ಹೆಸರನ್ನು 1905ರಲ್ಲಿ ವಿ.ಡಿ.ಸಾವರ್ಕರ್ ಅವರು ಪ್ರಾರಂಭಿಸಿದ ಚಳುವಳಿಯ ನೆನಪಿನಲ್ಲಿ ಇಡಲಾಗಿದೆ. ಆದರೆ, ನಾಥೂರಾಂ ಗೋಡ್ಸೆಯವರ ಸೋದರ ಸೊಸೆ ಮತ್ತು ಸಾವರ್ಕರ್ ಅವರ ಸೋದರಳಿಯನ ಪತ್ನಿ ಹಿಮಾನಿ ಸಾವರ್ಕರ್ ಅವರು, ಆರೆಸ್ಸೆಸ್ ಪ್ರಚಾರಕರಾದ ಸಮೀರ್ ಕುಲಕರ್ಣಿಯವರು ಈ ಸಂಘಟನೆಯನ್ನು ಹುಟ್ಟುಹಾಕಿದ್ದಾರೆ ಎಂದು ಹೇಳಿದ್ದಾರೆ.

ವಿವಿಧ ಆರೋಪಿಗಳು ಮತ್ತು ಇತರರು ನೀಡಿದ ಹೇಳಿಕೆಗಳ ಪ್ರಕಾರ, ಪ್ರಮುಖ ವ್ಯಕ್ತಿಗಳಲ್ಲಿ ಸ್ವಾಮಿ ಅಮೃತಾನಂದ ದೇವ್ ತೀರ್ಥ (ಸುಧಾಕರ್ ದ್ವಿವೇದಿ, ಸುಧಾಕರ್ ಧರ್ ಮತ್ತು ದಯಾನಂದ ಪಾಂಡೆ ಎಂಬ ಹೆಸರುಗಳಲ್ಲಿಯೂ ಪರಿಚಿತರು), ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಮೇಜರ್ ರಮೇಶ್ ಉಪಾಧ್ಯಾಯ, ಸುಧಾಕರ್ ಚತುರ್ವೇದಿ, ಬಿ.ಎಲ್.ಶರ್ಮಾ ಮತ್ತು ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಸೇರಿದ್ದಾರೆ. ಸಂಘಟನೆಗೆ ರೂಪ ನೀಡಲು ಮತ್ತು ಅದರ ತತ್ವಗಳನ್ನು ಅಭಿವೃದ್ಧಿಪಡಿಸಲು ವಿವಿಧ ಸ್ಥಳಗಳಲ್ಲಿ ಸಭೆಗಳು ನಡೆದವು.

ಇದು ಮತೀಯ ವ್ಯಕ್ತಿಗಳು, ಮಾಜಿ ಸೈನಿಕರು ಮತ್ತು ಸಂಘ ಪರಿವಾರದ ಕಾರ್ಯಕರ್ತರ ಒಂದು ಜ್ವಲನಕಾರೀ ಮಿಶ್ರಣವಾಗಿತ್ತು. ಸ್ವಾಮಿ ಅಮೃತಾನಂದ ದೇವ್ ತೀರ್ಥರು ತಮ್ಮನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ದಲ್ಲಿರುವ ಶ್ರೀ ಶಾರದಾ ಸರ್ವಜ್ಞಪೀಠದ ಶಂಕರಾಚಾರ್ಯ ಎಂದು ಕರೆದುಕೊಳ್ಳುತ್ತಿದ್ದರು. ಅವರ ನೋಂದಾಯಿತ ಕಚೇರಿ ಜಮ್ಮುವಿನಲ್ಲಿತ್ತು ಮತ್ತು ಫರಿದಾಬಾದ್ ಬಳಿ "ಶಿಬಿರ ಕಚೇರಿ" ಇತ್ತು. ಮೇಜರ್ ರಮೇಶ್ ಉಪಾಧ್ಯಾಯ ಅವರು ರಕ್ಷಣಾ ಸೇವೆಗಳ ಮಾಜಿ ಅಧಿಕಾರಿಯಾಗಿದ್ದರು. ಅವರು ಮತ್ತು ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಅವರು ಯುವ ಕಾರ್ಯಕರ್ತರಿಗೆ ಮಿಲಿಟರಿ ತರಬೇತಿ ನೀಡುತ್ತಿದ್ದರು ಮತ್ತು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪುರೋಹಿತ್ ಜುಲೈ–ಆಗಸ್ಟ್ 2008ರಲ್ಲಿ ಮಧ್ಯಪ್ರದೇಶದ ಪಂಚಮರ್ಹಿಗೆ ಸ್ಥಳಾಂತರಗೊಂಡರು. ಅಲ್ಲಿ ಅವರು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ನಿರ್ವಹಿಸಲು ತರಬೇತಿ ಶಿಬಿರಗಳನ್ನು ಆಯೋಜಿಸಿದರು. ಈ ಇಬ್ಬರು ಆರೋಪಿಗಳಲ್ಲದೆ, ಇತರ ಮಾಜಿ ಸೈನಿಕರು ಸಹ 'ಅಭಿನವ ಭಾರತ್'ನಲ್ಲಿ ಭಾಗಿಯಾಗಿದ್ದರು.

"ಪ್ಯಾರಾಚೂಟ್ ರೆಜಿಮೆಂಟ್"ನ ಕರ್ನಲ್ ಆದಿತ್ಯ ಧರ್ ಅವರನ್ನು ಒಂದು ಸಭೆಯಲ್ಲಿ ಪರಿಚಯಿಸಲಾಗುತ್ತದೆ, ಮತ್ತು ಪುರೋಹಿತ್ ಮೇಜರ್ ಪರಾಗ್ ಮೋಡಕ್ ಅವರನ್ನು "ನಮ್ಮ ಅಂತರರಾಷ್ಟ್ರೀಯ ಕಚೇರಿಯ ಉಸ್ತುವಾರಿ" ಎಂದು ಪುರೋಹಿತ್ ಉಲ್ಲೇಖಿಸುತ್ತಾರೆ. 1997 ರವರೆಗೆ ಉಜ್ಜಯಿನಿ ಮತ್ತು ಇಂದೋರ್‌ನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ABVP) ನಾಯಕಿಯಾಗಿದ್ದ, ನಂತರ ಅದರ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರಾಗಿದ್ದ ಪ್ರಜ್ಞಾ ಸಿಂಗ್ ಠಾಕೂರ್ ಅವರು ಪಿತೂರಿಗಾರರಲ್ಲಿ ಸೇರಿದ್ದರು. ನಂತರ, 2019ರಲ್ಲಿ, ಅವರು ಬಿಜೆಪಿ ಅಭ್ಯರ್ಥಿಯಾಗಿ ಭೋಪಾಲ್ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದರು. ಸಮೀರ್ ಕುಲಕರ್ಣಿ ಪೂರ್ಣಾವಧಿ ಆರ್‌ಎಸ್‌ಎಸ್ ಕಾರ್ಯಕರ್ತ (ಪ್ರಚಾರಕ್) ಆಗಿದ್ದರು. 1940ರಿಂದ ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದ ಬಿ.ಎಲ್.ಶರ್ಮಾ ಅವರು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ನಾಯಕರಾಗಿ ರಾಮ ಜನ್ಮಭೂಮಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ನಂತರ 1991 ಮತ್ತು 1996ರಲ್ಲಿ ಪೂರ್ವ ದೆಹಲಿ ಲೋಕಸಭಾ ಸ್ಥಾನವನ್ನು ಗೆದ್ದರು. ಅವರು 1997ರಲ್ಲಿ ತಮ್ಮ ಸಂಸದ ಸ್ಥಾನ ಮತ್ತು ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ

→

ವಿಎಚ್‌ಪಿಯ ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಪ್ರಾರಂಭಿಸಿದರು.

ಹಿಂದೂರಾಷ್ಟ್ರದ ಸಂವಿಧಾನದ ಕುರಿತು ಚರ್ಚೆ

ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಮುಸ್ಲಿಂ ಬಾಹುಳ್ಯದ ಪಟ್ಟಣವಾದ ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟ ನಡೆಸುವ ಸಂಚು 2008ರಲ್ಲಿ ನಾಲ್ಕು ಸಭೆಗಳ ಮೂಲಕ ವಿಕಸನಗೊಂಡಿತು ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ. ಜನವರಿ 25–27, 2008 ರಂದು, ಪುರೋಹಿತ್, ಉಪಾಧ್ಯಾಯ, ಕುಲಕರ್ಣಿ, ಚತುರ್ವೇದಿ ಮತ್ತು ಸ್ವಾಮಿ ಅಮೃತಾನಂದ ಅವರು ಫರಿದಾಬಾದ್ ಬಳಿ ಭೇಟಿಯಾದರು. ಹಿಂದೂ ರಾಷ್ಟ್ರದ ಸಂವಿಧಾನದ ಕುರಿತು ಚರ್ಚೆ ಮತ್ತು ಆ ಗುರಿ ಮುಟ್ಟುವುದು ಅದರ ಪ್ರಮುಖ ಕಾರ್ಯಸೂಚಿಯಾಗಿತ್ತು. ಹಿಂದೂಗಳನ್ನು ಒಗ್ಗೂಡಿಸುವ ಕಾರ್ಯತಂತ್ರಗಳ ಬಗ್ಗೆಯೂ ಇದರಲ್ಲಿ ಚರ್ಚಿಸಲಾಯಿತು.

ಏಪ್ರಿಲ್ 11–12, 2008ರಂದು, ಅದೇ ಜನರು ಭೋಪಾಲ್‌ನಲ್ಲಿ ಪ್ರಜ್ಞಾ ಸಿಂಗ್ ಠಾಕೂರ್ ಅವರನ್ನು ಭೇಟಿಯಾಗಿ ಮಾಲೆಗಾಂವ್‌ನ ಜನನಿಬಿಡ ಪ್ರದೇಶದಲ್ಲಿ ಬಾಂಬ್ ದಾಳಿಮಾಡಲು ಸ್ಥಳವನ್ನು ನಿರ್ಧರಿಸಿದರು. ಸ್ಫೋಟಕಗಳನ್ನು ಜೋಡಿಸುವ ಜವಾಬ್ದಾರಿಯನ್ನು ಪುರೋಹಿತ್ ವಹಿಸಿಕೊಂಡರೆ, ಅವುಗಳನ್ನು ಇಡಲು ಪುರುಷರನ್ನು ನಿಯೋಜಿಸುವುದಾಗಿ ಪ್ರಜ್ಞಾ ಸಿಂಗ್ ಠಾಕೂರ್ ಭರವಸೆ ನೀಡಿದರು. ನಂತರ, ಪ್ರಜ್ಞಾ ಸಿಂಗ್ ಠಾಕೂರ್ ಅವರು, ಮಾಲೆಗಾಂವ್‌ನಲ್ಲಿ ಬಾಂಬ್ ಇಡುವ ಇಬ್ಬರು ವಿಶ್ವಾಸಾರ್ಹ ವ್ಯಕ್ತಿಗಳೆಂದು ಆರ್‌ಎಸ್‌ಎಸ್ ನೊಂದಿಗೆ ಸಂಬಂಧ ಹೊಂದಿದ್ದ ರಾಮಚಂದ್ರ ಕಲಾಸಂಗ್ರ ಮತ್ತು ಸಂದೀಪ್ ಡಾಂಗೆ ಅವರನ್ನು, ಅಮೃತಾನಂದ ದೇವ್ ತೀರ್ಥರಿಗೆ ಪರಿಚಯಿಸಿದರು. ಆಗಸ್ಟ್ 3, 2008ರಂದು, ಉಜ್ಜಯಿನಿಯ ಮಹಾಕಾಳೇಶ್ವರ ದೇವಸ್ಥಾನದ ಧರ್ಮಶಾಲೆಯಲ್ಲಿ ನಡೆದ ಸಭೆಯಲ್ಲಿ, ಕಲಾಸಂಗ್ರ ಮತ್ತು ಡಾಂಗೆಗೆ ಆರ್‌ಡಿಎಕ್ಸ್ ಸಂಗ್ರಹಿಸಿ ನೀಡುವಂತೆ ಪುರೋಹಿತ್ ಅವರನ್ನು ಕೇಳಲಾಯಿತು. ನಂತರ ಪುರೋಹಿತ್, ಪುಣೆಯಲ್ಲಿ ಕಲಾಸಂಗ್ರ ಮತ್ತು ಡಾಂಗೆ 2008ರ ಆಗಸ್ಟ್ 9 ಮತ್ತು 10ರಂದು ಭೇಟಿಯಾದಾಗ ಅವರಿಗೆ ಸ್ಫೋಟಕಗಳನ್ನು ಒದಗಿಸುವಂತೆ ರಾಕೇಶ್ ಧಾವಡೆ ಅವರನ್ನು ಕೇಳಿಕೊಂಡರು. ರಾಕೇಶ್ ಧಾವಡೆ ಸ್ಫೋಟಗಳನ್ನು ಮಾಡುವ ಮತ್ತು ಸುಧಾರಿತ ಸ್ಫೋಟಕ ಸಾಧನಗಳನ್ನು ಜೋಡಿಸುವಲ್ಲಿ ತರಬೇತಿ ಪಡೆದ ಪರಿಣಿತನಾಗಿದ್ದ.

"ನಮ್ಮ ರಾಷ್ಟ್ರಕ್ಕಾಗಿ ಹೋರಾಡಲು ನಾವು ಸಂವಿಧಾನದ ವಿರುದ್ಧ ಹೋರಾಡುತ್ತೇವೆ." "We will fight the Constitution to fight for our Nation." 2008ರ ಗಣರಾಜ್ಯೋತ್ಸವದಂದು ಫರಿದಾಬಾದ್‌ನಲ್ಲಿ ನಡೆದ ಸಭೆಯನ್ನು ಪುರೋಹಿತ್ ಉದ್ಘಾಟಿಸಿದ್ದು ಮಾತಿನೊಂದಿಗೆ. ಆತ ಭಾರತೀಯ ಸಂವಿಧಾನವನ್ನು ಉಲ್ಲೇಖಿಸಿ ಹೇಳಿದ್ದರು. "ನಾವು ಈ ದೇಶವನ್ನು ವೈದಿಕ ಕಾರ್ಯವಿಧಾನಗಳಿಗೆ ಅನುಗುಣವಾಗಿ ಸ್ಥಾಪಿಸಬೇಕು, ನಮಗೆ ಸನಾತನ ಧರ್ಮ, ವೈದಿಕ ಧರ್ಮ ಬೇಕು" ಎಂದು ಅವರು ವಿವರಿಸಿದರು.

ಪುರೋಹಿತ್ ಹಿಂದೂ ರಾಷ್ಟ್ರದ ಕರಡು ಸಂವಿಧಾನವನ್ನು ಸಿದ್ಧಪಡಿಸಿದ್ದರು, ಅದರ ಆಯ್ದ ಭಾಗಗಳನ್ನು ಸಭೆಯ ಮುಂದಿಟ್ಟರು. ಇದು "ಏಕಪಕ್ಷ ಆಳ್ವಿಕೆ" ಮತ್ತು "ಅಧ್ಯಕ್ಷೀಯ ಸ್ವರೂಪದ ಸರ್ಕಾರ"ವನ್ನು ವಿಧಿಸುತ್ತದೆ. ಪುರೋಹಿತ್ ವಿವರಿಸಿದಂತೆ ಭಿನ್ನಾಭಿಪ್ರಾಯಕ್ಕೆ ಕಡಿಮೆ ಅವಕಾಶವಿರುತ್ತದೆ: "ಬಹಳ ಮುಖ್ಯವಾದ ಅಂಶ: ಹಿಂದೂ ರಾಷ್ಟ್ರಕ್ಕೆ ಹಾನಿಕಾರಕವಾದ ಆಲೋಚನೆಗಳನ್ನು ಹೊಂದಿರುವ ಜನರ ರಾಜಕೀಯ ಬಹಿಷ್ಕಾರ... ಅವರಲ್ಲಿ ಕೆಲವರನ್ನು ಕೊಲ್ಲಬೇಕು."

ದೊಡ್ಡ ಗುರಿ–ವಿಲಕ್ಷಣ ಕಾರ್ಯಯೋಜನೆ

ಈ ಗುರಿಯನ್ನು ಸಾಧಿಸುವುದು ಹೇಗೆ? ಮೊದಲ ಹೆಜ್ಜೆ ಎಲ್ಲ ಹಿಂದುಗಳನ್ನು ಒಗ್ಗೂಡಿಸುವುದು ಎಂದು ಸೂಚಿಸಲಾಯಿತು. ಮುಸ್ಲಿಮರನ್ನು ಭಯಭೀತಗೊಳಿಸುವುದರಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಏಕೆಂದರೆ ಅದು ಅವರನ್ನು ಒಂದಾಗುವಂತೆ ಒತ್ತಾಯಿಸುತ್ತದೆ ಮತ್ತು ಅಂತಿಮ ಯುದ್ಧಕ್ಕೆ ಕಾರಣವಾಗುತ್ತದೆ. ಇದರಲ್ಲಿ ಹಿಂದೂಗಳು ಖಂಡಿತವಾಗಿಯೂ ಗೆಲ್ಲುತ್ತಾರೆ "ಮುಸ್ಲಿಮರು ಒಗ್ಗೂಡುವ ದಿನವೇ ನಮ್ಮ ಅತಿ ದೊಡ್ಡ ಗೆಲುವು. ಅವರ ಮೇಲೆ ದಾಳಿಮಾಡಲು ಪ್ರಾರಂಭಿಸುವುದು ಮತ್ತು ಇಮಾಮ್ ಬುಖಾರಿ ಸಮುದಾಯದ ಪರವಾಗಿ ನಿಲ್ಲಲಿ. ನಾನು ಮಹಾರಾಷ್ಟ್ರದಲ್ಲಿ ಅನ್ಯಾಯವನ್ನು ಸಹಿಸುವುದಿಲ್ಲ ಎಂದು ಆತ ಹೇಳಬೇಕು, ಅವರು ಒಂದಾಗಲಿ, ಒಟ್ಟಾಗಿ ಕೂಗಲು ಪ್ರಾರಂಭಿಸಲಿ... ನಾವು ನಮ್ಮ ವಿರುದ್ಧ ಇಸ್ಲಾಂ, ಕ್ರಿಶ್ಚಿಯನ್ನರು ಮತ್ತು ಮಾವೋವಾದಿಗಳು ನಮ್ಮ ವಿರುದ್ಧ ಒಂದುಗೂಡುವುದಕ್ಕಾಗಿ ಕೆಲಸ ಮಾಡುತ್ತಿದ್ದೇವೆ" ಎಂದು ಅವರು ಫರೀದಾಬಾದ್ ಸಭೆಯಲ್ಲಿ ಹೇಳುತ್ತಾರೆ.

ಆರಂಭದಲ್ಲಿ, ಅಭಿನವ ಭಾರತ್ "ಇದ್ದಕ್ಕಿದ್ದಂತೆ ಎಲ್ಲಿಂದಲೋ ಪ್ರತ್ಯಕ್ಷಗೊಂಡ ಕೊಂಡ ಪ್ರೇತದಂತಹ ಸಂಘಟನೆಯಾಗಬೇಕು" ಎನ್ನುತ್ತಾರೆ ಪುರೋಹಿತ್. ಸ್ಫೋಟದ ನಂತರ ಸ್ಫೋಟಗಳ ಮೂಲಕ ಮುಸ್ಲಿಮರ ಮೇಲೆ ದಾಳಿ ಮಾಡಿ, ಆ ದಾಳಿಗಳಿಗೆ ಹೊಣೆಗಾರಿಕೆಯನ್ನು ವಹಿಸಿಕೊಳ್ಳದಿರುವ ಮೂಲಕ ಅದು "ಉಪದ್ರವ ಮೌಲ್ಯ"ವನ್ನು ಗಳಿಸುತ್ತದೆ. ಅಂತಿಮವಾಗಿ, ಈ "ಉಪದ್ರವ ಮೌಲ್ಯ" ಅದಕ್ಕೆ ಸ್ವಲ್ಪ ಚೌಕಾಸಿಮಾಡುವ ಶಕ್ತಿಯನ್ನು ನೀಡಬೇಕು,. ಎಷ್ಟೆಂದರೆ, ರಾಜಕೀಯ ಪ್ರಕ್ರಿಯೆಯನ್ನು ಅದು ಸೇರಿಕೊಳ್ಳಲು ಸಾಧ್ಯವಾಗಬೇಕು, ವಿಹೆಚ್‌ಪಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ತಮ್ಮನ್ನು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸಿಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ, ಇದು ಇಸ್ಲಾಮಿಕ್ ಭಯೋತ್ಪಾದಕ ಚಟುವಟಿಕೆಗಳಿಗೆ ಸೇಡು ತೀರಿಸಿಕೊಳ್ಳುವುದಕ್ಕಷ್ಟೇ ಈ ಮಂದಿ ಒಟ್ಟಾಗಿ ಕಾರ್ಯಾಚರಣೆ ನಡೆಸುತ್ತಿರಲಿಲ್ಲ. ಅವರ ಕಾರ್ಯತಂತ್ರದ ಗುರಿ ಇನ್ನೂ ದೊಡ್ಡದಾಗಿತ್ತು. ನಿಜ, ಕಾರ್ಯಯೋಜನೆ ವಿಲಕ್ಷಣ ಎಂದೇ ಹೇಳಬಹುದು.

ಫರಿದಾಬಾದ್‌ನಲ್ಲಿ, ಅಭಿನವ್ ಭಾರತ್ ಈಗಾಗಲೇ ಎರಡು ಸ್ಫೋಟಗಳನ್ನು ನಡೆಸಿದೆ ಎಂದು ಪುರೋಹಿತ್ ಹೇಳಿಕೊಂಡರು. ಅವುಗಳಲ್ಲಿ ಒಂದು ಹೈದರಾಬಾದ್‌ನ ಮೆಕ್ಕಾ ಮಸೀದಿ ಸ್ಫೋಟ ಎಂದು ಜನವರಿ 25, 2008ರಂದು ಸ್ವಾಮಿ ಅಮೃತಾನಂದ ಮತ್ತು ಮೇಜರ್ ಉಪಾಧ್ಯಾಯ ಅವರ ನಡುವಿನ ಖಾಸಗಿ ಸಂಭಾಷಣೆಯಿಂದ ಊಹಿಸಬಹುದು. "ಐಎಸ್‌ಐ (ಇಂಟರ್–ಸರ್ವೀಸಸ್ ಇಂಟೆಲಿಜೆನ್ಸ್) ಅಥವಾ ಬೇರಾವುದೇ ಸಂಸ್ಥೆ ಇದರಲ್ಲಿ ಭಾಗಿಯಾಗಿರಲಿಲ್ಲ. ಅದು ನಮ್ಮವರಲ್ಲಿ ಒಬ್ಬರ ಕೆಲಸವಾಗಿತ್ತು. ನನಗೆ ತಿಳಿದಿರುವುದರ ಆಧಾರದ ಮೇಲೆ ಇದನ್ನು ಹೇಳಬಲ್ಲೆ. ಇದನ್ನು ಕರ್ತವ್ಯದ ಹೆಸರಿನಲ್ಲಿ ಮಾಡಲಾಗಿದೆ" ಎಂದು ಉಪಾಧ್ಯಾಯ ಹೇಳುತ್ತಾರೆ. ಇನ್ನೊಂದು ದಾಳಿ ನಾಂದೇಡ್ ಅಥವಾ ಪರ್ಭಾನಿ ಅಥವಾ ಜಾಲ್ನಾದಲ್ಲಿ ನಡೆದಿರಬಹುದು. ಇವು ಮಾಲೇಗಾಂವ್ ಪ್ರಕರಣದ ಆರೋಪಿಗಳಲ್ಲಿ ಒಬ್ಬನಾದ ರಾಕೇಶ್ ಧಾವಡೆ ಭಾಗಿಯಾಗಿದ್ದ ಎರಡು ಬಾಂಬ್ ದಾಳಿಗಳಲ್ಲಿ ಒಂದು.

ಈ ಸಂಘಟನೆಗೆ ಹಣಕಾಸಿನ ಕೊರತೆ ಇರಲಿಲ್ಲ. ಪುರೋಹಿತ್ ತನ್ನ ಯೋಜನೆಗಳನ್ನು ಉತ್ತೇಜಿಸಲು "ತನಗಾಗಿ ಮತ್ತು ತನ್ನ ಅಭಿನವ್ ಭಾರತ್ ಸಂಘಟನೆಗಾಗಿ 21,00,000 ರೂ.ಗಳಷ್ಟು" ಗಣನೀಯ ಮೊತ್ತವನ್ನು ಸಂಗ್ರಹಿಸಿದ್ದರು ಎಂದು ಮಾಲೆಗಾಂವ್ ಎಫ್‌ಐಆರ್ ಹೇಳುತ್ತದೆ.

ಬೆಂಬಲಕ್ಕಾಗಿ ಇಸ್ರೇಲ್, ನೇಪಾಲ್ ಸಂಪರ್ಕ

ಹಿಂದೂಗಳನ್ನು ಅಧಿಕೃತ ಮಾನ್ಯತೆಯನ್ನು ಹುಡುಕುತ್ತಿರುವ ಒಂದು ರಾಷ್ಟ್ರೀಯತೆ ಎಂದು ಪರಿಗಣಿಸಬಹುದು, ಇದನ್ನು ವಿಶ್ವಸಂಸ್ಥೆಯಿಂದ ಪಡೆಯಬಹುದು ಎಂದು ಫರಿದಾಬಾದ್ ಸಭೆಯಲ್ಲಿ ಪುರೋಹಿತ್ ವಿವರಿಸುತ್ತಾರೆ. "ದೇಶದ ಹೊರಗಿರುವ ಒಂದು ಕೇಂದ್ರೀಯ ಹಿಂದೂ ಸರ್ಕಾರ"ವನ್ನು ರಚಿಸಿಕೊಂಡು, ತಮ್ಮ ಗುರಿಯನ್ನು, ಪ್ರತಿಪಾದಿಸಲು ಕಾಶ್ಮೀರಿಗಳು (ಎಪಿಐಈ ಮತ್ತು ಹುರಿಯತ್) ಮಾಡಲು ಪ್ರಯತ್ನಿಸಿದಂತೆಯೇ ವಿಶ್ವಸಂಸ್ಥೆಯನ್ನು ಜಾಗತಿಕ ವೇದಿಕೆಯಾಗಿ ಬಳಸಬೇಕೆಂಬುದು ಅವರ ಬಯಕೆ.

ಚರ್ಚಿಸಲಾದ ಮತ್ತೊಂದು ನಾಗರಿಕತೆಗೆ ಸಂಬಂಧಪಟ್ಟ ಕನಸು ಎಂದರೆ, "ಇಸ್ಲಾಮಿಕ್ ಮತ್ತು ಕ್ರಿಶ್ಚಿಯನ್ ಅತಿಕ್ರಮಣಗಳ" ವಿರುದ್ಧ ಹೋರಾಡಲು" ಹಿಂದೂ ಮತ್ತು ಬೌದ್ಧ ರಾಷ್ಟ್ರಗಳ ಒಕ್ಕೂಟ. ಪುರೋಹಿತ್ ಭವಿಷ್ಯದಲ್ಲಿ "ಹಿಂದೂ ಮತ್ತು ಪ್ರಾಚ್ಯ ರಾಷ್ಟ್ರಗಳ ಒಕ್ಕೂಟ" ("Hindu and Oriental Nations Union")ಎಂದು ಅವರೇ ಹೆಸರಿಸಿದ ಒಂದು ರಾಜಕೀಯ ಒಕ್ಕೂಟವನ್ನು ಕಾಣುತ್ತಾರೆ. ಇದು ಅವರ ಪ್ರಕಾರ "ಕಾಂಬೋಡಿಯಾ, ಥೈಲ್ಯಾಂಡ್, ಭಾರತ, ನೇಪಾಳ, ಭೂತಾನ್, ಜಪಾನ್, ಕೊರಿಯಾ" ಗಳನ್ನು ಒಳಗೊಂಡಿರುತ್ತದೆ.

ಆದರೆ ಈ ಎಲ್ಲ ಭವ್ಯ ಮಹತ್ವಾಕಾಂಕ್ಷೆಯ ಸಂಗತಿಗಳ ಜೊತೆಗೆ, ತಕ್ಷಣದ ಭೌತಿಕ ಬೆಂಬಲಕ್ಕಾಗಿ ವಿದೇಶಿ ಪ್ರಾಯೋಜಕರ ಅಗತ್ಯವಿತ್ತು. ಅದಾಗಲೇ ಇಸ್ರೇಲ್ ಮತ್ತು ನೇಪಾಳದ ವ್ಯಕ್ತಿಗಳನ್ನು ಸಂಪರ್ಕಿಸಲಾಗಿದೆ ಮತ್ತು ಬೆಂಬಲವನ್ನು ಪಡೆದುಕೊಳ್ಳಲಾಗಿದೆ ಎಂದು ಫರಿದಾಬಾದ್ ಸಭೆಯಲ್ಲಿ ಪುರೋಹಿತ್ ವರದಿ ಮಾಡಿದರು. "ನಾನು ಇಸ್ರೇಲ್‌ನಲ್ಲಿ ಸಂಪರ್ಕಗಳನ್ನು ಪಡೆದಿದ್ದೇನೆ. ನಮ್ಮ 'ಕ್ಯಾಪ್ಟನ್'ಗಳಲ್ಲಿ ಒಬ್ಬರು ಈಗಾಗಲೇ ಹೋಗಿ, ಅಲ್ಲಿಂದ ಹಿಂತಿರುಗಿದ್ದಾರೆ. ಅವರ ಕಡೆಯಿಂದ ನಮಗೆ ತುಂಬಾ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿತು. ಅವರು ನಮಗೆ, 'ನೀವು ಬುಡಮಟ್ಟದಲ್ಲಿ ನಮಗೆ ಏನನ್ನಾದರೂ ತೋರಿಸಬೇಕು" ಎಂದು ಹೇಳಿದರು.

"ಅವರಿಂದ (ಇಸ್ರೇಲಿಗಳು) ನಾಲ್ಕು ಬೇಡಿಕೆಗಳನ್ನು" ಇಟ್ಟಿರುವುದಾಗಿ ಅವರು ಹೇಳಿದರು: 1) ಸಲಕರಣೆಗಳ ನಿರಂತರ ಪೂರೈಕೆ ಮತ್ತು ತರಬೇತಿ. ii) ಟೆಲ್ ಅವೀವ್‌ನಲ್ಲಿ ಕೇಸರಿ ಧ್ವಜದೊಂದಿಗೆ ಕಚೇರಿಯನ್ನು ಪ್ರಾರಂಭಿಸಲು ಅನುಮತಿ. iii) ರಾಜಕೀಯ ಆಶ್ರಯ. iv) "ಹಿಂದೂ ರಾಷ್ಟ್ರ ಹುಟ್ಟಿದೆ ಎಂಬ ನಮ್ಮ ಗುರಿಗೆ ವಿಶ್ವಸಂಸ್ಥೆಯಲ್ಲಿ ಬೆಂಬಲ"

ಪುರೋಹಿತ್ ಪ್ರಕಾರ, ಇಸ್ರೇಲಿಗಳು "ಒಮ್ಮೆ ನಾವು ಬುಡಮಟ್ಟದಲ್ಲಿ ಏನನ್ನಾದರೂ ಮಾಡಿ ತೋರಿಸಿದರೆ" ರಾಜಕೀಯ ಆಶ್ರಯ, ಉಪಕರಣಗಳು ಮತ್ತು ತರಬೇತಿಗೆ ಒಪ್ಪಿಕೊಂಡರು. ಆದರೆ, ಟೆಲ್ ಅವೀವ್‌ನಲ್ಲಿ ಕೇಸರಿ ಧ್ವಜ ಹಾರಿಸುವ ಮತ್ತು ವಿಶ್ವಸಂಸ್ಥೆಯಲ್ಲಿ ಹಿಂದೂ ರಾಷ್ಟ್ರವನ್ನು ಬೆಂಬಲಿಸುವ ವಿಚಾರದಲ್ಲಿ ಇಸ್ರೇಲಿಗಳು ಸಹ ಹಿಂದೇಟು ಹಾಕಿದಂತೆ ತೋರುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದೊಂದಿಗೆ ಇಸ್ರೇಲ್ ಸಂಬಂಧ ಉತ್ತಮಗೊಳ್ಳು ಪ್ರಾರಂಭಿಸಿದ್ದರಿಂದ, ಅದನ್ನು ಅಪಾಯಕ್ಕೆ ಸಿಲುಕಿಸಲು ಅವರು ಬಯಸದ ಕಾರಣ ಈ ವಿಷಯಗಳಲ್ಲಿ ಇಸ್ರೇಲಿಗಳು ಹಿಂಜರಿಯುತ್ತಿದ್ದರು ಎಂದು ಪುರೋಹಿತ್ ಹೇಳುತ್ತಾರೆ.

ನೇಪಾಳದಲ್ಲಿ, ಅಭಿನವ್ ಭಾರತ್ ಗುಂಪು ಕೆಲವು ರಾಜಪ್ರಭುತ್ವವಾದಿ ಗುಂಪುಗಳೊಂದಿಗೆ ಸಂಪರ್ಕದಲ್ಲಿತ್ತು, ಇತ್ತೀಚೆಗೆ ಈ ಗುಂಪುಗಳನ್ನು ಭಯೋತ್ಪಾದಕ ಗುಂಪುಗಳೆಂದು ಘೋಷಿಸಲಾಗಿತ್ತು ಎಂದು ಡಾ. ಆರ್.ಪಿ.ಸಿಂಗ್ ಸಭೆಯೊಂದರಲ್ಲಿ ಮಾತನಾಡುತ್ತಾ ಹೇಳಿದರು. ಪ್ರತಿ ಆರು ತಿಂಗಳಿಗೊಮ್ಮೆ ಭಾರತದಿಂದ 200 ಮಂದಿಗೆ ನೇಪಾಳಿ ಪಡೆಗಳು ಸೈನಿಕರಾಗಿ ತರಬೇತಿ ನೀಡುತ್ತದೆ ಎಂದು ಪುರೋಹಿತ್ ಹೇಳಿಕೊಂಡರು. "ಜೆಕೊಸ್ಲೊವಾಕಿಯಾದ AKS" ಖರೀದಿಸಬೇಕು ಎಂದು ನೇಪಾಳಿ ಜನರಿಗೆ ತಾನು ಹೇಳಿರುವುದಾಗಿ ಮತ್ತು ಅದಕ್ಕೆ "ನಾವು ಹಣವನ್ನು ಪಾವತಿಸುತ್ತೇವೆ" ಎಂದೂ ಪುರೋಹಿತ್ ಹೇಳಿಕೊಂಡಿದ್ದಾರೆ.

ಆರೆಸ್ಸೆಸ್ ಮತ್ತು ಬಿಜೆಪಿಯ ಬಗ್ಗೆ ಹತಾಶೆ

ಹಿಂದೂ ರಾಷ್ಟ್ರವನ್ನು ಸಾಕಾರಗೊಳಿಸುವ ಧಾವಂತವನ್ನು ಆರ್‌ಎಸ್‌ಎಸ್/ ಬಿಜೆಪಿ ನಿಧಾನಗೊಳಿಸುತ್ತಿವೆ ಎಂಬ ಹತಾಶೆ ಮತ್ತೆ–ಮತ್ತೆ ವ್ಯಕ್ತಗೊಂಡಿರುವುದನ್ನು ಸಭೆಯ ದಾಖಲೆಗಳು ತೋರಿಸುತ್ತವೆ. ಫರಿದಾಬಾದ್ ಸಭೆಯಲ್ಲಿ ಬಿ.ಎಲ್.ಶರ್ಮಾ ಕಟುವಾಗಿ ಹೀಗೆ ವ್ಯಕ್ತಪಡಿಸಿದರು: "ಜನವರಿ 26ರಂದು ನಾನು ಸುಮಾರು ಮೂರು ಲಕ್ಷ ಪತ್ರಗಳನ್ನು ಕಳುಹಿಸಿದ್ದೇನೆ, 20,000 ಅಖಂಡ ಭಾರತದ ನಕ್ಷೆಗಳನ್ನು ವಿತರಿಸಿದ್ದೇನೆ, ಅದಾಗಿ ಒಂದು ವರ್ಷವಾಗಿದೆ. ಆದರೆ ಈ ಬ್ರಾಹ್ಮಣರು ಮತ್ತು ಬನಿಯಾಗಳು ಎಂದೂ ಏನನ್ನೂ ಮಾಡಿಲ್ಲ ಮತ್ತು ಮಾಡುವುದೂ ಇಲ್ಲ... ಅಂತಿಮವಾಗಿ ಅವರು ಕಾರ್ಯಸಾಧ್ಯವಾದ ಕೆಲಸಗಳನ್ನು ಮಾಡುತ್ತಾರೆ. ಒಬ್ಬ ಚಾಣಕ್ಯ ಬರುತ್ತಾನೆ, ಮೆದು ಆಡಳಿತಗಾರನಾಗುತ್ತಾನೆ... ಸಮಾಜದಲ್ಲಿ ಬೆಂಕಿ ಹಚ್ಚಬೇಕು, ಕನಿಷ್ಠ ಒಂದು ಕಿಡಿಯನ್ನಾದರೂ ಹಚ್ಚಬೇಕು ಎಂದು ನಾನು ನಂಬುತ್ತೇನೆ."

ಈ ಭಾವನೆಯೇ ಅನೇಕ ಸಂಘ ಪರಿವಾರದ ಕಾರ್ಯಕರ್ತರು ಅಭಿನವ ಭಾರತ್ ಮಾದರಿಯ ಗುಂಪುಗಳೊಂದಿಗೆ ಸೇರಲು ಕಾರಣವಾಯಿತು. ಸ್ವಾಮಿ ಅಸೀಮಾನಂದ ಅವರ ತಪ್ಪೊಪ್ಪಿಗೆ (ಸಿಆರ್‌ಪಿಸಿಯ ಸೆಕ್ಷನ್ 164ರ ಅಡಿಯಲ್ಲಿ ಮಾಡಿದ್ದು) ಅಂತಹ ವ್ಯಕ್ತಿಗಳ ಹಲವಾರು ಹೆಸರುಗಳನ್ನು ಸೂಚಿಸುತ್ತದೆ.

ಆದರೆ ಅದು ಆಗ, 2000ರ ದಶಕದ ಆರಂಭದಲ್ಲಿ. ಮೋದಿ ಅಧಿಕಾರಕ್ಕೆ ಬಂದ ನಂತರ 2014ರಿಂದ ಏನಾಗುತ್ತಿದೆ? ಮೇಲೆ ವಿವರಿಸಿದ ಪ್ರಕರಣದ ದಾಖಲೆಗಳಲ್ಲಿ ವಿಭಿನ್ನ ಸಂಚುಕೋರರು ಪ್ರತಿಪಾದಿಸುವ ಆಲೋಚನೆಗಳು ಮತ್ತು ಆಕಾಂಕ್ಷೆಗಳು ಒಟ್ಟಾರೆಯಾಗಿ ಇಂದು ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಅಧಿಕಾರದಲ್ಲಿರುವ ಹೆಚ್ಚಿನವರ ಚಿಂತನೆಗಳ ಅವಿಭಾಜ್ಯ ಅಂಗವಾಗಿದೆ. ಅವುಗಳಲ್ಲಿ ಕೆಲವನ್ನು ಸರಕಾರೀ ಕ್ರಿಯೆಗಳ ಮೂಲಕ ವಾಸ್ತವಗೊಳಿಸಲಾಗುತ್ತಿದೆ– ಮುಖ್ಯವಾಗಿ, ಸಂವಿಧಾನದ ಮೂರು ಸ್ತಂಭಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವವನ್ನು ನಿಧಾನವಾಗಿ ಮತ್ತು ಸತತವಾಗಿ ಕಳಚಿ ಹಾಕಲಾಗುತ್ತಿದೆ. 'ಹಿಂದೂಗಳನ್ನು ಜಾಗೃತಗೊಳಿಸುವ' ಗುರಿಗೆ ಸಂಬಂಧಿಸಿದಂತೆ, ಸರ್ಕಾರವು ಆರೆಸ್ಸೆಸ್ ನಂತಹ ಸರ್ಕಾರೇತರ ಶಕ್ತಿಗಳೊಂದಿಗೆ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತಿದೆ. ಪ್ರಧಾನಿ ಮೋದಿ ಅಯೋಧ್ಯೆ ದೇವಾಲಯವನ್ನು ಉದ್ಘಾಟಿಸುತ್ತಾರೆ, ಅತ್ತ ಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್ ಹಿಂದೂ ಭಾರತದ ಭೂತಕಾಲದ ವೈಭವದ ಗುಣಗಾನ ಮಾಡುತ್ತಾರೆ. ಶ್ಲಾಘಿಸುತ್ತಾರೆ.

ಆದರೆ ಹೆಚ್ಚು ನೇರವಾದ, ಅಭಿನವ್ ಭಾರತ್ ಸಂಚುಕೋರರು ಕಂಡರಿಸಿದ್ದ ರೀತಿಯ ಕಾರ್ಯಾಚರಣೆಗಳನ್ನು ಈಗ, ಮತಾಂಧ ಹಿಂದೂ ಸರ್ವೋಚ್ಚವಾದಿ ಸಿದ್ಧಾಂತಕ್ಕೆ ಬದ್ಧವಾಗಿರುವ ಹತ್ತಾರು ಸಂಘಟನೆಗಳಿಗೆ ಹೊರಗುತ್ತಿಗೆ ನೀಡಲಾಗಿದೆ. ಅವರು ದೊಂಬಿಹತ್ಯೆಗಳನ್ನು ಪ್ರಚೋದಿಸುತ್ತಾರೆ, ಗೋಮಾಂಸ ಭಕ್ಷಕರೆಂದು ಆರೋಪಿಸಿ ಕೊಲ್ಲುತ್ತಾರೆ, ಮಸೀದಿಗಳು ಮತ್ತು ಚರ್ಚ್‌ಗಳ ವಿರುದ್ಧ ಹಿಂಸಾಚಾರವನ್ನು ಪ್ರಚೋದಿಸುತ್ತಾರೆ, ವಿಚಾರವಾದಿ ಚಿಂತಕರನ್ನು ಕೊಲೆ ನಡೆಸುತ್ತಾರೆ, ಶತ್ರುಗಳೆಂದು ಅವರ ವಿರುದ್ಧ ಯುದ್ಧಕೋರ ಉನ್ಮಾದವನ್ನು ಪ್ರಚೋದಿಸುತ್ತಾರೆ, ನುಸುಳುಕೋರರು ಎಂದು ಬೇಟೆಯಾಡುತ್ತಾರೆ ಮತ್ತು ದುರ್ಬಲ ಅಲ್ಪಸಂಖ್ಯಾತ ಸಮುದಾಯದ ಜನರ ವಿರುದ್ಧ ಬಹಿಷ್ಕಾರ ಮತ್ತು ಹಿಂಸಾಚಾರಕ್ಕೆ ಕರೆ ನೀಡುತ್ತಾರೆ. ಕಾನೂನು ಜಾರಿ ಸಂಸ್ಥೆಗಳಿಂದ ಅಪರಾಧಿಗಳು ಸಿಕ್ಕಿಬಿದ್ದರೆ, ಅಂತಹ ಪ್ರಕರಣಗಳು ಬಿದ್ದುಹೋಗುತ್ತವೆ ಅಥವಾ ಅವರು ಖುಲಾಸೆಗೊಳ್ಳುತ್ತಾರೆ. ಬಿಲ್ಕಿಸ್ ಬಾನೋ ಪ್ರಕರಣದಂಲ್ಲಾದಂತೆ ಘೋರ ಅಪರಾಧಗಳಿಗಾಗಿ ಶಿಕ್ಷೆಗೊಳಗಾದವರಿಗೆ ಮಾಫಿ ಸಿಗುತ್ತಿದೆ. ಇಂದು ನಾವು ನೋಡುತ್ತಿರುವ ಈ ವಿಷವೃಕ್ಷದ ಬೀಜಗಳನ್ನು ಮಾಲೆಗಾಂವ್ ಪಿತೂರಿಗಾರರ ಆಲೋಚನೆಗಳಲ್ಲಿ ಕಾಣಬಹುದು.

ಪೀಪಲ್ ಡೆಮಾಕ್ರಸಿ ಲೇಖನ

(ಕನ್ನಡಕ್ಕೆ: ಸಿಚಿ)

ಉಪರಾಷ್ಟ್ರಪತಿ ಚುನಾವಣೆ: ನ್ಯಾಯಮೂರ್ತಿ ಸುದರ್ಶನ ರೆಡ್ಡಿಯವರ ಪರವಾಗಿ ಮತನೀಡಲು ಎಡಪಕ್ಷಗಳ ಮನವಿ

ಐದು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಲಿಬರೇಶನ್, ಆರ್‌ಎಸ್‌ಪಿ ಮತ್ತು ಎಐಎಫ್‌ಬಿ ಉಪರಾಷ್ಟ್ರಪತಿ ಚುನಾವಣೆಯ ಕುರಿತು ಒಂದು ಜಂಟಿ ಮನವಿಯನ್ನು ಪ್ರಕಟಿಸಿವೆ.

ಎಡ ಪಕ್ಷಗಳು, ಎಲ್ಲಾ ವಿರೋಧ ಪಕ್ಷಗಳ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ನಿವೃತ್ತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರ ಉಮೇದುವಾರಿಕೆಯನ್ನು ಅನುಮೋದಿಸುತ್ತೇವೆ ಎಂದಿರುವ ಹೇಳಿಕೆಯು, ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಒಬ್ಬ ಪ್ರಖ್ಯಾತ ನ್ಯಾಯಶಾಸ್ತ್ರಜ್ಞರಾಗಿದ್ದು, ಭಾರತೀಯ ಸಂವಿಧಾನದ ಮೂಲ ಮೌಲ್ಯಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾನತೆಗೆ ತಮ್ಮ ಅಚಲ ಬದ್ಧತೆಗಾಗಿ ವ್ಯಾಪಕವಾಗಿ ಗೌರವಿಸಲ್ಪಟ್ಟಿದ್ದಾರೆ ಎಂದು ಹೇಳಿದೆ.

ಉಪರಾಷ್ಟ್ರಪತಿ ಚುನಾವಣೆಯು ಕೇವಲ ಸಂಖ್ಯೆಗಳ ಬಗ್ಗೆ ಅಲ್ಲ. ಇದು ಭಾರತದ ಭವಿಷ್ಯದ ಬಗ್ಗೆ ಎರಡು ಮೂಲಭೂತವಾಗಿ ಭಿನ್ನವಾದ ದೃಷ್ಟಿಕೋನಗಳ ನಡುವಿನ ಸ್ಪರ್ಧೆಯನ್ನು ಪ್ರತಿನಿಧಿಸುತ್ತದೆ. ಇದು ನಮ್ಮ ರಾಷ್ಟ್ರವು ಜಾತ್ಯತೀತತೆಯನ್ನು ಎತ್ತಿಹಿಡಿಯುವ ಸಾಂವಿಧಾನಿಕ ಪ್ರಜಾಪ್ರಭುತ್ವವಾಗಿ ಮುಂದುವರಿಯಬೇಕೋ ಅಥವಾ ಹಿಂದುತ್ವ ಸರ್ವಾಧಿಕಾರಿ ಪ್ರಭುತ್ವದ ಮಟ್ಟಕ್ಕೆ ಕುಗ್ಗಬೇಕೋ ಎನ್ನುವುದರ ನಡುವಿನ ಸ್ಪರ್ಧೆಯಾಗಿದೆ. ಇದು ನಮ್ಮ ಸಮ್ಮಿಶ್ರ ಸಂಸ್ಕೃತಿಯನ್ನು ಕಾಪಾಡಲು ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಉಪರಾಷ್ಟ್ರಪತಿಗಳು, ಚುನಾವಣಾ ಆಯೋಗ ಮತ್ತು ರಾಜ್ಯಪಾಲರು ಮುಂತಾದ ಸಾಂವಿಧಾನಿಕ ಹುದ್ದೆಗಳನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ಮತ್ತು ಸರ್ವಾಧಿಕಾರವನ್ನು ಜಾರಿಗೊಳಿಸಲು ನಡೆಸುತ್ತಿರುವ ನಿರಂತರ ಪ್ರಯತ್ನಗಳನ್ನು ಪ್ರತಿರೋಧಿಸಲು ನಡೆಸುವ ಒಂದು ಸಮರವಾಗಿದೆ.

ಉಪರಾಷ್ಟ್ರಪತಿಯನ್ನು ಚುನಾಯಿಸುವ ಎಲ್ಲಾ ಮತದಾರರು ರಾಷ್ಟ್ರದ ಹಿತಾಸಕ್ತಿಗಳನ್ನು ಎಲ್ಲಕ್ಕಿಂತ ಮೇಲಿಡಲು, ಸಂವಿಧಾನವನ್ನು ರಕ್ಷಿಸುವುದಾಗಿ ತಾವು ತೆಗೆದುಕೊಂಡ ಪ್ರಮಾಣವಚನವನ್ನು ನೆನಪಿಸಿಕೊಳ್ಳಲು ಮತ್ತು ನ್ಯಾಯಮೂರ್ತಿ ಸುದರ್ಶನ್ ರೆಡ್ಡಿಯವರ ಪರವಾಗಿ ತಮ್ಮ ಮತವನ್ನು ಚಲಾಯಿಸಲು ತಾವು ಮನವಿ ಮಾಡುವುದಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ, ಸಿಪಿಐ(ಎಂಎಲ್) ಲಿಬರೇಷನ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ಮತ್ತು ಎಐಎಫ್‌ಬಿ ಪ್ರಧಾನ ಕಾರ್ಯದರ್ಶಿ ಜಿ.ದೇವರಾಜನ್ ಈ ಜಂಟಿ ಹೇಳಿಕೆಯಲ್ಲಿ ಹೇಳಿದ್ದಾರೆ.

ಕಾಮ್ರೇಡ್ ಸುರವರಂ ಸುಧಾಕರ ರೆಡ್ಡಿ ಅವರಿಗೆ ನಮನ

ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ)ದ ಹಿಂದಿನ ಪ್ರಧಾನ ಕಾರ್ಯದರ್ಶಿ ಎಸ್.ಸುಧಾಕರ ರೆಡ್ಡಿಯವರು ಆಗಸ್ಟ್ 22ರಂದು ನಿಧನರಾಗಿದ್ದಾರೆ. ಅವರಿಗೆ ನಮನಗಳನ್ನು ಸಲ್ಲಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಕಾಮ್ರೇಡ್ ಸುರವರಂ ಸುಧಾಕರ ರೆಡ್ಡಿ ಅವರ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಪೊಲಿಟ್‌ಬ್ಯುರೊ ತೀವ್ರ ದುಃಖ ವ್ಯಕ್ತಪಡಿಸುತ್ತದೆ. ತಮ್ಮ ಜೀವನಪರ್ಯಂತ ಕಾರ್ಮಿಕ ವರ್ಗ ಮತ್ತು ದಮನಿತರ ಹಿತಾಸಕ್ತಿಗಳ ಪ್ರತಿಪಾದಕರಾಗಿದ್ದ ಸುಧಾಕರ ರೆಡ್ಡಿ ನ್ಯಾಯ, ಸಮಾನತೆ ಮತ್ತು ಸಮಾಜವಾದದ ಆದರ್ಶಗಳಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು.

ಕರ್ನೂಲ್ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ನಾಯಕರಾಗಿದ್ದಾಗಲೇ ಸಕ್ರಿಯ ಚಟುವಟಿಕೆಗಳಲ್ಲಿ ತೊಡಗುವುದರಿಂದ ಆರಂಭಿಸಿ, ಐತಿಹಾಸಿಕ ಯುವ ಮತ್ತು ವಿದ್ಯಾರ್ಥಿ ಹೋರಾಟಗಳಲ್ಲಿ ಎಐಎಸ್‌ಎಫ್ ಮತ್ತು ಎಐವೈಎಫ್‌ಗೆ ನೇತೃತ್ವ ನೀಡುವವರೆಗೆ, ಅವರು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಸಾಮಾಜಿಕ ಪರಿವರ್ತನೆಗೆ ತಮ್ಮ ಅಚಲ ಬದ್ಧತೆಯನ್ನು ಪ್ರದರ್ಶಿಸಿದರು.

ನಲ್ಗೊಂಡದಿಂದ ಎರಡು ಬಾರಿ ಸಂಸತ್ ಸದಸ್ಯರಾಗಿ, ಕಾಮ್ರೇಡ್ ರೆಡ್ಡಿ ತಮ್ಮ ಸಮಗ್ರತೆ, ಶಾಸಕೀಯ ಒಳನೋಟ ಮತ್ತು ಕಾರ್ಮಿಕರ ಹಕ್ಕುಗಳಿಂದ ಹಿಡಿದು ಕೃಷಿ ಸಂಕಷ್ಟದ ವರೆಗಿನ ವಿಷಯಗಳ ಪ್ರತಿಪಾದನೆಗಳಿಂದಾಗಿ ಎದ್ದು ಕಾಣುತ್ತಿದ್ದರು. ತಳಮಟ್ಟದಲ್ಲಿ, ಅವರು ಪ್ರಬಲ ಜನಚಳುವಳಿಗಳನ್ನು ಮುನ್ನಡೆಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ (2012–2019), ಅವರು ಕೋಮುವಾದ ಮತ್ತು ಸರ್ವಾಧಿಕಾರಶಾಹಿಯ ವಿರುದ್ಧ ಐಕ್ಯ ಕಾರ್ಯಾಚರಣೆಯನ್ನು ಬೆಸೆಯುವಲ್ಲಿ ಒಂದು ನಿರ್ಣಾಯಕ ಪಾತ್ರ ವಹಿಸಿದರು. ಸಿಪಿಐನ ಅತ್ಯುತ್ತಮ ನಾಯಕರಲ್ಲಿ ಒಬ್ಬರಾದ ಅವರನ್ನು ಎಡ ಪಕ್ಷಗಳು ಮತ್ತು ಶಕ್ತಿಗಳ ನಡುವಿನ ಐಕ್ಯತೆಯನ್ನು ಬಲಪಡಿಸುವಲ್ಲಿ ಅವರು ಮಾಡಿದ ಪ್ರಯತ್ನಗಳಿಗಾಗಿ ಸ್ಮರಿಸಲಾಗುವುದು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಭಾರತ ಕಮ್ಯುನಿಸ್ಟ್ ಪಕ್ಷದ ಸಮಸ್ತ ಸದಸ್ಯರಿಗೆ ಮತ್ತು ಅವರ ಪತ್ನಿ ಮತ್ತು ಮಕ್ಕಳಿಗೆ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಬಿಜೆಪಿ ಸರ್ಕಾರವನ್ನು ಜನರ ಕೋಪದಿಂದ ಕಾಪಾಡಲು ಆರ್‌ಎಸ್‌ಎಸ್ ಮುಖ್ಯಸ್ಥರು ವಿಭಜನಕಾರಿ ವಿಷಯಗಳನ್ನು ಎತ್ತುತ್ತಿದ್ದಾರೆ; ಪೊಲಿಟ್‌ಬ್ಯುರೊ ಖಂಡನೆ

ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಆಗಸ್ಟ್ 28ರಂದು ದಿಲ್ಲಿಯಲ್ಲಿ ಮಾಡಿದ ಭಾಷಣದಲ್ಲಿನ ಹೇಳಿಕೆಗಳು ಭಾರತೀಯ ಸಂವಿಧಾನದ ಬಗ್ಗೆ ಆರ್‌ಎಸ್‌ಎಸ್‌ನ ಅನಾದರವನ್ನು ಪ್ರತಿಬಿಂಬಿಸುತ್ತವೆ ಮತ್ತು ಅವು ನಾಡಿನ ಕಾನೂನನ್ನು ಉಲ್ಲಂಘಿಸುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ದೆಹಲಿಯಲ್ಲಿ ಆಯ್ದ ಪ್ರೇಕ್ಷಕರ ಮುಂದೆ ತಮ್ಮ ಮೂರು ದಿನಗಳ ಭಾಷಣದಲ್ಲಿ, ಮೋಹನ್ ಭಾಗವತ್ ಮಥುರಾ ಮತ್ತು ಕಾಶಿ ವಿವಾದಗಳನ್ನು ಮತ್ತೆ ಪ್ರಚೋದಿಸಲು ಪ್ರಯತ್ನಿಸಿದರು. 'ಸಹೋದರತ್ವ'ದ ಒಂದು ಪೂರ್ವಭಾವಿ ಷರತ್ತಾಗಿ ಮುಸ್ಲಿಮರು ಈ ಎರಡು ಸ್ಥಳಗಳಲ್ಲಿನ ಮಸೀದಿಗಳನ್ನು 'ಬಿಟ್ಟುಕೊಡಬೇಕು' ಎಂದು ಅವರು ಆಗ್ರಹಿಸಿದರು. ಆರ್‌ಎಸ್‌ಎಸ್ ಭಾಗಿಯಾಗಿದ್ದ ಬಾಬರಿ ಮಸೀದಿ ಧ್ವಂಸದ ನಂತರ, ಸಂಸತ್ತು 1947ಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದ ಯಾವುದೇ ಧಾರ್ಮಿಕ ಸ್ಥಳವನ್ನು ಬದಲಾಯಿಸುವುದನ್ನು ನಿಷೇಧಿಸುವ ಕಾನೂನನ್ನು ಅಂಗೀಕರಿಸಿತು. ಈ ಕಾನೂನಿನ ಪ್ರಕಾರ, ಬಹುಸಂಖ್ಯಾತ ಕೋಮುವಾದಿ ಶಕ್ತಿಗಳ ದಾವೆಗಳೇನೇ ಇದ್ದರೂ, ಮಥುರಾ ಮತ್ತು ಕಾಶಿ ಎರಡರಲ್ಲೂ ಮತ್ತು ಇತರ ಎಲ್ಲಾ ಪೂಜಾ ಸ್ಥಳಗಳಲ್ಲಿಯೂ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕು. ಅಂತಹ ಬೇಡಿಕೆಗಳು ಕೋಮು ಭಾವೋದ್ರೇಕಗಳನ್ನು ಕೆರಳಿಸುವ, ಸಾರ್ವಜನಿಕ ಗಮನವನ್ನು ಬೇರೆಡೆಗೆ ತಿರುಗಿಸುವ ಮತ್ತು ಸಮಾಜವನ್ನು ಮತೀಯವಾಗಿ ಧ್ರುವೀಕರಿಸುವ ಗುರಿಯನ್ನು ಹೊಂದಿವೆ.

ಮುಂಬರುವ ಚುನಾವಣೆಗಳಿಗೆ ಮುಂಚಿತವಾಗಿ ಬಿಜೆಪಿ ಸರ್ಕಾರವನ್ನು ಸಾರ್ವಜನಿಕರ ಕೋಪದಿಂದ ಕಾಪಾಡಲು ಆರ್‌ಎಸ್‌ಎಸ್ ಮುಖ್ಯಸ್ಥರು ಈ ವಿಭಜನಕಾರಿ ವಿಷಯಗಳನ್ನು ಎತ್ತುತ್ತಿದ್ದಾರೆ. ಬಹಳ ಕಾಲದಿಂದಲೂ, ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುವಾಗಲೆಲ್ಲಾ ಕೋಮು ವಿಭಜನೆಗಳನ್ನು ಪ್ರಚೋದಿಸುವುದು ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳ ಚಾಳಿಯಾಗಿದೆ. ಹೆಚ್ಚಿನ ಯುಎಸ್ ಸುಂಕಗಳು, ದುರ್ಬಲಗೊಳ್ಳುತ್ತಿರುವ ಅರ್ಥವ್ಯವಸ್ಥೆ, ರೈತರು ಮತ್ತು ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ದಾಳಿಗಳು ಮತ್ತು ಚುನಾವಣಾ ದುರಾಚರಣೆಗಳು ಹಾಗೂ ಕೈವಾಡಗಳ ಬಗ್ಗೆ ಹೆಚ್ಚುತ್ತಿರುವ ಪುರಾವೆಗಳಿಂದಾಗಿ, ಸಾರ್ವಜನಿಕರು ಬಿಜೆಪಿ ನೇತೃತ್ವದ ಸರ್ಕಾರದ ಬಗ್ಗೆ ಹೆಚ್ಚೆಚ್ಚು ಭ್ರಮನಿರಸನಗೊಳ್ಳುತ್ತಿದ್ದಾರೆ ಮತ್ತು ಅದರ ವೈಫಲ್ಯಗಳನ್ನು ಹೆಚ್ಚು ಸ್ಪಷ್ಟವಾಗಿ ನೋಡುತ್ತಿದ್ದಾರೆ.

ಆರ್‌ಎಸ್‌ಎಸ್‌ನ ವಿಭಜನಕಾರಿ ಧೋರಣೆಗಳ ವಿರುದ್ಧ ಜಾಗರೂಕರಾಗಿರಲು ಸಿಪಿಐ(ಎಂ) ದೇಶದ ಜನರಿಗೆ ಕರೆ ನೀಡುತ್ತದೆ ಎಂದಿರುವ ಪೊಲಿಟ್‌ಬ್ಯುರೊ, ಭಾರತದ ಐಕ್ಯತೆ ಮತ್ತು ಸಮಗ್ರತೆಯು ಅತ್ಯಂತ ಮಹತ್ವದ್ದಾಗಿದೆ ಮತ್ತು ಯಾವುದೇ ಬೆಲೆ ತೆತ್ತಾದರೂ ಅದನ್ನು ರಕ್ಷಿಸಬೇಕು ಮತ್ತು ಇದನ್ನು ಸಾಧಿಸಲು, ಎಲ್ಲಾ ಜನವಿಭಾಗಗಳ ಜನರನ್ನು ಒಗ್ಗೂಡಿಸಿ ವಿಶಾಲ ಆಧಾರದ ಪ್ರತಿರೋಧವನ್ನು ಕಟ್ಟುವುದು ತುರ್ತು ಅಗತ್ಯವಾಗಿದೆ ಎಂದು ಹೇಳಿದೆ.

ಫಿಡೆಲ್ ನಿನ್ನ ಹೆಸರದು...

ಪುಟ 16 ರಿಂದ

ಸಮಾನತೆಯನ್ನು ಸಾಧಿಸಲಾಯಿತು. ತನ್ನ ಸಾರ್ವಭೌಮತೆಯನ್ನು ಎತ್ತಿ ಹಿಡಿಯುತ್ತಾ, ಸಾಮ್ರಾಜ್ಯಶಾಹಿಯ ಮುಂದೆ ಮಂಡಿಯೂರದೆ, ಮಾನವ ಅಭಿವೃದ್ಧಿ, ಹೆಚ್ಚಿನ ಮಟ್ಟದ ಸಾಮಾನ್ಯ ಜ್ಞಾನ, ವೈದ್ಯಕೀಯ ಕ್ಷೇತ್ರದಲ್ಲಿ ಅಪಾರವಾದ ಸಾಧನೆ, ಜೈವಿಕ ವಿಜ್ಞಾನದಲ್ಲಿ ಉನ್ನತ ಮಟ್ಟದ ಸಂಶೋಧನೆ, ಕ್ರೀಡಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ, ... ಮುಂತಾದ ಕ್ಷೇತ್ರಗಳಲ್ಲಿ ಮುಂದುವರಿದ ದೇಶಗಳೂ ನಾಚಿಕೆ ಪಡುವಂತೆ ಕ್ಯೂಬಾ ಹೆಜ್ಜೆಗಳನ್ನಿಟ್ಟಿದೆ. ಅಮೇರಿಕ ಒಂದಲ್ಲ ಒಂದು ರೀತಿಯಲ್ಲಿ ತನ್ನ ಹಿಡಿತವನ್ನು ಹೊಂದಿರುವ ಜಗತ್ತಿನ ಬಹುತೇಕ ಸಣ್ಣ ಮತ್ತು ಬಡ ದೇಶಗಳಲ್ಲಿ ಸಾಮಾನ್ಯವಾಗಿ ಕಾಣುವ ಖಾಯಿಲೆಗಳು, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ನಿರಂತರ ಉಲ್ಲಂಘನೆ, ಅತಿ ಹೆಚ್ಚಿನ ಶಿಶುಮರಣ ಪ್ರಮಾಣಗಳು, ಹಸಿವು, ಅನಕ್ಷರತೆ, ವಸತಿಹೀನತೆ, ನಿರುದ್ಯೋಗ, ಭಿಕ್ಷಾಟನೆ, ಬೀದಿ ಮಕ್ಕಳು, ಡ್ರಗ್ ವ್ಯಸನಿಗಳು, ಡ್ರಗ್ ಮಾಫಿಯಾ, ಹೆಚ್ಚಿನ ಅಪರಾಧ ಪ್ರಮಾಣ, ... ಇವಾವುವೂ ಕ್ಯೂಬಾದಲ್ಲಿ ಇಲ್ಲ ಎಂಬುದರ ಹಿಂದೆ ಫಿಡೆಲ್‌ರ ಅಪಾರವಾದ ಶ್ರಮವಿದೆ.

ಕ್ಯೂಬಾ ಕ್ರಾಂತಿಯು ಲ್ಯಾಟಿನ್ ಅಮೇರಿಕ ದೇಶಗಳ ಎಡ ಚಳುವಳಿಗೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ. ಫಿಡೆಲ್ ಮತ್ತು ಚೆ ಗೆವಾರ ಕ್ಯೂಬಾದಲ್ಲಿ ಮಾತ್ರವಲ್ಲ, ಇಡೀ ದಕ್ಷಿಣ ಅಮೇರಿಕದ ಕ್ರಾಂತಿಕಾರಿ ಚಳುವಳಿಯ ಸ್ಫೂರ್ತಿದಾಯಕ ಸಂಕೇತಗಳಾಗಿದ್ದಾರೆ. ವಿಶೇಷವೆಂದರೆ ಇಂದಿಗೂ ಫಿಡೆಲ್ ಅಥವಾ ಕ್ಯೂಬಾ ಕ್ರಾಂತಿಯ ಯಾವುದೇ ಜೀವಂತ ನಾಯಕರ ಅಧಿಕೃತ ಭಾವಚಿತ್ರ, ವಿಗ್ರಹ, ನಾಣ್ಯ, ರಸ್ತೆ ಹೆಸರು, ಕಟ್ಟಡ, ಸ್ಮಾರಕ ಯಾವುದನ್ನೂ ಮಾಡಲಿಲ್ಲ. ಫಿಡೆಲ್ ಒಬ್ಬ ದೈತ್ಯ ವ್ಯಕ್ತಿತ್ವವಾದರೂ ವ್ಯಕ್ತಿಪೂಜೆಯನ್ನು ಬೆಳೆಸಲಿಲ್ಲ.

ಫಿಡೆಲ್ ಹೇಗೆ ರಾಷ್ಟ್ರೀಯವಾದಿಯೋ ಅಷ್ಟೇ ಅಂತರರಾಷ್ಟ್ರೀಯವಾದಿಯೂ ಹೌದು. 60 ಮತ್ತು 70ರ ದಶಕಗಳಲ್ಲಿ ಮಧ್ಯ ಮತ್ತು ದಕ್ಷಿಣ ಅಮೇರಿಕದ ಎಲ್ ಸಾಲ್ವಡೊರ್, ಗ್ವಾಟೆಮಾಲ, ನಿಕರಾಗುವಾ, ಕೊಲಂಬಿಯ, ವೆನಿಜುವೆಲಾ, ಬಲಿವಿಯಾ, ಅರ್ಜೆಂಟೈನಾ ಮುಂತಾದ ದೇಶಗಳ ಸಶಸ್ತ್ರ ಬಂಡಾಯ ಹೋರಾಟಗಳಿಗೆ ಫಿಡೆಲ್ ಸಹಾಯ ಮಾಡಿದ್ದಾರೆ. ದಕ್ಷಿಣ ಆಫ್ರಿಕಾದ ಜನಾಂಗೀಯ ಬಿಳಿ ಸರ್ಕಾರದ ಮಧ್ಯಪ್ರವೇಶದ ವಿರುದ್ಧ ಅಂಗೋಲದಲ್ಲಿ ಕ್ಯೂಬನ್ ಸೈನ್ಯವನ್ನು ಕಳುಹಿಸಿದ್ದರು. ವರ್ಣಭೇಧ ನೀತಿಯ ವಿರುದ್ಧ ನೆಲ್ಸನ್ ಮಂಡೇಲರ ಹೋರಾಟಕ್ಕೆ ಫಿಡೆಲ್‌ರದು ಸಂಪೂರ್ಣ ಬೆಂಬಲ. ಕ್ಯೂಬ ತನ್ನ ಡಾಕ್ಟರ್‌ಗಳನ್ನು ಮತ್ತು ಶಿಕ್ಷಕರನ್ನು ಜಗತ್ತಿನೆಲ್ಲೆಡೆ ಜನರಿಗೆ ಸೇವೆ ಸಲ್ಲಿಸಲು ಕಳುಹಿಸಿರುವ ಮಾದರಿ ವಿಶಿಷ್ಟವಾದದ್ದು. ಇದರ ಹಿಂದೆ ಫಿಡೆಲ್ ಇದ್ದರು. 80ರ ದಶಕದಲ್ಲಿ ಅಲಿಪ್ತ ಚಳುವಳಿಯ ಮುಂಚೂಣಿಯಲ್ಲಿದ್ದು, ಲ್ಯಾಟಿನ್ ಅಮೇರಿಕ ದೇಶಗಳ ವಿದೇಶೀ ಸಾಲಗಳ ರದ್ದತಿಗಾಗಿ ಫಿಡೆಲ್ ಕೆಲಸ ಮಾಡಿದರು. 90ರ ದಶಕದಲ್ಲಿ ಸಮಾಜವಾದಿ ಸೋವಿಯತ್ ರಷ್ಯಾದ ಕುಸಿತದಿಂದ ಕ್ಯೂಬನ್ ಕ್ರಾಂತಿ ಸಂಕಷ್ಟಗಳಿಗೆ ಸಿಲುಕಿತು. ಅದನ್ನು 'ವಿಶೇಷ ಅವಧಿ' ಎನ್ನಲಾಗಿದೆ. ವಿರೋಧಿಗಳೂ ಆಶ್ಚರ್ಯ ಪಡುವಂತೆ ಫಿಡೆಲ್ ನೇತೃತ್ವದಲ್ಲಿ ಆ ಸಂದರ್ಭವನ್ನು ನಿಭಾಯಿಸಿದರು.

ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ....

ಅಬ್ಬಬ್ಬಾ! ಎಂಥಾ ದೀಪಾವಳಿ 'ಉಡುಗೊರೆ'!!



ಪ್ರೊ. ಪ್ರಭಾತ್ ಪಟ್ನಾಯಕ್

ಅನು. ಕೆ.ಎಂ.ನಾಗರಾಜ್

ಜನರಿಂದಲೇ ವಸೂಲಿ ಮಾಡುವ ತೆರಿಗೆ ಸರಕಾರದ ಸ್ವಂತ ವರಮಾನವೋ ಎಂಬಂತೆ, ಅದರ ತುಸು ಕಡಿಮೆ ವಸೂಲಿಯನ್ನು 'ಉಡುಗೊರೆ' ಎಂದು ಬೀಗುವುದು ಒಂದು ಅಸಹ್ಯ ಪಾಳೇಗಾರೀ ಮನಸ್ಥಿತಿಯನ್ನು ಬಯಲುಗೊಳಿಸುತ್ತದೆ. ಹಾಗೆ ನೋಡಿದರೆ, ಎರಡು ಜಿಎಸ್‌ಟಿ ಸ್ಲ್ಯಾಬ್‌ಗಳನ್ನು ರದ್ದುಗೊಳಿಸಿದರೆ ತೆರಿಗೆ-ಹೊರೆಯಲ್ಲಿ ಇಳಿಕೆಯಾಗುವುದು ಕೇವಲ ಶೇ. 1.45. ಇದರಿಂದ ಆಗಬಹುದಾದ ವಿತ್ತೀಯ ಕೊರತೆಯನ್ನು ಸರಿಹೊಂದಿಸಲೆಂದು ನವ-ಉದಾರವಾದಿ ಚಾಳಿಯಂತೆ ಸರಕಾರೀ ವೆಚ್ಚಗಳನ್ನು ಅಷ್ಟರ ಮಟ್ಟಿಗೆ ಕಡಿತ ಮಾಡಿದರಂತೂ ಇದರ ಒಟ್ಟು ಪರಿಣಾಮ ಸೊನ್ನೆಯೇ. ಇದನ್ನು ಬಡಾಯಿ ಕೊಚ್ಚಿಕೊಳ್ಳುವುದೇ ಹವ್ಯಾಸವಾಗಿಬಿಟ್ಟಿರುವ ಒಂದು ಸರಕಾರ ಮಾತ್ರವೇ 'ಉಡುಗೊರೆ' ಎಂದು ಬೀಗಲು ಸಾಧ್ಯ. ನವ ಉದಾರವಾದ ಮತ್ತು ಅದರ ಮುಂದಿನ ಭಾಗವಾಗಿ ಫ್ಯಾಸಿಸ್ಟ್ ತೆರನ ಶಕ್ತಿಗಳು ಅಧಿಕಾರಕ್ಕೆ ಏರಿದ ಸಂಯೋಜಿತ ಪರಿಣಾಮವಾಗಿ ದೇಶವು ಒಂದು ವಿಷಾದಕರ ಗೋಜಲಿನಲ್ಲಿ ಸಿಲುಕಿರುವಾಗ ಪ್ರಧಾನಿಗಳ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಯಾವುದೇ ಪರಿಹಾರ ಕ್ರಮಗಳ ಮಾತಿರಲಿ, ಇವೆಲ್ಲದರ ಸುಳಿವೂ ಸಹ ಇಲ್ಲ.

ನರೇಂದ್ರ ಮೋದಿ ಅವರು ಸ್ವಾತಂತ್ರ್ಯ ದಿನಾಚರಣೆ ದಿನ ಮಾಡಿದ ಭಾಷಣವು ನಿರೀಕ್ಷೆಯಂತೆ ನಿರ್ಲಜ್ಜ ಅಸತ್ಯಗಳಿಂದ ಕೂಡಿತ್ತು. ಅದಕ್ಕೆ ಬಿಜೆಪಿ ಆಳ್ವಿಕೆಯ ವರ್ಷಗಳಲ್ಲಿ ಭಾರತವು ಉತ್ಪಾದನಾ ವಲಯದಲ್ಲಿ ಸಾಧಿಸಿತು ಎನ್ನಲಾದ 'ಮಹತ್ತರವಾದ' ಪ್ರಗತಿಯ ಬಗ್ಗೆ ಅವರು ಆಡಿದ ಮಾತುಗಳು ಉದಾಹರಣೆಯಾಗುತ್ತವೆ. ಕಳೆದ ಹತ್ತು ವರ್ಷಗಳಲ್ಲಿ ಉತ್ಪಾದನಾ ವಲಯದ ಪಾಲು ವಾಸ್ತವವಾಗಿ ಜಿಡಿಪಿಯ ಶೇ. 17.5ರಿಂದ ಶೇ. 12.6ಕ್ಕೆ ಒಂದು ತೀವ್ರ ಕುಸಿತವನ್ನು ಕಂಡಿದೆ. ಕುಸಿತದ ಈ ಮಟ್ಟವನ್ನು 1960ರಲ್ಲಿ ಕೊನೆಯ ಬಾರಿಗೆ ದಾಟಲಾಗಿತ್ತು ಮತ್ತು ಈ ಮಟ್ಟದ ಕುಸಿತವನ್ನು ಅರ್ಥಶಾಸ್ತ್ರಜ್ಞರು ಅಪ-ಕೈಗಾರಿಕೀಕರಣದ ಸ್ಥಿತಿ ಎನ್ನುತ್ತಾರೆ. ಇಂಥಹ ಒಂದು ಅಪ–ಕೈಗಾರಿಕೀಕರಣ ಪ್ರಕಿಯೆಯ ಸ್ಥಿತಿಯನ್ನೇ ದೇಶವು ಕೈಗಾರಿಕಾ ವಲಯದಲ್ಲಿ ಮಾಡಿದ ಒಂದು ಮಹತ್ತರವಾದ ಪ್ರಗತಿ ಎಂಬಂತೆ ಬಣ್ಣಿಸುವುದು ಪ್ರಧಾನ ಮಂತ್ರಿಯಂಥಹ ಒಂದು ಜವಾಬ್ದಾರಿಯುತ ಹುದ್ದೆಯಲ್ಲಿರುವ ಮೋದಿ ಅವರ ವೈಶಿಷ್ಟ್ಯವೇ ಸರಿ!

ಅದೇ ರೀತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ನಿರ್ದಿಷ್ಟವಾಗಿ ಆರ್‌ಎಸ್‌ಎಸ್ ಅನ್ನು ಎಳೆದು ತಂದು ಅದನ್ನು ಅವರು ಹೊಗಳಿರುವುದು ಸತ್ಯದ ಒಂದು ವಿಡಂಬನೆಯೇ ಸರಿ. ಸ್ವಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್ ಭಾಗವಹಿಸಲಿಲ್ಲ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿರುವ ವಿಷಯವೇ. ಆದರೆ, ಆ ಸಮಯದಲ್ಲಿ ಅದರ ನಾಯಕರಾಗಿದ್ದ ಎಂ.ಎಸ್. ಗೋಲ್ವಾಲ್ಕರ್ ಅವರು ದೇಶವು ಸ್ವಾತಂತ್ರ್ಯವನ್ನು ಗಳಿಸಿದ ನಂತರವೂ ತನ್ನ ವ್ಯವಹಾರಗಳನ್ನು ಅದು ಸ್ವತಃ ತಾನೇ ನಿರ್ವಹಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಮತ್ತು ಆಡಳಿತವನ್ನು ನಡೆಸಲು ಬ್ರಿಟಿಷರನ್ನೇ ಮತ್ತೆ ಆಹ್ವಾನಿಸಬೇಕಾಗುತ್ತದೆ ಎಂಬ ನಿರೀಕ್ಷೆಯನ್ನು ಹೊಂದಿದ್ದರು (ಈ ಬಗ್ಗೆ ರಾಮ್ ಪುನಿಯಾನಿ ಎಂಬುವರು ವಿವರವಾಗಿ ಬರೆದಿದ್ದಾರೆ).

ಅದಿರಲಿ, ನಾವೀಗ ಅವರು ಮಾಡಿದ ಪ್ರಮುಖ ಆರ್ಥಿಕ ಪ್ರಕಟಣೆಯತ್ತ ತಿರುಗೋಣ. ಸರಕು ಮತ್ತು ಸೇವಾ ತೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಜಿಎಸ್‌ಟಿ ಸ್ಲ್ಯಾಬ್‌ಗಳನ್ನು (ಶೇ. 12ರ ಮತ್ತು ಶೇ. 28ರ ಸ್ಲ್ಯಾಬ್‌ಗಳನ್ನು) ರದ್ದುಗೊಳಿಸುವುದಾಗಿ ಅವರು ಘೋಷಿಸಿದರು. ಈಗ ಶೇ. 12ರ ಸ್ಲ್ಯಾಬ್ ಅಡಿಯಲ್ಲಿ ಬರುವ ಸರಕು ಮತ್ತು ಸೇವೆಗಳಿಗೆ ಇನ್ನು ಮುಂದೆ ಶೇ. 5ರಷ್ಟು ಜಿಎಸ್‌ಟಿಯನ್ನು ಮತ್ತು ಈಗ ಶೇ. 28ರ ಸ್ಲ್ಯಾಬ್ ಅಡಿಯಲ್ಲಿ ಬರುವ ಸರಕು ಮತ್ತು ಸೇವೆಗಳಿಗೆ ಶೇ. 18ರಷ್ಟು ಜಿಎಸ್‌ಟಿಯನ್ನು ವಿಧಿಸಲಾಗುವುದು.

ಈ ರಿಯಾಯಿತಿಯನ್ನು ದೀಪಾವಳಿ ಹಬ್ಬದ ಒಂದು "ಉಡುಗೊರೆ" ಎಂದು ಕರೆದಿರುವುದು ಅಸಂಗತವಾಗಿ ಕಾಣುತ್ತದೆ. ಏಕೆಂದರೆ ಅದು ಒಂದು ಅಸಹ್ಯ ಪಾಳೇಗಾರೀ ಮನಸ್ಥಿತಿಯನ್ನು ಬಯಲುಗೊಳಿಸುತ್ತದೆ. ತೆರಿಗೆಗಳನ್ನು ಜನ ತೆರುತ್ತಾರೆ. ತೆರಿಗೆ ಆದಾಯವು ಜನರ ಹಣದಿಂದ ಬರುತ್ತದೆ. ಜನ ತೆರುವ ತೆರಿಗೆಗಳಲ್ಲಿ ಒಂದು ಇಳಿಕೆಯನ್ನು ಅದು ಸರ್ಕಾರ ನೀಡಿದ "ಉಡುಗೊರೆ" ಎಂದು ಕರೆಯುವುದೆಂದರೆ, ಸರ್ಕಾರದ ಆದಾಯವು ಅದರ ಖಾಸಗಿ ವರಮಾನ ಎಂದು ಭಾವಿಸಿದಂತಾಗುತ್ತದೆ. ಇದು ವಿಷಯಗಳನ್ನು ತಲೆಕೆಳಗು ಮಾಡುವ ವಿಚಾರವಾಗುತ್ತದೆ ಮತ್ತು "ಪ್ರಭುತ್ವ, ಎಂದರೆ, ನಾನು" ಎಂಬ ಫ್ರೆಂಚ್ ದೊರೆ 14ನೇ ಲೂಯಿಯ ಹೇಳಿಕೆಯನ್ನು ಹೋಲುತ್ತದೆ. ಎನ್‌ಡಿಎ ಸರ್ಕಾರದ ಕೆಲವು ಹಿರಿಯ ನಾಯಕರು ಭಾರತದ ಸೇನೆಯನ್ನು "ಮೋದಿಜಿ ಸೇನೆ" ಎಂದು ಕರೆಯುವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ, ವಿಚಾರಗಳನ್ನು ತಲೆಕೆಳಗು ಮಾಡುವುದನ್ನು ಬಿಟ್ಟರೆ ಅವರಿಂದ ಬೇರೆ ಏನನ್ನು ನಿರೀಕ್ಷಿಸಬಹುದು?



'ಉಡುಗೊರೆ'ಯ ಗಾತ್ರವಾದರೂ ಎಷ್ಟು?

ಈಗ ಉದ್ದೇಶಿತ "ಉಡುಗೊರೆ"ಯ ಪೂರ್ಣಪ್ರಮಾಣ ಅದೆಷ್ಟು ದೊಡ್ಡದು ಎಂಬುದನ್ನು ನೋಡೋಣ. ಪತ್ರಿಕಾ ವರದಿಗಳ ಪ್ರಕಾರ, ಶೇ. 28ರ ಸ್ಲ್ಯಾಬ್ ಅಡಿಯಲ್ಲಿ ಬರುವ ಸರಕು ಮತ್ತು ಸೇವೆಗಳಿಂದ ಈಗ ಬರುತ್ತಿರುವ ಆದಾಯವು ಜಿಎಸ್‌ಟಿಯ ಒಟ್ಟು ಆದಾಯದ ಕೇವಲ ಶೇ. 11ರಷ್ಟಿದೆ (ದಿ ಹಿಂದೂ, ಆಗಸ್ಟ್ 16, ಪತ್ರಿಕೆಯನ್ನು ನೋಡಿ). ಆದ್ದರಿಂದ, ಈ ಶೇ. 28 ದರವನ್ನು ಶೇ. 18ಕ್ಕೆ ಇಳಿಕೆ ಮಾಡುವುದರಿಂದ, ಈ ಸ್ಲ್ಯಾಬ್‌ನಿಂದ ಬರುವ ಆದಾಯದಲ್ಲಿ ಶೇ. 10ರಷ್ಟು ನಷ್ಟವಾಗುತ್ತದೆ. ಅಂದರೆ, ಈ ನಷ್ಟವು ಒಟ್ಟು ಜಿಎಸ್‌ಟಿ ಆದಾಯದ ಶೇ. 1.1 ಮಾತ್ರ. ಅದೇ ರೀತಿಯಲ್ಲಿ, ಶೇ. 12ರ ಸ್ಲ್ಯಾಬ್ ಅಡಿಯಲ್ಲಿ ಈಗ ಬರುತ್ತಿರುವ ಆದಾಯವು ಜಿಎಸ್‌ಟಿಯ ಒಟ್ಟು ಆದಾಯದ ಶೇ. 5ರಷ್ಟಿದ್ದು, ಈ ದರವನ್ನು ಶೇ. 5ಕ್ಕೆ ಇಳಿಸುವುದರಿಂದ ಈ ಆದಾಯದ ಶೇ. 7ರಷ್ಟು ಅಂದರೆ ಒಟ್ಟು ಜಿಎಸ್‌ಟಿ ಸಂಗ್ರಹದ ಶೇ. 0.35 ನಷ್ಟವಾಗುತ್ತದೆ. ಆದ್ದರಿಂದ, ಈ ಎರಡೂ ರಿಯಾಯಿತಿಗಳು ಒಟ್ಟಾರೆಯಾಗಿ ಜಿಎಸ್‌ಟಿ ಆದಾಯದ ಶೇ. 1.45ರಷ್ಟು ನಷ್ಟವನ್ನು ಉಂಟುಮಾಡುತ್ತವೆ. ಅಂದರೆ, ಜಿಎಸ್‌ಟಿಯ ಒಟ್ಟು ಆದಾಯದ ಶೇ. 1.45ರಷ್ಟು ಸಾರ್ವಜನಿಕರಿಗೆ ವರ್ಗಾವಣೆಯಾಗುತ್ತದೆ. 2024–25ರಲ್ಲಿ ಸಂಗ್ರಹವಾದ ಒಟ್ಟು ಜಿಎಸ್‌ಟಿ ಆದಾಯವು 22.08 ಲಕ್ಷ ಕೋಟಿ ರೂಪಾಯಿಗಳಾಗಿರುವುದರಿಂದ, ಮೋದಿಯವರು ಘೋಷಿಸಿದ ಜಿಎಸ್‌ಟಿ ರಿಯಾಯಿತಿಗಳ ಮೂಲಕ ಸಾರ್ವಜನಿಕರಿಗೆ ವರ್ಗಾವಣೆಯಾಗುವ ಒಟ್ಟು ಮೊತ್ತವು ಪ್ರಸ್ತುತದಲ್ಲಿ 32,016 ಕೋಟಿ ರೂಪಾಯಿಗಳಷ್ಟಾಗುತ್ತದೆ ಅಥವಾ 2024–25 ವರ್ಷಕ್ಕಾಗಿ ಅಧಿಕೃತವಾಗಿ ಅಂದಾಜು ಮಾಡಲಾದ ಜಿಡಿಪಿಯ ಕೇವಲ ಶೇ. 0.0967 ರಷ್ಟಾಗುತ್ತದೆ. ಇದನ್ನು ಹತ್ತಿರದ ಸಂಖ್ಯೆಯಾದ ಶೇ. 0.1 ಎಂದು ತೆಗೆದುಕೊಳ್ಳೋಣ.

ಜನರಿಗೆ ನೀಡುವ ಈ "ಉಡುಗೊರೆ"ಯು ಇಡೀ ಅರ್ಥವ್ಯವಸ್ಥೆಯ ಮೇಲೆ ಬೀರುವ ವಿಸ್ತರಣಾ ಪರಿಣಾಮಗಳನ್ನು ಅಧಿಕೃತ ಮೂಲಗಳು ವಿವರಿಸತೊಡಗಿವೆ. ಆದರೆ, ಈ ವಿಸ್ತರಣೆಯ ಅಂತಿಮ ಪರಿಣಾಮವು ಈ "ಉಡುಗೊರೆ"ಗೆ ಬೇಕಾಗುವ ಹಣವನ್ನು ಹೇಗೆ ಒದಗಿಸಿಕೊಳ್ಳಲಾಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಜನರಿಗೆ ನೀಡಲಾಗುವ ಈ ರಿಯಾಯಿತಿಗಳಿಂದಾಗಿ ವಿತ್ತೀಯ ಕೊರತೆ ಏರಿಕೆಯಾಗದಂತೆ ನೋಡಿಕೊಳ್ಳುವ ಸಲುವಾಗಿ, ಈ ತೆರಿಗೆ ರಿಯಾಯಿತಿಗಳಿಗೆ ಅನುಗುಣವಾಗಿ ಸರ್ಕಾರದ ಖರ್ಚು–ವೆಚ್ಚಗಳಲ್ಲಿ ರಿಯಾಯಿತಿಗಳಿಗೆ ಸಮಾನವಾದ ಒಂದು ಇಳಿಕೆ ಇದ್ದರೆ, ಆಗ ಈ ರಿಯಾಯಿತಿಗಳಿಂದಾಗಿ ಉಂಟಾಗಬಹುದಾದ ವಿಸ್ತರಣಾ ಪರಿಣಾಮಗಳನ್ನು ಸರ್ಕಾರದ ವೆಚ್ಚಗಳ ಇಳಿಕೆಯು ಉಂಟುಮಾಡುವ ಬೇಡಿಕೆಯ ಸಂಕೋಚನ ಪರಿಣಾಮಗಳು ರದ್ದುಗೊಳ್ಳುತ್ತವೆ. ಹಾಗಾಗಿ, ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆಯಾಗಿ ಉಂಟಾಗುವ ವಿಸ್ತರಣಾ ಪರಿಣಾಮವು ಶೂನ್ಯವಾಗಿರುತ್ತದೆ. ಒಂದು ವೇಳೆ ಸರ್ಕಾರವು ಶಿಕ್ಷಣ, ಆರೋಗ್ಯ ರಕ್ಷಣೆ, ಉದ್ಯೋಗ ಸೃಷ್ಟಿ ಮುಂತಾದ ಚಟುವಟಿಕೆಗಳ ಮೇಲಿನ ವೆಚ್ಚಗಳನ್ನು ಕಡಿತ ಮಾಡಿದರೆ, ತೆರಿಗೆ ರಿಯಾಯಿತಿಗಳ ಮೂಲಕ ವೃದ್ಧಿಯಾಗಬಹುದಾದ ಜನಕಲ್ಯಾಣ ಪರಿಣಾಮವು ನಕಾರಾತ್ಮಕವಾಗುತ್ತದೆ. ಆಗ ತೆರಿಗೆ ರಿಯಾಯಿತಿಗಳು ಅತ್ತ ಬೆಳವಣಿಗೆಯನ್ನು ವೃದ್ಧಿಸಲಿಲ್ಲ, ಇತ್ತ ಜನ ಕಲ್ಯಾಣವನ್ನೂ ವೃದ್ಧಿಸಲಿಲ್ಲ ಎಂಬುದು ಸಾಬೀತಾಗುತ್ತದೆ.

ಮೋದಿ ಅವರು ಪ್ರಕಟಿಸಿದ ತೆರಿಗೆ ರಿಯಾಯಿತಿಗಳಿಗೆ ಅನುಗುಣವಾಗಿ ಸರ್ಕಾರದ ವೆಚ್ಚಗಳಲ್ಲಿ ಒಂದು ವೇಳೆ ಯಾವುದೇ ಕಡಿತಗಳಿಲ್ಲ ಮತ್ತು ರಿಯಾಯಿತಿಗಳು ವಿತ್ತೀಯ ಕೊರತೆಯ ಏರಿಕೆಗೆ ಕಾರಣವಾಗುತ್ತವೆ ಎಂದೇ ಭಾವಿಸೋಣ. ಆಗಲೂ, "ಗುಣಕ" ಮೌಲ್ಯವು 2 ಎಂದು ಊಹಿಸಿಕೊಂಡರೂ, ಈ ಗುಣಕ ಮೌಲ್ಯವು ಯಾವ ರೀತಿಯಲ್ಲಿ ನೋಡಿದರೂ ಅಸಮಂಜಸವಲ್ಲ. ಏಕೆಂದರೆ ಈ ರಿಯಾಯಿತಿಗಳನ್ನು ಬಡವರಿಗೆ ಅಥವಾ ಗ್ರಾಮೀಣ ಜನರಿಗೆ (ಇವರ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಗುಣಕ ಮೌಲ್ಯವನ್ನು ನಿರೀಕ್ಷಿಸಬಹುದಾಗಿದೆ) ಮಾತ್ರವಲ್ಲದೆ ಒಟ್ಟಾರೆಯಾಗಿ ಎಲ್ಲ ಸಾರ್ವಜನಿಕರಿಗೆ ನೀಡಲಾಗುವುದರಿಂದ, ಅವು ನಮ್ಮ ವಾರ್ಷಿಕ ಬೆಳವಣಿಗೆಯ ದರಕ್ಕೆ ಕೇವಲ ಶೇ. 0.2ರಷ್ಟನ್ನು ಮಾತ್ರ ಸೇರಿಸುತ್ತವೆ. ಇದು ಒಂದು ಜುಜುಬಿ ಮೊತ್ತವೇ ಸರಿ. ತನ್ನ ಸಾಧನೆಯನ್ನು ವಿವರಿಸುವಾಗ ಅತಿಶಯೋಕ್ತಿಗಳನ್ನು ಬಳಸುವ ಸರ್ಕಾರವೊಂದು ಮಾತ್ರವೇ ಜಿಡಿಪಿಯ ಶೇ. 0.1ರಷ್ಟು ತೆರಿಗೆ ರಿಯಾಯಿತಿಗಳನ್ನು ದೀಪಾವಳಿ "ಉಡುಗೊರೆ" ಎಂದು ಹೇಳಿಕೊಳ್ಳಬಹುದು.

ನಿಜವಾಗಿಯೂ ಸರಕಾರಕ್ಕೆ ಕಾಳಜಿಯಿದ್ದರೆ...

ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ಒಂದು ವೇಳೆ ಗಂಭೀರವಾಗಿದ್ದರೆ, ಆಗ ಸರ್ಕಾರದ ಖರ್ಚು ವೆಚ್ಚಗಳನ್ನು ಅದು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಬೇಕಿತ್ತು. ಉದಾಹರಣೆಗೆ, ಆರಂಭಿಕವಾಗಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತಕ್ಕ ರೀತಿಯಲ್ಲಿ ತರಬೇತಿ ಪಡೆದ ಸಿಬ್ಬಂದಿಯೊಂದಿಗೆ (ಆಳ್ವಿಕೆಯ ಮುದ್ದಿನ ಮರಿಗಳಿಂದಲ್ಲ) ಭರ್ತಿ ಮಾಡಬೇಕಿತ್ತು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಸಂಪತ್ತು ತೆರಿಗೆ ಮತ್ತು ವಾರಸುದಾರಿಕೆ–ತೆರಿಗೆಯನ್ನು ಹೇರುವ ಮೂಲಕ ಒದಗಿಸಿಕೊಳ್ಳಬೇಕಿತ್ತು.

ಪುಟ 15 ಕ್ಕೆ

1979ರ 'ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮ್ಮೇಳನ'

ಪುಟ 9 ರಿಂದ

ಸಮಾಜ ಸ್ಥಾಪನೆಗೆ ಮುಂದಾಗಬೇಕು. ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕ ಕಂಡ ಮೊದಲ ಸಂಘಟಿತ ದುಡಿಯುವ ಮಹಿಳೆಯರ ಈ ಸಮ್ಮೇಳನವು ಚಾರಿತ್ರಿಕ ಮಹತ್ವವನ್ನು ಹೊಂದಿದೆ.

ಮಹಿಳೆಯೆಂದರೆ ಗೃಹಕೃತ್ಯದಲ್ಲಿ ಮಾತ್ರ ತೊಡಗಿಸಿಕೊಂಡವಳು. ಅದೇನು ಅಂತಹ ಶ್ರಮದ್ದೂ ಅಲ್ಲ ಮಹತ್ವದ್ದೂ ಅಲ್ಲ ಎನ್ನುವಂತಹ ನಂಬಿಕೆಯನ್ನು ಈ ಸಮ್ಮೇಳನವು ತಿರಸ್ಕರಿಸಿ, ಸಮಾಜಕ್ಕೆ ಮಹಿಳೆಯರ ದುಡಿಮೆಯ ಹಲವು ಪಟ್ಟು ಹೆಚ್ಚು ವ್ಯಾಪ್ತಿಯನ್ನು ಅನಾವರಣಗೊಳಿಸಿತು. ಮನೆಗೆಲಸವೂ ಮಾಡಿಕೊಂಡು, ಮಕ್ಕಳು ಮನೆ ಮಂದಿಯನ್ನೂ ನೋಡಿಕೊಂಡು, ಹೊರಗಿನ ಕೆಲಸವನ್ನೂ ನಿರ್ವಹಿಸಿ ಪುಟ್ಟ ಕೋಣೆಯಲ್ಲಿ 14 ಗಂಟೆಗೂ ಹೆಚ್ಚು ಕಾಲ ಬೀಡಿ ಕಟ್ಟುವ ಅವಳ ಶ್ರಮ ಮತ್ತು ಶ್ರಮಕ್ಕೆ ದೊರಕುವ ಅತ್ಯಂತ ಕಡಿಮೆ ಕೂಲಿ, ಅವಳ ಆರೋಗ್ಯದ ಪರಿಸ್ಥಿತಿ ಹೀಗೆ ಸಮ್ಮೇಳನವು ಎಲ್ಲವನ್ನು ವಿವರವಾಗಿ ಚರ್ಚಿಸಿತು.

ಗೋಡಂಬಿ ಕಾರ್ಖಾನೆಯಲ್ಲಿ, ಸಿದ್ಧ ಉಡುಪು ತಯಾರಿಸುವ ಗಾರ್ಮೆಂಟಿನಲ್ಲಿ, ಸರಕಾರಿ ಮತ್ತು ಖಾಸಗಿ ಆಸ್ಪತ್ರೆ, ಬ್ಯಾಂಕು, ಕಾಫಿ ಕ್ಯೂರಿಂಗ್‌ನಲ್ಲಿ, ಹತ್ತಿ ಗಿರಣಿಗಳಲ್ಲಿ, ಕೃಷಿ ಕೂಲಿಕಾರರು, ಕಾಫಿ, ಟೀ, ರಬ್ಬರ್, ಏಲಕ್ಕಿ ಪ್ಲಾಂಟೇಷನ್‌ಗಳಲ್ಲಿ, ನೇಕಾರಿಕೆಯಲ್ಲಿ, ಎಸ್ಟೇಟ್‌ನಲ್ಲಿ ಹೀಗೆ ದುಡಿಮೆಗಾರ ಮಹಿಳೆಯರ ಬದುಕಿನ ಸಂಕಟ ಈ ಸಮ್ಮೇಳನದಲ್ಲಿ ಅನಾವರಣಗೊಂಡಿತು.

ಹೀಗೆ ದುಡಿಮೆಗೆ ಒಡ್ಡಿಕೊಂಡ ಮಹಿಳೆಯರಲ್ಲಿ ಹೆಚ್ಚಿನವರು ಅಸ್ಪೃಷ್ಯರು, ಹಿಂದುಳಿದ ವರ್ಗಕ್ಕೆ ಸೇರಿದ್ದವರು ಎಂಬುದನ್ನು ಸಮ್ಮೇಳನವು ಗುರುತಿಸಿತು. ಸಾಮಾಜಿಕವಾಗಿಯೂ ಅಸಮಾನತೆ, ಅಪಮಾನಕ್ಕೆ, ದೌರ್ಜನ್ಯಕ್ಕೆ ಒಳಗಾದ ಸಮುದಾಯದ ಮಹಿಳೆಯು ಲಿಂಗತಾರತಮ್ಯದ ಕಾರಣಕ್ಕಾಗಿಯೂ ಎದುರಿಸುವ ಸಮಸ್ಯೆಗಳು ಬಯಲುಗೊಂಡವು. ಸಮ್ಮೇಳನವು ಈ ಕ್ರೌರ್ಯದ ತಾರತಮ್ಯದ ಮೇಲೆ ಕನ್ನಡಿ ಹಿಡಿಯಿತು. ಮತ್ತು ಇದನ್ನು ಪೋಷಿಸುವ ಆಳುವ ವರ್ಗದ ಬಣ್ಣವನ್ನೂ ಬಯಲುಗೊಳಿಸಿತು. ಕಾಫಿ, ಟೀ, ಏಲಕ್ಕಿ ಪ್ಲಾಂಟೇಷನ್‌ನಲ್ಲಿ ದುಡಿಯುತ್ತಿರುವ ಒಟ್ಟು ಕಾರ್ಮಿಕರಲ್ಲಿ ಶೇ. 60ಕ್ಕಿಂತಲೂ ಹೆಚ್ಚಿನವರು ಅಪೃಷ್ಯರಾಗಿದ್ದು ಉಳಿದವರು ಜಾತಿಶ್ರೇಣಿಯಲ್ಲಿ ಹಿಂದುಳಿದವರೇ ಆಗಿದ್ದನ್ನು ಸಮ್ಮೇಳನವು ಗುರುತಿಸಿತು. ಕಾಫಿ ಕ್ಯೂರಿಂಗ್‌ನಲ್ಲಿ ಶೇ.90 ಮಹಿಳೆಯರಾಗಿದ್ದರು.

ಆಳುವ ವರ್ಗದ ಧೋರಣೆ

ಸಮ್ಮೇಳನವು ಈ ದುಡಿಯುವ ಮಹಿಳೆಯರ ಬಗ್ಗೆ ಅಂದಿನ ಆಳುವ ವರ್ಗಕ್ಕೆ ಇರುವ ಧೋರಣೆಯನ್ನು ಬಯಲುಗೊಳಿಸಿತು. ಸಮ್ಮೇಳನವು ನಡೆಯುವ ಹೊತ್ತಿಗೆ ಕರ್ನಾಟಕದಲ್ಲಿ ದೇವರಾಜ ಅರಸು ಮುಖ್ಯ ಮಂತ್ರಿಯಾಗಿದ್ದ ಸರಕಾರವಿತ್ತು. ರಾಜ್ಯದಲ್ಲಿ ವಾಸ್ತವದಲ್ಲಿ ಇರುವ ಕಾರ್ಮಿಕರ ಸಂಖ್ಯೆಯನ್ನು ಪೂರ್ಣ ಪರಿಗಣಿಸಲಿಲ್ಲ. ಸರಕಾರದ ಕಾರ್ಮಿಕ ಇಲಾಖೆಯ ಪ್ರಕಾರ ರಾಜ್ಯದಲ್ಲಿ 10 ಲಕ್ಷ ಕೈಗಾರಿಕಾ ಕಾರ್ಮಿಕರು, 4 ಲಕ್ಷ ಬೀಡಿ ಕಾರ್ಮಿಕರು, ಪ್ಲಾಂಟೇಷನ್‌ನಲ್ಲಿ 2 ಲಕ್ಷ ಕಾರ್ಮಿಕರು ಇರುವರೆಂದು ಘೋಷಿಸಲಾಗಿತ್ತು. ಸಮ್ಮೇಳನವು ರಾಜ್ಯದಲ್ಲಿರುವ ಒಟ್ಟು ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರು ಅವರ ಸ್ಥಿತಿಗತಿ ಎಲ್ಲವನ್ನೂ ಅನಾವರಣಗೊಳಿಸುತ್ತದೆ. ಅತ್ಯಂತ ಪ್ರಗತಿಪರತೆಯ ಮುಖವಾಡ ಹೊಂದಿದ ಮುಖ್ಯಮಂತ್ರಿ ಮತ್ತವರ ಸರಕಾರವು ಹೇಗೆ ಕಾರ್ಮಿಕ ವಿರೋಧಿಯಾಗಿತ್ತು ಮತ್ತು ಹೇಗೆ ಮಾಲೀಕರ ಪರವಾಗಿತ್ತು ಎನ್ನುವುದನ್ನು ಆಧಾರಸಹಿತವಾಗಿ ಸಮ್ಮೇಳನವು ಚರ್ಚೆ ಮಾಡುತ್ತದೆ. 1972ರಿಂದಲೂ ಕಾರ್ಮಿಕರ ಕನಿಷ್ಠ ಕೂಲಿಯನ್ನು ಪುನರ್ ವಿಮರ್ಶಿಸಿಲ್ಲ ಎಂಬುದನ್ನು ಸಮ್ಮೇಳನವು ಗುರುತಿಸುತ್ತದೆ. ಬಡವರ ಪರ ಎಂದು ಹೇಳಿಕೊಳ್ಳುವ ಸರಕಾರವು ಪ್ಲಾಂಟೇಷನ್ ಕಾರ್ಮಿಕ ಕಾಯ್ದೆಯನ್ನು ಪ್ಲಾಂಟರುಗಳು ಸತತವಾಗಿ ಉಲ್ಲಂಘನೆ ಮಾಡಿದರೂ ಒಬ್ಬರನ್ನೂ ಶಿಕ್ಷೆಗೆ ಗುರಿಪಡಿಸಲಿಲ್ಲ. ಬದಲಿಗೆ ಪ್ಲಾಂಟೇಷನ್ ಕಾರ್ಮಿಕರ ಮುಖಂಡರಾಗಿದ್ದವರನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿ ಬಂಧಿಸಿ ಜೈಲಿಗಟ್ಟಲಾಯಿತು.

ಹಾಸನ ಜಿಲ್ಲೆಯ ಸಕಲೇಶಪುರದ ಬಳಿ ಇರುವ ಕಾಫಿ ತೋಟದ ಪ್ಲಾಂಟೇಷನ್ ಕಾರ್ಮಿಕರು ಸಂಘ ಕಟ್ಟಿಕೊಂಡಿದ್ದಕ್ಕೆ ಅವರನ್ನು ಕೆಲಸದಿಂದ ತೆಗೆದು ಗೂಂಡಾಗಳ ಮೂಲಕ ದಾಳಿ ಮಾಡಿಸಿ ಎಲ್ಲರನ್ನು ಕಾಡಿನಲ್ಲಿ ಅಟ್ಟಿದರು. ಮುಖ್ಯ ಮಂತ್ರಿಯವರಿಗೆ ದೂರು ಕೊಟ್ಟರೂ ಕ್ರಮವಾಗಲಿಲ್ಲ. ಸಿದ್ಧ ಉಡುಪು ಕಾರ್ಮಿಕರು ಬಹು ಸಂಖ್ಯೆಯಲ್ಲಿ ಮುಸ್ಲಿಮ್ ಮಹಿಳೆಯರು ಮತ್ತು ದಲಿತರು. ಅವರು ವೇತನಕ್ಕಾಗಿ ಹೋರಾಟ ಮಾಡಿದರೆ ಕೆಲಸದಿಂದ ಕಿತ್ತುಹಾಕಿ ಜೈಲಿಗೆ ಕಳಿಸಲಾಗುತ್ತದೆ. ಕಾರ್ಖಾನೆಯ ಮಾಲಿಕ ಕಾಂಗ್ರೆಸ್ ಐ ಪಕ್ಷದವರು. ಕೇಂದ್ರ ಸರಕಾರದ ಕಾರ್ಮಿಕರ ವಿರೋಧಿ ನೀತಿ ವಿರೋಧಿಸುವ ಅರಸು ಸರಕಾರವು ಸ್ವತಃ ತಾನೇ 12 ಕೈಗಾರಿಕೆಗಳನ್ನು ಅಗತ್ಯ ಸೇವೆಗಳೆಂದು ಪರಿಗಣಿಸಿ, ಆ ಕಾರ್ಮಿಕರ ಮುಷ್ಕರದ ಹಕ್ಕನ್ನು ನಿರಾಕರಿಸುತ್ತಾರೆ. ಹೀಗೆ ಅರಸು ಸರಕಾರದ ದ್ವಿಮುಖ ನೀತಿಯನ್ನು ಸಮ್ಮೇಳನವು ಬಯಲುಗೊಳಿಸುತ್ತದೆ. ಕರ್ನಾಟಕದ ದುಡಿಯುವ ಮಹಿಳೆಯರ ಈ ಸಮ್ಮೇಳನವು ಜಾಗತಿಕ ಕಣ್ಣೋಟದ ನೆಲೆಯಲ್ಲಿ ಸ್ಥಳೀಯ ಚಳುವಳಿಯನ್ನು ಗಟ್ಟಿಗೊಳಿಸುತ್ತ, ಮಹಿಳೆಯರ ಸಮರ್ಥ ನಾಯಕತ್ವವನ್ನು ಆಯ್ಕೆ ಮಾಡಿತು.



ಮನೆಗಳಲ್ಲಿ ಬೀಡಿ ಕಟ್ಟುವ ಮಹಿಳೆಯರ ಬದುಕಿನ ಬಗ್ಗೆ 1979ರ ಮಾರ್ಚ್ 10, 11 ರಂದು ಮಂಗಳೂರಿನಲ್ಲಿ ನಡೆದ 'ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮ್ಮೇಳನದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಕರ್ನಾಟಕದಲ್ಲಿ ಸಂಘಟಿತ ಸ್ವರೂಪದಲ್ಲಿ ನಡೆದ ದುಡಿಯುವ ಮಹಿಳೆಯರ ಮೊದಲ ಸಂಘಟಿತ ಸಮ್ಮೇಳನ ಇದಾಗಿದೆ. ಈ ಸಮ್ಮೇಳನದಲ್ಲಿ ಒಂದು ಕಿರುಹೊತ್ತಿಗೆ ತರಲಾಗಿದೆ. ಇದರಲ್ಲಿ 'ಸ್ತ್ರೀ ಬೀಡಿ ಕಾರ್ಮಿಕರ ದಾರುಣ ಸ್ಥಿತಿ'ಯ ಬಗ್ಗೆ ಪ್ರಶಾಂತ, ದುಡಿಯುವ ಮಹಿಳೆಯರು ಏಕೆ ಮುಂದಳ ಪಾತ್ರ ವಹಿಸಬೇಕು? ಕುರಿತು ಪಿ.ರಾಮಚಂದ್ರರಾವ್, ಕರ್ನಾಟಕ ಸರಕಾರದ ಕಾರ್ಮಿಕ ನೀತಿ ಕುರಿತು ಸಿ.ನಂಜುಂಡಪ್ಪ, ಮಹಿಳೆ ನಡೆದು ಬಂದ ದಾರಿ ಬಗ್ಗೆ ಮತ್ತು ಏಕೆ ಈ ದುಡಿಯುವ ಮಹಿಳೆಯರ ರಾಜ್ಯ ಮತ್ತು ರಾಷ್ಟ್ರೀಯ ಸಮ್ಮೇಳನ ಕುರಿತು ಎಸ್.ಮಾಲತಿಯವರು ಬರೆದಿದ್ದಾರೆ. ಈ ಹೊತ್ತಿಗೆಯು ಅನೇಕ ಮಹತ್ವದ ಅಂಶಗಳನ್ನು ಒಳಗೊಂಡಿದೆ. ಮನೆಗೆಲಸವನ್ನು ಪೂರೈಸಿಕೊಂಡು ಸಾಮಾಜಿಕ ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿದ ಬಹುದೊಡ್ಡ ಸಂಖ್ಯೆಯ ಮಹಿಳೆಯರ ಬದುಕಿನ ಸ್ಥಿತಿಗತಿಯ ಮೇಲೆ ಬೆಳಕು ಚಲ್ಲಿದ ಅತ್ಯಂತ ಮಹತ್ವದ ಲೇಖನಗಳು ಇವಾಗಿವೆ.

ಸಲ್ವಾ ಜುಡುಮ್ ಪ್ರಕರಣ......

ಪುಟ 6 ರಿಂದ...

ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ನಾವು ಕಂಡುಕೊಂಡಿದ್ದೇವೆ. ಈ ಪ್ರದೇಶಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಂಘಟಿತ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ" ಎಂದು ಮುಂದುವರೆದು ಅವರು ಹೇಳಿದರು.

"ಸಂವಿಧಾನದ 315ನೇ ವಿಧಿಯನ್ನು ಪರಿಗಣಿಸಿ, ಛತ್ತೀಸ್‌ಗಢ ರಾಜ್ಯದ ನಿವಾಸಿಗಳು ಯಾವುದೇ ಭಾಗದಿಂದ ಹಿಂಸಾಚಾರಕ್ಕೆ ಒಳಗಾಗಿದ್ದರೂ ಅವರಿಗೆ ಶಾಂತಿ ಮತ್ತು ಪುನರ್ವಸತಿ ಕಲ್ಪಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದು ಛತ್ತೀಸ್‌ಗಢ ರಾಜ್ಯ ಮತ್ತು ಭಾರತ ಒಕ್ಕೂಟದ ಕರ್ತವ್ಯವಾಗಿದೆ ಎಂಬುದನ್ನು ನಾವು ಗಮನಿಸುತ್ತೇವೆ." ಎಂದೂ ಪೀಠ ಹೇಳಿತು.

ಪ್ರಭುತ್ವ ಹಿಂಸಾಚಾರದ ಹೊರಗುತ್ತಿಗೆಗೆ ವಿರೋಧ

ಹಿಂದಿನ ಸುಪ್ರೀಂ ಕೋರ್ಟ್ ಪೀಠಗಳು ಹೊರಡಿಸಿದ ನಿರ್ದೇಶನಗಳು ಮತ್ತು ನ್ಯಾ. ಬಿ.ಸುದರ್ಶನ್ ರೆಡ್ಡಿ ಅವರ ತೀರ್ಪುಗಳನ್ನು ಓದಿದಾಗ, ಸಂವಿಧಾನ ದಲ್ಲಿ ರೂಪಿಸಲಾದ ತತ್ವಗಳನ್ನು ಹೊರತುಪಡಿಸಿ ಯಾವುದೇ ಸಿದ್ಧಾಂತದ ಬಗ್ಗೆ ಒಟ್ಟಾರೆಯಾಗಿ, ನ್ಯಾಯಾಂಗದಿಂದ ಮತ್ತು ನ್ಯಾ. ರೆಡ್ಡಿ ಅವರಿಂದ ವೈಯಕ್ತಿಕವಾಗಿ ಯಾವುದೇ ಸೈದ್ಧಾಂತಿಕ ಸಹಾನುಭೂತಿ ಇರಲಿಲ್ಲ ಎಂದು ತೋರಿಸುತ್ತದೆ.

ಈ ಪ್ರಕರಣಗಳನ್ನು ಅನುಸರಿಸಿದ ಯಾರಾದರೂ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಪ್ರಗತಿಪರ ಸ್ವರೂಪವನ್ನು ಮೆಚ್ಚುತ್ತಾರೆ. ಪ್ರಕರಣದ ವಿಚಾರಣೆ ನಡೆಸಿದ ಎಲ್ಲಾ 24 ನ್ಯಾಯಾಧೀಶರು ಛತ್ತೀಸ್‌ಗಢ ಸರ್ಕಾರವು ಪ್ರಭುತ್ವ ಹಿಂಸಾಚಾರವನ್ನು ಹೊರಗುತ್ತಿಗೆ ನೀಡುವುದನ್ನು ವಿರೋಧಿಸಿದರು. ಪರಿಷ್ಕರಣೆ ಅರ್ಜಿಯ ವಿಚಾರಣೆ ನಡೆಸಿದ ಎಲ್ಲಾ ನ್ಯಾಯಾಧೀಶರು 15 ವರ್ಷಗಳ ಹಿಂದೆ ನ್ಯಾಯಮೂರ್ತಿಗಳಾದ ಸುದರ್ಶನ್ ರೆಡ್ಡಿ ಮತ್ತು ನಿಜ್ಜಾರ್ ಅವರು ನೀಡಿದ ಆದೇಶಗಳಿಗೆ ಸಂಪೂರ್ಣವಾಗಿ ಒಪ್ಪಿಗೆ ಸೂಚಿಸಿದರು.

ನ್ಯಾ. ಸುದರ್ಶನ್ ರೆಡ್ಡಿ ಅವರು ನಕ್ಸಲೀಯರ ತತ್ವಶಾಸ್ತ್ರವನ್ನು ಒಪ್ಪಲಿಲ್ಲ ಅಥವಾ ಅವರ ಮಾರ್ಗಗಳನ್ನು ಅನುಮೋದಿಸಲಿಲ್ಲ, "ನಕ್ಸಲ್ ಭಯೋತ್ಪಾದನೆ"ಯನ್ನು ಬೆಂಬಲಿಸುವುದಂತೂ ಖಂಡಿತ ಅಲ್ಲ ಎಂಬುದು ಸ್ಪಷ್ಟ. ಆದ್ದರಿಂದ, ಅದನ್ನು ಬೇರೆ ರೀತಿಯಲ್ಲಿ ಕಾಣುವುದು ಹಾಸ್ಯಾಸ್ಪದವಾಗುತ್ತದೆ.

ಎರಡು ರಾಜಕೀಯ ಬಣಗಳ ನಡುವೆ ಅಲ್ಲ

ನ್ಯಾ. ಸುದರ್ಶನ್ ರೆಡ್ಡಿ ಇದನ್ನು ಈ ಕೆಳಗಿನಂತೆ ವಿವರಿಸುತ್ತಾರೆ: "ನಾನು ಯಾವುದೇ ಸಿದ್ಧಾಂತವನ್ನು ಇಷ್ಟಪಡುವುದಿಲ್ಲ ಅಥವಾ ದ್ವೇಷಿಸುವುದಿಲ್ಲ. ಅದು ನನ್ನ ಕೆಲಸವಲ್ಲ. ಆದರೆ ನನಗೆ ಆರೆಸ್ಸೆಸ್ ಚಟುವಟಿಕೆಗಳೊಂದಿಗೆ ಬಲವಾದ ಭಿನ್ನಾಭಿಪ್ರಾಯಗಳಿವೆ. ಏಕೆಂದರೆ ಸಂವಿಧಾನವನ್ನು ಎತ್ತಿಹಿಡಿಯುವ ಪ್ರಜಾಪ್ರಭುತ್ವವಾದಿ, ಬಾಬಾಸಾಹೇಬರ ಸಹೋದರತ್ವದ ಸಿದ್ಧಾಂತ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆಯ ಮೌಲ್ಯಗಳನ್ನು ನಾನು ನಂಬುತ್ತೇನೆ."

ನಿಜ, ಅಮಿತ್ ಶಾ ಈ ಕಾರಣಕ್ಕಾಗಿಯೇ ನ್ಯಾ. ಸುದರ್ಶನ್ ರೆಡ್ಡಿಯವರನ್ನು ಟೀಕಿಸುತ್ತಾರೆ. ಇಂತಹ ಅಪಪ್ರಚಾರ ಅರ್ಥಹೀನ, ಅಪ್ರಸ್ತುತ ಮತ್ತು ಸಂವಿಧಾನ ವಿರೋಧಿ. ಇದು ನ್ಯಾಯಾಂಗದ ಸ್ವಾತಂತ್ರ್ಯವನ್ನು ತೀವ್ರವಾಗಿ ದುರ್ಬಲಗೊಳಿಸುತ್ತದೆ ಮತ್ತು ನ್ಯಾಯಾಧೀಶರ ನೈತಿಕ ಸ್ಥೈರ್ಯವನ್ನು ಕುಂದಿಸುತ್ತದೆ ಎಂಬ ಕಟು ವಿಮರ್ಶೆ ವ್ಯಕ್ತವಾಗಿದೆ.

ಉಪರಾಷ್ಟ್ರಪತಿ ಚುನಾವಣೆ ಎರಡು ರಾಜಕೀಯ ಬಣಗಳ ನಡುವೆ ಅಲ್ಲ. ಬದಲಾಗಿ, ಭಾರತೀಯ ಸಂವಿಧಾನವನ್ನು ರಕ್ಷಿಸುವ ಬಣ ಮತ್ತು ಅದನ್ನು ನಾಶಮಾಡಲು ಪ್ರಯತ್ನಿಸುವ ಬಣದ ನಡುವಿನ ಹೋರಾಟವಾಗಿ ಹೆಚ್ಚು ಹೆಚ್ಚು ಮುನ್ನೆಲೆಗೆ ಬಂದಿದೆ. ಎನ್‌ಡಿಎ ಅಭ್ಯರ್ಥಿಯಾಗಿ ಘೋಷಿಸಲ್ಪಟ್ಟ ಸಿ.ಪಿ. ರಾಧಾಕೃಷ್ಣನ್ ಅವರು ಕಟ್ಟಾ ಆರೆಸ್ಸೆಸ್ ಬೆಂಬಲಿಗ. ಅವರು 16ನೇ ವಯಸ್ಸಿನಲ್ಲಿ ಆರೆಸ್ಸೆಸ್‌ಗೆ ಸೇರಿದರು ಮತ್ತು ಎರಡು ಬಾರಿ ಬಿಜೆಪಿ ಸಂಸದ ಮತ್ತು ನಂತರ ರಾಜ್ಯಪಾಲರಾಗಿ ನೇಮಕಗೊಂಡವರು. ಅವರಿಗೆ ಹೋಲಿಸಿದರೆ, ವಿರೋಧ ಪಕ್ಷಗಳಿಂದ ಕಣಕ್ಕಿಳಿಸಲ್ಪಟ್ಟ ನ್ಯಾ. ಸುದರ್ಶನ್ ರೆಡ್ಡಿ ಅವರು ಸಾಂವಿಧಾನಿಕ ಪ್ರಜಾಪ್ರಭುತ್ವವಾದಿ. ಅವರು ಹೈಕೋರ್ಟ್ ನ್ಯಾಯಾಧೀಶರು, ಮುಖ್ಯ ನ್ಯಾಯಾಧೀಶರು ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಸಾಂವಿಧಾನಿಕ ತೀರ್ಪುಗಳನ್ನು ನೀಡಿದ್ದಾರೆ ಮತ್ತು ಎಲ್ಲರ ಗೌರವವನ್ನು ಗಳಿಸಿದ್ದಾರೆ.

ಉಪರಾಷ್ಟ್ರಪತಿ ಚುನಾವಣೆ ಸಂವಿಧಾನವನ್ನು ರಕ್ಷಿಸುವ ಹೋರಾಟವಾಗಿ ವಿಕಸನಗೊಳ್ಳುತ್ತಿದೆ. ಸ್ವಾಭಾವಿಕವಾಗಿ, ಸಂವಿಧಾನವನ್ನು ನಾಶಮಾಡಿ ಅದರ ಸ್ಥಳದಲ್ಲಿ ಮನು ಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವವರು ಸುದರ್ಶನ್ ರೆಡ್ಡಿಯವರ ವಿರುದ್ಧ ದ್ವೇಷವನ್ನು ಹೊರಹಾಕುತ್ತಿದ್ದಾರೆ. ಅಮಿತ್ ಶಾ ರವರ ಈ ಟೀಕೆ ಅವರ ದ್ವೇಷದ ಅಭಿವ್ಯಕ್ತಿಯಾಗಿದೆ.

(ಮಾಹಿತಿ ಆಧಾರ: **ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್**, ತೀಕದಿರ್)

...ಎಂಥಾ ದೀಪಾವಳಿ "ಉಡುಗೊರೆ"!!

ಪುಟ 13ರಿಂದ

ಸಂಪತ್ತಿನ ಅಸಮಾನತೆಯು ದೇಶದಲ್ಲಿ ಇಲ್ಲಿಯವರೆಗೂ ನಂಬಿದ್ದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿದೆ ಎಂದು ಈಗ ಹೇಳಲಾಗುತ್ತಿದೆ. ಜನಸಂಖ್ಯೆಯ ಮೇಲ್ತುದಿಯ ಶೇ. 1ರಷ್ಟು ಜನರು ದೇಶದ ಸಂಪತ್ತಿನ ಸುಮಾರು ಶೇ. 40ರಷ್ಟನ್ನು ಹೊಂದಿದ್ದಾರೆಂದು ಈ ಹಿಂದೆ ಅಂದಾಜಿಸಲಾಗಿತ್ತು. ಆದರೆ, ಅಮೆರಿಕ ಮೂಲದ ಬರ್ನ್‌ಸ್ಟೈನ್ ಎಂಬ ಒಂದು ಸಂಪತ್ತು ನಿರ್ವಹಣಾ ಸಂಸ್ಥೆಯು ಇತ್ತೀಚೆಗೆ ಪ್ರಕಟಿಸಿರುವ ಒಂದು ವರದಿಯಲ್ಲಿ ಭಾರತದ ಜನಸಂಖ್ಯೆಯ ಮೇಲ್ತುದಿಯ ಶೇ. 1ರಷ್ಟು ಜನರು ದೇಶದ ಸಂಪತ್ತಿನ ಶೇ. 60ರಷ್ಟನ್ನು ಹೊಂದಿದ್ದಾರೆ ಎಂದು ಹೇಳಲಾಗಿದೆ. ಇದನ್ನು ನಿಖರವಾಗಿ ಅಂದಾಜು ಮಾಡುವುದು ಒಂದು ಕಷ್ಟದ ಕೆಲಸ ಎಂಬುದೇನೊ ಸರಿ. ಆದರೆ, ನಿಖರವಾದ ಸಂಖ್ಯೆ ಏನೇ ಇರಲಿ, ಭಾರತದಲ್ಲಿರುವ ಸಂಪತ್ತಿನ ಅಸಮಾನತೆಯು ವಿಶ್ವದಲ್ಲೇ ಅತಿ ಹೆಚ್ಚಿನದು ಎಂಬುದಂತೂ ಹೌದು. ಮಾತ್ರವಲ್ಲ, ಅದು ಮತ್ತಷ್ಟು ಹೆಚ್ಚುತ್ತಿದೆ ಎಂಬುದೂ ಹೌದು.

ಆದ್ದರಿಂದ ಅರ್ಥವ್ಯವಸ್ಥೆಯ ಪುನಶ್ಚೇತನವನ್ನು ಮೂಲಭೂತವಾಗಿ ಪ್ರಜಾಪ್ರಭುತ್ವ ಸಮಾಜದ ರೀತಿ-ನೀತಿಗೆ ವಿರುದ್ಧವಾಗಿರುವ ಸಂಪತ್ತಿನ ಅಸಮಾನತೆಯ ಪೀಡೆಯ ವಿರುದ್ಧ ದಾಳಿಮಾಡುವ ರೀತಿಯಲ್ಲಿಯೇ ಯೋಜಿಸಬೇಕಿತ್ತು ಮತ್ತು ಪ್ರಧಾನ ಮಂತ್ರಿಯವರ ಸ್ವಾತಂತ್ರ್ಯ ದಿನಾಚರಣೆಯ ಭಾಷಣವು ಅಂತಹ ಪುನಶ್ಚೇತನದ ಕಾರ್ಯತಂತ್ರವನ್ನು ಪ್ರಕಟಿಸುವ ಸಂದರ್ಭವಾಗಿರಬೇಕಿತ್ತು. ಆದರೆ ಮೋದಿ ಸರ್ಕಾರ ಮಾಡಲು ಪ್ರಯತ್ನಿಸಿದ್ದು ಇದನ್ನಲ್ಲ. ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲಾಗಲಿ ಅಥವಾ ಜನರಿಗೆ ಪರಿಹಾರ ನೀಡಲಾಗಲಿ ಅದು ಮಾಡಿರುವುದು ಅತ್ಯಲ್ಪವೇ. ಆದರೂ, ಅತ್ಯಲ್ಪವಾಗಿರುವ ಈ ರಿಯಾಯಿತಿಗಳನ್ನೇ ಒಂದು ಭಾರೀ ಕೊಡುಗೆ ಎಂಬಂತೆ ತನ್ನ ಈ "ದೀಪಾವಳಿ ಉಡುಗೊರೆ" ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತದೆ! ಆದರೆ, ಯಾವುದೇ ಮಹತ್ವಪೂರ್ಣ ಕ್ರಮಗಳನ್ನು ಕೈಗೊಳ್ಳುವುದಕ್ಕಿಂತ ಸಾರ್ವಜನಿಕ ಪ್ರಚಾರದ ಮಾತುಗಳೇ ತನ್ನ ಆದ್ಯತೆ ಎಂದು ಬಗೆಯುವ ಒಂದು ಸರ್ಕಾರದಿಂದ ಏನನ್ನು ತಾನೇ ನಿರೀಕ್ಷಿಸಬಹುದು.

ನಿಜವಾದ ಸಮಸ್ಯೆಗಳ ಪ್ರಸ್ತಾಪವೂ ಇಲ್ಲ

ಶಿಕ್ಷಣ ಮತ್ತು ಆರೋಗ್ಯಪಾಲನೆ ಇವು ಹಿಂದಿನಂತಲ್ಲದೆ ಈಗ ವ್ಯಾಪಾರಗಳಾಗಿ ಬಿಟ್ಟಿವೆ; ಆದ್ದರಿಂದ ಅತೀ ದುಬಾರಿಯಾಗಿವೆ; ಅದರಿಂದಾಗಿ ಅವು ಜನ ಸಾಮಾನ್ಯರ ಅಳವಿಗೆ ನಿಲುಕದಷ್ಟು ದೂರ ಹೋಗಿವೆ ಎಂಬುದನ್ನು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಇತ್ತೀಚೆಗೆ ಒಪ್ಪಿಕೊಂಡಿದ್ದಾರೆ. ಇದು, ಈ ನಿರ್ಣಾಯಕ ವಲಯಗಳು ನವ ಉದಾರವಾದಿ ಕಾರ್ಯತಂತ್ರದ ಅನುಗುಣವಾಗಿ ಖಾಸಗೀಕರಣಗೊಳ್ಳುವ ಬದಲು ಸರ್ಕಾರದ ಪ್ರಾಥಮಿಕ ಜವಾಬ್ದಾರಿಯಾಗಿರಬೇಕು ಎಂಬ ದೃಷ್ಟಿಕೋನವನ್ನು ಸೂಚ್ಯವಾಗಿ ಒಪ್ಪಿಕೊಳ್ಳುವುದರ ಹತ್ತಿರದಲ್ಲಿದೆ.

ಭಾಗವತ್ ಈ ರೀತಿ ಒಪ್ಪಿಕೊಂಡಿರುವುದು ಸತ್ಯದ ಒಂದು ಭಾಗವನ್ನು ಮಾತ್ರ ಒಳಗೊಂಡಿದೆ. ಇನ್ನೊಂದು ಭಾಗವು ಅವರ ಪರಿವಾರವು ಹುಟ್ಟುಹಾಕಿದ ಗೂಂಡಾಗಳು ಮತ್ತು ಮೇಲೆರಲು ಪ್ರಯತ್ನಿಸುವ ವ್ಯಕ್ತಿಗಳು ಸರ್ಕಾರದ ಅಂಗ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಧ್ವಂಸಗೊಳಿಸುವುದನ್ನು ಒಳಗೊಂಡಿದೆ. ಆರ್‌ಎಸ್‌ಎಸ್ ನಿಷ್ಠೆಹೊಂದಿದ ವಿದ್ಯಾರ್ಥಿ ಪುಂಡರು ವಿಶ್ವವಿದ್ಯಾಲಯಗಳಲ್ಲಿ ಯಾವುದೇ ಮುಕ್ತ ವಿಚಾರಗಳ ಚರ್ಚೆಯನ್ನು ತಡೆಯುತ್ತಾರೆ; ವಿಶ್ವವಿದ್ಯಾಲಯಗಳ ಅಧ್ಯಾಪಕ ಹುದ್ದೆಗಳಿಗೆ ನಿಗದಿತ ಕನಿಷ್ಠ ಅರ್ಹತೆಗಳನ್ನೂ ಸಹ ಹೊಂದಿರದ ವ್ಯಕ್ತಿಗಳನ್ನೂ ಒಳಗೊಂಡಂತೆ ಕಳಪೆ ಗುಣಮಟ್ಟದ ನೇಮಕಾತಿಗಳನ್ನು ಮಾಡಲಾಗುತ್ತದೆ; ಮತ್ತು ಹುಡುಕಿ ಆಯ್ಕೆಮಾಡಿದ ರಾಜ್ಯಪಾಲರುಗಳು, ವಿಶ್ವವಿದ್ಯಾನಿಲಯಗಳ ಪದನಿಮಿತ್ತ ಕುಲಪತಿಗಳಾಗಿ, ಆರ್‌ಎಸ್‌ಎಸ್‌ನ ನೆಚ್ಚಿನ ಭಂಟರನ್ನು ವಿಶ್ವವಿದ್ಯಾಲಯಗಳ ಆಡಳಿತದ ಮುಖ್ಯಸ್ಥರನ್ನಾಗಿ ನೇಮಿಸುತ್ತಾರೆ. ಈ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ನಾಶಪಡಿಸುತ್ತಿರುವುದರಿಂದಾಗಿ, ಯಾವುದೇ ಒಬ್ಬ ಸಾಮಾನ್ಯ ನಾಗರಿಕನು ತನ್ನ ಮಕ್ಕಳನ್ನು ಅಂತಹ ಸಂಸ್ಥೆಗೆ ಕಳುಹಿಸುವ ಸಾಮರ್ಥ್ಯವನ್ನು ಆತ ಹೊಂದಿದ್ದರೂ ಸಹ ಆತ ತನ್ನ ಮಕ್ಕಳನ್ನು ಕಳುಹಿಸಬೇಕಾದರೂ ಏಕೆ? ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಅಂತಹ ನಿರ್ಣಾಯಕ ವಲಯಗಳಲ್ಲಿ ಸರ್ಕಾರ ನಡೆಸುವ ಸಂಸ್ಥೆಗಳು ಹಣಕಾಸಿನ ಕೊರತೆಯಿಂದ (ಇದು ನವ ಉದಾರವಾದಿ ತತ್ವಗಳಿಗೆ ಅನುಗುಣವಾಗಿ) ಮಾತ್ರವಲ್ಲದೆ ಗುಣಮಟ್ಟವನ್ನು ಉದ್ದೇಶಪೂರ್ವಕವಾಗಿ ನಾಶಪಡಿಸುತ್ತಿರುವುದರಿಂದಾಗಿ ಬಳಲುತ್ತಿವೆ (ಇದು ಶ್ರೀ ಭಾಗವತ್ ಮುಖ್ಯಸ್ಥರಾಗಿರುವ ಫ್ಯಾಸಿಸ್ಟ್ ತೆರನ ಸಂಘಟನೆಗಳ ಕೊಡುಗೆಯಾಗಿದೆ).

ಪರಿಣಾಮವಾಗಿ, ಶಿಕ್ಷಣವು ಶಿಥಿಲಗೊಂಡಿದೆ ಮತ್ತು ಅವ್ಯವಸ್ಥೆಯ ಗೂಡಾಗಿದೆ; ಆರೋಗ್ಯಪಾಲನೆ ವ್ಯವಸ್ಥೆಯು ಶಿಥಿಲಗೊಂಡಿದೆ ಮತ್ತು ಆಸ್ಪತ್ರೆಗಳು ಅಸ್ತವ್ಯಸ್ತಗೊಂಡಿವೆ; ಮನರೇಗ ದಂತಹ ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳೂ ಶಿಥಿಲಗೊಂಡಿವೆ ಮತ್ತು ಈ ಯೋಜನೆಯನ್ನು ಉಸಿರುಗಟ್ಟಿಸಲಾಗುತ್ತಿದೆ. 79ನೇ ಸ್ವಾತಂತ್ರ್ಯ ದಿನದಂದು, ನವ ಉದಾರವಾದ ಮತ್ತು ಅದರ ಮುಂದಿನ ಭಾಗವಾಗಿ ಫ್ಯಾಸಿಸ್ಟ್ ತೆರನ ಶಕ್ತಿಗಳು ಅಧಿಕಾರಕ್ಕೆ ಏರಿದ ಸಂಯೋಜಿತ ಪರಿಣಾಮವಾಗಿ ದೇಶವು ಒಂದು ವಿಷಾದಕರ ಗೋಜಲಿನಲ್ಲಿ ಸಿಲುಕಿದೆ. ಮೋದಿಯವರ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಯಾವುದೇ ಪರಿಹಾರ ಕ್ರಮಗಳ ಮಾತಿರಲಿ, ಇವೆಲ್ಲದರ ಸುಳಿವೂ ಸಹ ಇಲ್ಲ.

ಮತದಾನದ ಹಕ್ಕಿಗಾಗಿ ಮಹಾ ಮುಷ್ಕರ...

ಪುಟ 2 ರಿಂದ

ಈ ಸಮಯದಲ್ಲಿ ಇಂಗ್ಲೆಂಡ್ ಆರ್ಥಿಕ ಬಿಕ್ಕಟ್ಟನ್ನು ಅನುಭವಿಸುತ್ತಿತ್ತು. ಕಾರ್ಮಿಕರ ಸಂಕಟಗಳೂ ಮೇರೆ ಮೀರಿದ್ದವು. ಚಾರ್ಟರ್‌ನ ಆರು ಒತ್ತಾಯಗಳ ಜೊತೆ ಕಾರ್ಮಿಕರ ಬದುಕಿನ ಹಲವು ಒತ್ತಾಯಗಳೂ ಸೇರಿದವು.

ಸಂಸತ್ತಿಗೆ ಎರಡನೆಯ ಚಾರ್ಟರ್ ಮನವಿ

1842ರಲ್ಲಿ ಎರಡನೆಯ ಚಾರ್ಟರ್ ಮನವಿಯನ್ನು ಸಂಸತ್ತಿಗೆ ಸಲ್ಲಿಸಲು ತೀರ್ಮಾನ ಮಾಡಿದರು. ಹಲವು ಪಟ್ಟು ಹೆಚ್ಚಿದ್ದ ಸಂಘಟನೆಯ ಮೂಲಕ ಮತ್ತು ಮೇಲೆ ಹೇಳಿದಂತೆ ರೊಚ್ಚಿನಿಂದ ಹಲವು ಪಟ್ಟು ಹೆಚ್ಚು ಸಹಿ ಸಂಗ್ರಹಿಸಿದರು. ಮೇ ಎರಡರಂದು ಮಿಲಿಯಾಂತರ ಸಹಿಗಳ ಮಹಾ ಮನವಿಯ ಜೊತೆ ಐದು ಲಕ್ಷಕ್ಕೂ ಹೆಚ್ಚು ಜನ ಕೆಚ್ಚು, ನೆಚ್ಚಿನೊಂದಿಗೆ ಸಂಸತ್ತಿಗೆ ಸಾಗಿದರು. ಅಂದಿನ ಆ ಕಾರ್ಮಿಕ ಮೆರವಣಿಗೆಯ ದೃಶ್ಯವನ್ನು ಕಲ್ಪಿಸಿಕೊಂಡರೇ ರೋಮಾಂಚನವಾಗುತ್ತದೆ.

ಸರ್ಕಾರದ ಗುಮಾಸ್ತರುಗಳೇ ಸಹಿಗಳ ಲೆಕ್ಕ ಮಾಡಿದಂತೆ 33,17,752. ಮೊದಲ ಚಾರ್ಟರ್ ಮನವಿ ಸಲ್ಲಿಸಿದಾಗ ಸರ್ಕಾರಿ ಲೆಕ್ಕದ ಪರಿ ನೋಡಿದರೆ ನಿಜವಾದ ಸಂಖ್ಯೆ ಇದರ ಹಲವು ಪಟ್ಟು ಎಂಬುದರಲ್ಲಿ ಸಂಶಯವಿಲ್ಲ.

ಆಗಿನ ಇಂಗ್ಲೆಂಡ್‌ನ ಬಹು ಜನಾಭಿಪ್ರಾಯದ ಬಿಂಬವಾದ ಈ ಮಹಾ ಮನವಿಯನ್ನೂ ಅಲ್ಪ ಸಂಖ್ಯೆಯ ಜನರ ಬೆಂಬಲದಿಂದ ಆಯ್ಕೆಯಾಗಿದ್ದ ಸಂಸತ್ತು ತಿರಸ್ಕರಿತು.

ಈ ಮಹಾ ಪ್ರತಿಭಟನೆ ಮತ್ತು ಮನವಿ ಚಾರ್ಟಿಸ್ಟ್ ಸಂಘಟನೆಯ ಪ್ರಭಾವವನ್ನು ಮತ್ತಷ್ಟು ವೇಗವಾಗಿ ವಿಸ್ತರಿಸಿತು.

ಸಾರ್ವತ್ರಿಕ ಮುಷ್ಕರ :

ಮತಾಧಿಕಾರ ಪಡೆಯುವ ಬಗ್ಗೆ ಚಾರ್ಟಿಸ್ಟ್ ಕಾರ್ಮಿಕರ ಈ ಗಟ್ಟಿಯಾದ ನಿಶ್ಚಯ, ಕಾರ್ನ್ ಲಾ ರದ್ದತಿಯ ಹೋರಾಟಕ್ಕೆ ಕಾರ್ಮಿಕರನ್ನು ದೂಡುವ ಪ್ರಯತ್ನದ ವಿಫಲತೆ ಇವುಗಳು ಬಂಡವಾಳಗಾರರಲ್ಲಿ ಒಂದು ಕಡೆ ಭಯವನ್ನೂ ಮತ್ತೊಂದು ಕಡೆ ಸಿಟ್ಟನ್ನೂ ಉಂಟುಮಾಡಿದವು. ಬಂಡವಾಳಗಾರರು ತಮ್ಮ ಸಂಘಗಳಲ್ಲಿ ಚರ್ಚಿಸಿ ಕಾರ್ಮಿಕರನ್ನು ಮುಷ್ಕರಕ್ಕೆ ದೂಡಲು ಮತ್ತೆ ಸಂಚು ರೂಪಿಸಿದರು. ಆ ವೇಳೆಗೆ ಆರ್ಥಿಕ ಸ್ಥಿತಿ ಉತ್ತಮವಾಗ ತೊಡಗಿತ್ತಾದರೂ ಮೂರು ಕಾರ್ಖಾನೆಗಳ ಮಾಲೀಕರು ಇದ್ದಕ್ಕಿದ್ದಂತೆ ಕಾರ್ಮಿಕರ ವೇತನವನ್ನು ಕಡಿತ ಮಾಡಿದರು ಮತ್ತು ಕಾರ್ಖಾನೆಗಳನ್ನು ತಾವಾಗಿಯೇ ಮುಚ್ಚಿ ಆರ್ಥಿಕ ದೌರ್ಜನ್ಯ ಎಸಗಿದರು. ಕಾರ್ನ್ ಲಾ ರದ್ದತಿಗಾಗಿ ಕಾರ್ಮಿಕರು ದಂಗೆ ಏಳಬೇಕೆಂದು ಒತ್ತಾಯ ಮಾಡತೊಡಗಿದರು. ಈ ಕಾರ್ಖಾನೆಗಳ ಕಾರ್ಮಿಕರು ಕಾನೂನು ಲೆಕ್ಕದ ವೇತನ ನೀಡಲು ಒತ್ತಾಯಿಸಿದರು. 1842 ರ ಆಗಸ್ಟ್ 8 ರಂದು ಮುಷ್ಕರ ಆರಂಭವಾಯಿತು. ಆ ಪ್ರದೇಶದ ಇತರ ಮಾಲೀಕರು ಕೂಡಾ ಕಾರ್ಖಾನೆ ಗಳನ್ನು ಮುಚ್ಚಿ ಕಾರ್ಮಿಕರನ್ನು ಹೊರದೂಡಿದರು.

ಆರ್ಥಿಕ ಬಿಕ್ಕಟ್ಟಿನ ಸಂಕಟಗಳಿಂದ ಆಗಲೇ ಬಳಲಿದ್ದ ಕಾರ್ಮಿಕರು ಹೊರಬಿದ್ದು ನಗರಗಳಿಂದ ನಗರಗಳಿಗೆ, ಪ್ರದೇಶದಿಂದ ಪ್ರದೇಶಕ್ಕೆ ಸಾಗುತ್ತಾ ಕಾರ್ಖಾನೆಗಳನ್ನು ಮುಚ್ಚಿಸಿದರು. ಆರಂಭದಲ್ಲಿ ಈ ಮುಚ್ಚುವಿಕೆಗಳಿಗೆ ಮಾಲೀಕರಿಂದ ಪ್ರತಿರೋಧಗಳೇ ಇರಲಿಲ್ಲ. ಆದರೆ ನಂತರದ ದಿನಗಳಲ್ಲಿ ಮಾಲಿಕರ ಪ್ರತಿರೋಧವನ್ನು ಎದುರಿಸಿ ಕಾರ್ಮಿಕರ ಕ್ರಿಯಾಶೀಲತೆ, ಸಮರಧೀರತೆಗಳು ಇಂಗ್ಲೆಂಡಿನ ಬಹು ಭಾಗಕ್ಕೆ ಮುಷ್ಕರವನ್ನು ವಿಸ್ತರಿಸಿದವು.

ಹೀಗೆ ಆರಂಭವಾಗಿ ಹರಡಲಾರಂಭಿಸಿದ್ದ ಸಾರ್ವತ್ರಿಕ ಮುಷ್ಕರವನ್ನು ಚಾರ್ಟರ್ ಸಂಘ ತನ್ನ ರಾಷ್ಟ್ರೀಯ ಸಮಾವೇಶದಲ್ಲಿ ಬೆಂಬಲಿಸಿತು.

ಮತಾಧಿಕಾರದ ಚಾರ್ಟರ್ ಜೊತೆಗೆ ಸರಿಯಾದ ಕೂಲಿ, ಒಂದು ರೀತಿಯ ಕೆಲಸಕ್ಕೆ ಒಂದೇ ರೀತಿಯ ಕೂಲಿ, ಕೆಲಸದ ಅವಧಿಯ ಕಡಿತ, ಯಂತ್ರಗಳ ಆಧುನೀಕರಣದಿಂದ ಮಾಲೀಕರು ಗಳಿಸುವ ಲಾಭದಲ್ಲಿ ಪಾಲು ಮುಂತಾದವನ್ನು ಕೇಳತೊಡಗಿದರು. ಮುಖ್ಯವಾಗಿ 15 ಗಂಟೆಯವರೆಗೂ ಕ್ರೂರವಾಗಿ ದುಡಿಸಿಕೊಳ್ಳುತ್ತಿದ್ದ ಕೆಲಸದ ಅವಧಿಯನ್ನು ಕಡಿಮೆ ಮಾಡುವ ಕಾನೂನು, ಸಾರ್ವತ್ರಿಕ ಮತಾಧಿಕಾರದ ಹಕ್ಕನ್ನು ಜಾರಿ ಮಾಡುವ ಕಾನೂನು ಅಂಗೀಕಾರವಾಗುವವರೆಗೆ ಮುಷ್ಕರ ಮುಂದುವರೆಸುತ್ತೇವೆ ಎಂದು ಘೋಷಿಸಿದರು.

ಕಾರ್ಮಿಕರಲ್ಲಿ ಮೂಡಿದ್ದ ಎಚ್ಚರ, ಸಂಘಟನೆಯ ಬೆಳವಣಿಗೆ ಈ ಸಾರ್ವತ್ರಿಕ ಮುಷ್ಕರದಲ್ಲಿ ಪ್ರಧಾನ ಪಾತ್ರ ವಹಿಸಿತು. ಇಂಗ್ಲೆಂಡ್‌ನ 14 ಹಾಗೂ ಸ್ಕಾಟ್ಲೆಂಡಿನ 8 ಜಿಲ್ಲೆಗಳಲ್ಲಿ ಮುಷ್ಕರ ಯಶಸ್ವಿಯಾಗಿ ನಡೆಯಿತು.

ಬ್ರಿಟಿಷ್ ಆಳುವ ವರ್ಗಗಳ ಕಣ್ಣು ಕೆಂಪಗಾಗುವುದಕ್ಕೆ ಇಷ್ಟು ಸಾಲದೇ ?

ಪೋಲೀಸರು ಮಿತಿಮೀರಿದ ದೌರ್ಜನ್ಯಗಳನ್ನು ಎಸಗಿದರು. ಅದು ಸಾಲದಾಗಿ ಫ್ರೆಂಚ್ ಮೊದಲಾದ ಯುರೋಪಿನ ಸಾಮ್ರಾಜ್ಯಗಳನ್ನು, ಭಾರತದ ರಾಜ, ನವಾಬರುಗಳನ್ನು ಮಣಿಸಿ ವಿಶ್ವದ ಹಲವು ಭಾಗಗಳನ್ನು ತನ್ನ ವಶಮಾಡಿಕೊಂಡಿದ್ದ ವಿಶ್ವ ಪ್ರಸಿದ್ಧ ಬ್ರಿಟಿಷ್ ಸೈನ್ಯವನ್ನು ಕಾರ್ಮಿಕರ ಮೇಲೆ ಛೂ ಬಿಡಲಾಯಿತು.

ಕಾರ್ಮಿಕರೂ ಮಲೆತು ನಿಂತು ಪೋಲಿಸರಿಗೆ, ಸೈನ್ಯಕ್ಕೆ ಎದುರು ಬಿದ್ದರು. ಪೋಲೀಸ್ ಠಾಣೆಗಳನ್ನು ಸುಟ್ಟುಹಾಕಿದರು. ಪಡೆಗಳಿಗೆ ಆಶ್ರಯ, ಬೆಂಬಲ ನೀಡುತ್ತಿದ್ದ ಕಾರ್ಖಾನೆಗಳಿಗೂ ಹಾನಿಯಾಯಿತು. ಸ್ಥಳದಿಂದ ಸ್ಥಳಕ್ಕೆ ಸಾಗುತ್ತಾ ನಡೆದಿದ್ದ ಕಾರ್ಮಿಕರನ್ನು ನಿಯಂತ್ರಿಸಲು ಸೈನ್ಯ ದಳಗಳೂ ಕುದುರೆಗಳ ಮೇಲೆ ಧಾವಿಸಬೇಕಾಯಿತು. ಹಲವು ಕೈಗಾರಿಕಾ ಪ್ರದೇಶಗಳು ಖಾಲಿ ಖಾಲಿಯಾಗಿ ಬಿಟ್ಟವು. ಪ್ರಭುತ್ವ ಹಾಗೂ ಬಂಡವಾಳಶಾಹಿಗಳು ತಮ್ಮ ಎಲ್ಲ ಬಲ ಬಳಸಿ ಮುಷ್ಕರವನ್ನು ನಿಲ್ಲಿಸಲು ಹೆಣಗಿದರು. ಇವುಗಳ ಜೊತೆಗೆ ಮೊದಲೇ ಆರ್ಥಿಕ ಬಿಕ್ಕಟ್ಟಿನ ಸಂಕಟಗಳಿಂದ ಬಳಲಿದ್ದ ಕಾರ್ಮಿಕರು ಮುಷ್ಕರದ ಪರಿಣಾಮವಾದ ಹಸಿವಿನ ಸಂಕಟವೂ ಸೇರಿ ಹತ್ತು ಹನ್ನೆರಡು ದಿನಗಳ ನಂತರ ಮುಷ್ಕರಗಳನ್ನು ಕೈಬಿಡುತ್ತಾ ಹೋದರು. ಕೆಲವು ಕಡೆ ತಿಂಗಳ ಕಾಲವೂ ಮುಷ್ಕರಗಳು ಮುಂದುವರೆಯಿತು.

ಸಾವಿರಾರು ಕಾರ್ಮಿಕರ ಬಂಧನಗಳಾದವು. ಹಲವು ಕಾರ್ಮಿಕರನ್ನು ಆಸ್ಟ್ರೇಲಿಯಾ, ಅಮೆರಿಕಾ ಮೊದಲಾದ ಬ್ರಿಟಿಷ್ ವಸತಿ ಕಾಲೊನಿಗಳಿಗೆ ದಬ್ಬಲಾಯಿತು. ಚಾರ್ಟಿಸ್ಟ್ ಕಾರ್ಮಿಕ ನಾಯಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು. ಆನಂತರ ಚಾರ್ಟಿಸ್ಟ್ ಚಳುವಳಿ ಕುಗ್ಗುತ್ತಾ ಹೋಯಿತು. ಆದರೆ ಅದರ ಸಂಘಟನೆ, ಚಳುವಳಿ, ಚಟುವಟಿಕೆಗಳು 1850ರ ದಶಕದವರೆಗೂ ಮುಂದುವರೆದವು. 1848ರಲ್ಲಿ ಯುರೋಪಿನಾದ್ಯಂತ ಕ್ರಾಂತಿಕಾರಿ ಅಲೆ ಎದ್ದಾಗ ಮತ್ತೆ ಚಾರ್ಟಿಸ್ಟರು ಮತ್ತೊಂದು ಚಾರ್ಟರ್ ಮನವಿ ಸಲ್ಲಿಸಿದರು.

NEW No. MAG(3)/NPP/205/2021-2022
JANASHAKTHI KANNADA VARA PATRIKE September 1-7, 2025 Price: Rs. 10/- Date of Publication: 29 August 2025 RNI No. KARKAN/2006/17926 Posted on 01-09-2025
Posted at BG PSO, BG - 560026 **Posted at Periodical Rate -** Rs. 2

ಇದು 2017ರಲ್ಲಿ ಪ್ರಕಟವಾದ 'ಕ್ಯಾಸ್ಟ್ರೋ ಕತೆ' ಪುಸ್ತಕಕ್ಕೆ ಡಾ.ಕೆ.ಪ್ರಕಾಶ್ ಅವರು ಬರೆದ ದೀರ್ಘ ಮುನ್ನುಡಿ. 'ಕ್ಯಾಸ್ಟ್ರೋ ಕತೆ' ಪತ್ರಕರ್ತರೂ ಮತ್ತು ಜಾಗತಿಕ ಪರ್ಯಾಯಗಳ ಚಿಂತಕರೂ ಆದ ಇಗ್ನೇಷಿಯೊ ರಮೋನೆಟ್ ಇವರು ನಡೆಸಿದ "ಫಿಡೆಲ್ ಜೊತೆ ನೂರು ಗಂಟೆಗಳು" ಸಂದರ್ಶನದ ಪುಸ್ತಕ ಆವೃತ್ತಿಯ ("ಮೈ ಲೈಫ್: ಫಿಡೆಲ್ ಕ್ಯಾಸ್ಟ್ರೋ") ಕನ್ನಡ ಸಂಗ್ರಹಾನುವಾದ. ಫಿಡೆಲ್ ಮತ್ತು ಈ ಪುಸ್ತಕ ಎರಡನ್ನೂ ಪರಿಚಯಿಸುವ, ಅದರ ಮಹತ್ವ ಸಾರುವ ಈ ಬರಹ ಸಾರ್ವಕಾಲಿಕ ಪ್ರಸ್ತುತತೆ ಉಳ್ಳದ್ದು. ಫಿಡೆಲ್ ಕ್ಯಾಸ್ಟ್ರೋ ಅವರ ಶತಮಾನೋತ್ಸವದ ಸಂದರ್ಭದಲ್ಲಂತೂ ಜರೂರಿನ ಓದು. ಜತೆಗೆ ಈ ಪುಸ್ತಕದ ಓದು ಸಹ ಇಂದಿನ ಜರೂರಿನ ಓದು.

..... ಕಳೆದ ಸಂಚಿಕೆಯಿಂದ

ಫಿಡೆಲ್ ನಿನ್ನ ಹೆಸರದು ಸಿಡಿಲ್ ಸದ್ದು ಸಾಮ್ರಾಜ್ಯಕ್ಕೆ...

ಕೇವಲ 12 ಜನರನ್ನು ಕೊಂಡೊಯ್ಯಬಹುದಾದ ದೋಣಿಯಲ್ಲಿ 82 ಜನ ಗೆರಿಲ್ಲಾ ಸೈನಿಕರನ್ನು ತುಂಬಿಕೊಂಡು ಸಮುದ್ರ ದಾಟುವ ಕೆಲಸ ಮಾಡುವುದಕ್ಕೆ ಬರೀ ಧೈರ್ಯವಿದ್ದರೆ ಸಾಕೇ? ಕ್ರಾಂತಿ ಮಾಡಲೇಬೇಕೆಂಬ ಬದ್ಧತೆ ಮತ್ತು ತುಡಿತ: ಅದು ಫಿಡೆಲ್‌ಗಿತ್ತು....

ಡಾ. ಕೆ.ಪ್ರಕಾಶ್




ಮೆಕ್ಸಿಕೋದಲ್ಲಿ ಒಂದು ಗೆರಿಲ್ಲಾ ಸೈನ್ಯವನ್ನು ಸಂಘಟಿಸಿದರು. ಫಿಡೆಲ್‌ನ ಆತ್ಮೀಯ ಸಂಗಾತಿ 'ಚೆ' ಗೆವಾರ ಜೊತೆಯಾದದ್ದು ಅಲ್ಲಿಯೇ. ತೀವ್ರವಾದ ಸಂಕಷ್ಟಗಳನ್ನು ಎದುರಿಸಿ 'ಗ್ರಾನ್ಮಾ'ದಲ್ಲಿ ಕ್ರಾಂತಿಮಾಡಲು ಹೊರಟದ್ದು ರೋಚಕ ಕಥೆ. ಕೇವಲ 12 ಜನರನ್ನು ಕೊಂಡೊಯ್ಯಬಹುದಾದ ದೋಣಿಯಲ್ಲಿ 82 ಜನ ಗೆರಿಲ್ಲಾ ಸೈನಿಕರನ್ನು ತುಂಬಿಕೊಂಡು ಸಮುದ್ರ ದಾಟುವ ಕೆಲಸ ಮಾಡುವುದಕ್ಕೆ ಬರೀ ಧೈರ್ಯವಿದ್ದರೆ ಸಾಕೇ? ಕ್ರಾಂತಿ ಮಾಡಲೇಬೇಕೆಂಬ ಬದ್ಧತೆ ಮತ್ತು ತುಡಿತ: ಅದು ಫಿಡೆಲ್‌ಗಿತ್ತು.


ಸಿಯೆರ್ರಾ ಮೇಸ್ತ್ರದ ಬೆಟ್ಟಗುಡ್ಡಗಳಲ್ಲಿ ನಡೆದ ಬಟಿಸ್ಟಾ ಸೈನ್ಯದ ವಿರುದ್ಧ ಸಂಕ್ಲಿಷ್ಟ ದಾಳಿ ಪ್ರತಿದಾಳಿಗಳಲ್ಲಿ ಬದುಕುಳಿದವರು 12 ಜನ. ಆಗಲೂ 'ನಾವು ಕ್ರಾಂತಿ ಗೆಲ್ಲುತ್ತೇವೆ' ಎಂಬ ಅದಮ್ಯ ವಿಶ್ವಾಸ. ಅವರು ಅಂದುಕೊಂಡ ಹಾಗೆ ಕ್ಯೂಬನ್ ಜನತೆಯ ಬೆಂಬಲದೊಂದಿಗೆ, ಅಮೇರಿಕದ ಏಜೆಂಟ್ ಸರ್ವಾಧಿಕಾರಿ ಫಲ್ಗೆನ್ಸಿಯೋ ಬಟಿಸ್ಟಾನ ಪಲಾಯನದೊಂದಿಗೆ, ಕ್ರಾಂತಿ ಸಂಭವಿಸಿತು. ಕ್ಯೂಬಾ ಸಮಾಜವಾದದ ನವ ಮನ್ವಂತರಕ್ಕೆ ಕಾಲಿಟ್ಟಿತು.

ಅಮೇರಿಕ ನಡೆಸಿದ ತಂತ್ರ–ಕುತಂತ್ರಗಳಿಗೆ ಲೆಕ್ಕವೇ ಇಲ್ಲ

ಜಗತ್ತಿನ ಬೃಹತ್ ಸಾಮ್ರಾಜ್ಯಶಾಹಿ ಸಂಯುಕ್ತ ರಾಷ್ಟ್ರ ಅಮೇರಿಕ, ತನ್ನ ದಕ್ಷಿಣದ ತುದಿಯಿಂದ ಕೇವಲ 80 ಮೈಲುಗಳ ಕೂಗಳತೆಯ ದೂರದಲ್ಲಿ ಸಮಾಜವಾದಿ ರಾಷ್ಟ್ರವೊಂದರ ಅಸ್ತಿತ್ವವನ್ನು ಸಹಿಸಿಕೊಂಡೀತಾದರೂ ಹೇಗೆ? ಕೇವಲ 1 ಲಕ್ಷ ಚದರ ಕಿ.ಮೀ. ವಿಸ್ತಾರದ, ಕೇವಲ 1 ಕೋಟಿ ಜನಸಂಖ್ಯೆಯ ಪುಟ್ಟ ಕ್ಯೂಬಾ ಜಗತ್ತಿನ ಬ್ರಹ್ಮರಾಕ್ಷಸನನ್ನು ಎದುರು ಹಾಕಿಕೊಂಡ ಪರಿಯ ಸೈದ್ಧಾಂತಿಕ ಸೊಬಗನ್ನು ಬಣ್ಣಿಸುವುದು ಹೇಗೆ? ಹೇಗಾದರೂ ಫಿಡೆಲ್‌ರ ಕ್ಯೂಬಾವನ್ನು ಮಣಿಸಲೇಬೇಕೆಂದು ಅಮೇರಿಕ ನಡೆಸಿದ ದಾಳಿ, ದಬ್ಬಾಳಿಕೆ, ತಂತ್ರ–ಕುತಂತ್ರಗಳಿಗೆ ಲೆಕ್ಕವೇ ಇಲ್ಲ. 1959ರಿಂದ ಇದುವರೆಗೂ ಆಗಿಹೋದ ಅಮೇರಿಕದ ಅಧ್ಯಕ್ಷರೆಲ್ಲರೂ ಕ್ಯೂಬಾದಲ್ಲಿ ಸಮಾಜವಾದವನ್ನು ಮುಗಿಸಬೇಕೆಂದು ಮತ್ತು ಫಿಡೆಲ್‌ರನ್ನು ಕೊಲ್ಲಬೇಕೆಂದು ನಡೆಸಿದ ಪ್ರಯತ್ನಗಳಿಗೆ ಲೆಕ್ಕವಿಲ್ಲ. ಐಸೆನ್‌ಹೋವರ್, ಕೆನ್ನೆಡಿ, ಜಾನ್ಸನ್, ನಿಕ್ಸನ್, ಫೋರ್ಡ್, ಕಾರ್ಟರ್, ರೇಗನ್, ಹಿರಿಯ ಬುಷ್, ಕ್ಲಿಂಟನ್, ಕಿರಿಯ ಬುಷ್, ಹೀಗೆ ಅಮೇರಿಕದ ಹತ್ತು ಅಧ್ಯಕ್ಷರುಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಫಿಡೆಲ್ ಎದುರಿಸಿದರು. ಇವರುಗಳು ಸಿಐಎ ಮುಖಾಂತರ ಫಿಡೆಲ್‌ರನ್ನು ಕೊಲ್ಲಲು ನಡೆಸಿದ 634 ವಿಫಲ ಪ್ರಯತ್ನಗಳು ಜಾಗತಿಕ ದಾಖಲೆಯೇ ಸರಿ!

1945 ರಿಂದ ಪ್ರಾರಂಭವಾಗಿ ವಿಶ್ವದ ಅತ್ಯಂತ ಪ್ರಮುಖ ನಾಯಕರಾದ, ನೆಹರೂ, ನಾಸೆರ್, ಟಿಟೋ, ಕ್ರುಶ್ಚೇವ್, ಒಲೋಫ್ ಪಾಮೆ, ವಿಲ್ಲೀ ಬ್ರಾಂಡ್ಟ್, ಬೆನ್ ಬೆಲ್ಲಾ, ಬೊಮೇದಿಯನ್, ಅರಾಫತ್, ಇಂದಿರಾಗಾಂಧಿ, ಸಾಲ್ವಡೊರ್ ಅಲೆಂಡೆ, ಬ್ರಜ್ನೇವ್, ಗೋರ್ಬಚೇವ್, ಮಿತ್ತರಾಂಡ್, ಜಿಯಾಂಗ್





ಜೆಮಿನ್, ಎರಡನೇ ಪೋಪ್ ಜಾನ್ ಪಾಲ್, ಸ್ಪೈನ್ ರಾಜ ಜುವಾನ್ ಕಾರ್ಲೋಸ್, ನೆಲ್ಸನ್ ಮಂಡೇಲಾ, ಮುಂತಾದವರ ಜೊತೆ ಫಿಡೆಲ್‌ಗೆ ಆತ್ಮೀಯ ಮತ್ತು ಸ್ನೇಹ ಸಂಬಂಧಗಳಿದ್ದವು. ಇವರ ಸಮಕಾಲೀನ ಶ್ರೇಷ್ಠ ಬುದ್ಧಿಜೀವಿಗಳು, ಕಲಾವಿದರು ಮತ್ತು ವ್ಯಕ್ತಿಗಳಾದ, ಜೀನ್ ಪಾಲ್ ಸಾರ್ತ್ರೆ, ಸಿಮೋನ್ ದಿ ಬೋವಾ, ಅರ್ನೆಸ್ಟ್ ಹೆಮಿಂಗ್ವೇ, ಗ್ರಹಾಂ ಗ್ರೀನ್, ಅರ್ಥರ್ ಮಿಲ್ಲರ್, ಪಾಬ್ಲೋ ನೆರೂಡ, ಜಾರ್ಜ್ ಅಮಾಡೋ, ಓಸ್ವಾಲ್ಡೋ ಗ್ವಯಾಸಾಮಿನ್, ಹೆನ್ರಿ ಕಾರ್ಟಿಯರ್–ಬ್ರಸ್ಸನ್, ಆಸ್ಕರ್ ನೇಮೆಯರ್, ಜೋಸ್ ಸರಮಾಗೊ, ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್, ಕ್ಲಾಡಿಯೋ ಅಬ್ಬಾಡೊ, ಹೆನ್ರಿ ಬೆಲಫಾಂಟೆ ಏಂಜೆಲಾ ಡೇವಿಸ್, ಜೆಸ್ಸೀ ಜಾಕ್ಸನ್, ಜೆರಾರ್ಡ್ ಡೆಪಾರ್ಡ್ಯೂ, ಡ್ಯಾನಿ ಗ್ಲೋವರ್, ರಾಬರ್ಟ್ ರೆಡ್‌ಫೋರ್ಡ್, ಜಾಕ್ ನಿಕಲ್ಸನ್, ಸ್ಟೀವೆನ್ ಸ್ಪೀಲ್‌ಬರ್ಗ್, ಎಡ್ವರ್ಡೋ ಗೆಲಿಯಾನೋ, ಡೀಗೋ ಮರಡೊನಾ, ಆಲಿವರ್ ಸ್ಟೋನ್, ನೋಮ್ ಚಾಮ್‌ಸ್ಕಿ, ಇನ್ನೂ ಹಲವಾರು ಜನ ಫಿಡೆಲ್ ಜೊತೆ ನೇರ ಸ್ನೇಹ ಅಥವಾ ಪರಿಚಯ ಹೊಂದಿದ್ದರು.

'ಬೇ ಆಫ್ ಪಿಗ್ಸ್'ನಲ್ಲಿ ಪ್ರಯತ್ನ

ಕ್ರಾಂತಿಯಾದ ಎರಡೇ ವರ್ಷಗಳಲ್ಲಿ ಕ್ಯೂಬವನ್ನು ವಶಪಡಿಸಿಕೊಳ್ಳಲು ಅಮೇರಿಕದ ಮಿಲಿಟರಿ 1961ರಲ್ಲಿ 'ಬೇ ಆಫ್ ಪಿಗ್ಸ್'ನಲ್ಲಿ ಪ್ರಯತ್ನ ನಡೆಸಿತು. ಇದಕ್ಕೆ ಪ್ರತಿರೋಧವಾಗಿ ಅಂದಿನ ಸಮಾಜವಾದಿ ರಷ್ಯಾ ಕ್ಯೂಬಾದ ಪರವಾಗಿ ಕ್ಷಿಪಣಿಗಳನ್ನು ತಂದು ನಿಲ್ಲಿಸಿತು. ಇನ್ನೇನು ಮೂರನೇ ಪ್ರಪಂಚ ಯುದ್ಧ ನಡೆದೇ ಬಿಡುತ್ತದೆ ಎನ್ನುವಂತಾಗಿತ್ತು. ವಿಶ್ವಸಂಸ್ಥೆಯಲ್ಲಿ ಸಂಯುಕ್ತ ರಾಷ್ಟ್ರ ಅಮೇರಿಕದ ವಿರುದ್ಧ ಸತತವಾಗಿ ತೀರ್ಮಾನಗಳಾಗುತ್ತಿದ್ದರೂ, 90ರ ದಶಕದಲ್ಲಿ ಜಾರಿಮಾಡಿದ 'ಹೆಲ್ಮ್ಸ್–ಬರ್ಟನ್ ಆಕ್ಟ್' ಹೆಸರಲ್ಲಿ ಅದು ಆರ್ಥಿಕ ದಿಗ್ಬಂಧನಗಳನ್ನು ವಿಧಿಸಿದೆ. 2004ರಲ್ಲಿ 'ಟೊರಿಸೆಲ್ಲಿ ತಿದ್ದುಪಡಿ' ಮೂಲಕ ಕಿರುಕುಳಗಳನ್ನು ಮತ್ತಷ್ಟು ಹೆಚ್ಚಿಸಿದೆ. ಈ ದಿಗ್ಬಂಧನವು ದೇಶದ ಬೆಳವಣಿಗೆಗೆ ಅಡ್ಡಿಯಾದದ್ದು ಮಾತ್ರವಲ್ಲ, ಹಣಕಾಸು ಮತ್ತು ಆರ್ಥಿಕ ಸ್ಥಿತಿಯನ್ನು ಹಿಂಡಿಹಾಕಿದೆ. ಪರಿಣಾಮವಾಗಿ ಕ್ಯೂಬನ್ ಜನತೆ ಅಪಾರ ಕಷ್ಟಗಳನ್ನು ಅನುಭವಿಸುವಂತಾಗಿದೆ. ಕನಿಷ್ಟ ಜೀವ ರಕ್ಷಕ ಔಷಧಿಗಳನ್ನೂ ಸಿಗದ ಹಾಗೆ ಮಾಡಲಾಗಿದೆ.

ಶಾಶ್ವತವಾದ ಸೈದ್ಧಾಂತಿಕ ದಾಳಿ

ಅಮೇರಿಕವು ಕ್ಯೂಬಾದ ವಿರುದ್ಧ ಶಾಶ್ವತವಾದ ಸೈದ್ಧಾಂತಿಕ ದಾಳಿಯನ್ನು ನಡೆಸುತ್ತಿದೆ. ಫ್ಲಾರಿಡಾದಿಂದ ರೇಡಿಯೋ ಮಾರ್ತಿ ಮತ್ತು ಟಿವಿ ಮಾರ್ತಿ ಮೂಲಕ ಮಾಧ್ಯಮ ಯುದ್ಧವನ್ನು ನಡೆಸುತ್ತಿದೆ. ಕ್ಯೂಬಾ ವಿರೋಧಿ ಶಕ್ತಿಗಳಿಗೆ ಪ್ರತಿಕ್ರಾಂತಿ ನಡೆಸಲು 'ನ್ಯಾಷನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ' (NED) ಮೂಲಕ ಹಣಸಹಾಯ ಮಾಡುತ್ತಿದೆ. ಕ್ಯೂಬಾ ಮತ್ತು ಕ್ಯಾಸ್ಟ್ರೋ ಬಗ್ಗೆ ಜಗತ್ತಿನಾದ್ಯಂತ ಸುಳ್ಳು ಸುದ್ದಿಗಳನ್ನು ಹರಡಲು USAID ಮೂಲಕ ಹಲವಾರು ಪತ್ರಕರ್ತರಿಗೆ ಹಣ ನೀಡುತ್ತಿದೆ. ಫ್ಲಾರಿಡಾವನ್ನು ನೆಲೆ ಮಾಡಿಕೊಂಡು ಕ್ಯೂಬಾದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು "ಆಲ್ಫಾ 99 ಮತ್ತು ಒಮೇಗಾ 7" ಎಂಬ ಸಂಘಟನೆಗಳಿಗೆ ಹಣ ನೀಡುತ್ತಿದೆ. ಕಳೆದ 50 ವರ್ಷಗಳಲ್ಲಿ ಸುಮಾರು 3500ಕ್ಕೂ ಹೆಚ್ಚು ಕ್ಯೂಬನ್ನರನ್ನು ಭಯೋತ್ಪಾದಕ ಕೃತ್ಯಗಳ ಮೂಲಕ ಕೊಲೆ ಮಾಡಲಾಗಿದೆ. ಇದಕ್ಕಿಂತಲೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಇಂತಹ ಎಲ್ಲಾ ಸಂದರ್ಭಗಳಲ್ಲಿ ಕ್ಯಾಸ್ಟ್ರೋ ಪ್ರತಿಯಾಗಿ ಅಮೇರಿಕದ ಯಾವ ಪ್ರದೇಶದ ಮೇಲೂ, ಯಾವ ಜನರ ಮೇಲೂ ಹಿಂಸೆಯನ್ನಾಗಲೀ, ದಾಳಿಗಳನ್ನಾಗಲೀ ಸಂಘಟಿಸಿಲ್ಲ ಎಂಬುದು ಅವರ ಧೋರಣೆಗೆ ಸಾಕ್ಷಿಯಾಗಿದೆ. ಫಿಡೆಲ್ ತಮ್ಮ ತಾಯ್ನೆಲವನ್ನು ರಕ್ಷಿಸಿಕೊಳ್ಳುವುದರ ಜೊತೆಯಲ್ಲೇ ಅಮೇರಿಕದ ಜನತೆಯನ್ನು ಪ್ರೀತಿಸಿದ್ದರು. 'ನಮ್ಮದೇನಿದ್ದರೂ ಅಮೇರಿಕನ್ ಪ್ರಭುತ್ವದ ನೀತಿಗಳ ವಿರುದ್ಧವೇ ಹೊರತು ಅಮೇರಿಕನ್ ಜನತೆಯ ವಿರುದ್ಧವಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದರು.

ಎಲ್ಲರೂ ಗೌರವದಿಂದ ಬಾಳುವಂತಹ ಸಮಾಜವನ್ನು ನಿರ್ಮಿಸಲು

ಫಿಡೆಲ್ ನಾಯಕತ್ವದಲ್ಲಿ ಕ್ಯೂಬಾ ಎಲ್ಲರೂ ಗೌರವದಿಂದ ಬಾಳುವಂತಹ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿತು. ಅನಕ್ಷರತೆಯನ್ನು ತೊಡೆದುಹಾಕಲಾಯಿತು, ಸಾರ್ವತ್ರಿಕ ಉಚಿತ ಶಿಕ್ಷಣವನ್ನು ಜಾರಿಗೊಳಿಸಲಾಯಿತು, ಜಗತ್ತಿನ ಯಾವುದೇ ಮುಂದುವರಿದ ದೇಶಗಳಿಗೆ ಸವಾಲೆನಿಸುವಂತಹ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು, ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲಾಯಿತು, ಜನಾಂಗೀಯ

ಪುಟ 12 ನೋಡಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**